ಘಟಕ 1

# CBI

## ಮಕ್ಕಳ ಬೈಬಲ್ ಪರಿಶೋಧನೆ



ಸಂಡೆ ಸ್ಕೂಲ್

ಎಲ್ಲಾ ವಯಸಿನವರಿಗೆ

# ಸಿಬಿಐ:

# ಮಕ್ಕಳ ಬೈಬಲ್

# ಪರಿಶೋಧನೆ

ಸಂಡೆ ಸ್ಕೂಲ್

ಘಟಕ 1

## ಶಿಕ್ಷಕರ ಪುಸ್ತಕ

ಎಲ್ಲಾ ವಯಸಿನವರಿಗೆ (4-15 ವರ್ಷಗಳು)

ಮಕ್ಕಳೇ ಪ್ರಮುಖರು

"ಮಕ್ಕಳೇ ಪ್ರಮುಖರು" ಎನ್ನುವ ತಂಡದವರಿಗೆ ವಂದನೆಗಳು!

Chief Editor: Kristina Krauss

Creative Team: Angie Kangas, Dwight Krauss, Flor Boldo, Jennifer Sánchez Nieto, Jon Kangas, Julio Sánchez Nieto, Mike Kangas, Monserrat Duran Díaz, Rubén Darío, Suki Kangas, Verónica Toj, and Vickie Kangas.

Translation Team: Ali Atuha, Aline Xavier, Annupama Wankhede, Aroma Publications, Benjamin Gaxiola, Blessie Jetender, Blessy Jacob, Carla Mayumi, David Raju, Diana de León, Ephraim Njuguna Mirobi, Finny Jacob, Jacob Kuruvilla, Jetender Singh, Marcos Rocha, Mary Amelia Hernández, Mathew Das, Nassim Bougtaia, Paul Mwangi, Paul Septan, Rubina Rai, Sabrina Benny John, and SubtitleMe.

# ಸಿಬಿಐಗೆ ಸುಸ್ವಾಗತ ....“ಮಕ್ಕಳ ಬೈಬಲ್ ಪರಿಶೋಧನೆ”!!!

ನಿಮ್ಮ ಸಮುದಾಯದಲ್ಲಿ ಅಥವಾ ನಿಮ್ಮ ಪ್ರಾಂತ್ಯದಲ್ಲಿ ಅಥವಾ ನಿಮ್ಮ ಸಭೆಗಳಲ್ಲಿರುವ ನಿಮ್ಮ ಮಕ್ಕಳಿಗೆ ಇನ್ನೊಂದು ರೀತಿಯಾದ ವಾರದ ಬೈಬಲ್ ಅಧ್ಯಯನವು ಅಥವಾ ಇಡೀ ವರ್ಷಕ್ಕೆಲ್ಲಾ ಬೇಕಾದ ಸಂಡೆ ಸ್ಕೂಲ್ ತರಗತಿಗಳು ಕೊಡುವುದಕ್ಕೆ ನಾವು “ಮಕ್ಕಳೇ ಪ್ರಮುಖರು” ಎನ್ನುವ ಈ ಕಾರ್ಯಕ್ರಮದಲ್ಲಿ ಎಷ್ಟೋ ಸಂತೋಷವಾಗಿದ್ದೇವೆ. ಈ ಕಾರ್ಯಕ್ರಮದಲ್ಲಿ, ನಿಮ್ಮ ಮಕ್ಕಳೆಲ್ಲರೂ ಪ್ರತ್ಯೇಕವಾದ ಪ್ರತಿನಿಧಿಗಳೆಂದು ಅಥವಾ ಪರಿಶೋಧಕರೆಂದು ಊಹಿಸಿಕೊಳ್ಳುವರು ಮತ್ತು ಪ್ರತಿಯೊಂದು ವಾರ ಪರಿಷ್ಕಾರ ಮಾಡುವುದಕ್ಕೆ ಅವರಿಗೆ ಒಂದೊಂದು ಕೇಸನ್ನು ಕೊಡಲಾಗುತ್ತದೆ. ದೂರದರ್ಶನದಲ್ಲಿ (ಟಿವಿಯಲ್ಲಿ) “ಸಿಬಿಐ” ಎನ್ನುವ ಕಾರ್ಯಕ್ರಮಗಳು ಬರುತ್ತಿರುವಂತೆಯೇ, ನಿಮ್ಮ ವಿದ್ಯಾರ್ಥಿಗಳು ಪೋಲೀಸ್ ಪರಿಶೋಧಕರಾಗಿಯೂ ಮತ್ತು ಪ್ರತಿಯೊಂದು ಕೇಸನ್ನು ಪರಿಷ್ಕಾರ ಮಾಡುವುದಕ್ಕೆ ಫೋಟೋಗಳನ್ನು ತೆಗೆಯುವ, ಪ್ರಯೋಗಗಳನ್ನು ಮಾಡುವ ವಿಜ್ಞಾನ ತಂತ್ರಜ್ಞರಾಗಿ (ಸೈನ್ಸ್ ಟೆಕ್ನಿಶಿಯನ್ಸ್) ಇರುವರು. ನಿಮ್ಮ ಉಪಾಧ್ಯಾಯರೆಲ್ಲರು ಪೋಲೀಸ್ ಪರಿಶೋಧಕರ ಮತ್ತು ವಿಜ್ಞಾನ ತಂತ್ರಜ್ಞರ (ಸೈನ್ಸ್ ಟೆಕ್ನಿಶಿಯನ್ಸ್) ವಸ್ತ್ರಗಳನ್ನು ಧರಿಸಿಕೊಳ್ಳಲು ಹೇಳಿರಿ. ಅನೇಕ ವರ್ಷಗಳ ಹಿಂದೆ ನಾನು ಸಂಡೇ ಸ್ಕೂಲಿನಲ್ಲಿ ಬೋಧಿಸುತ್ತಿರುವಾಗ, ಪಾಸ್ತರ್ ಮಕ್ಕಳು ಮತ್ತು ಸಭೆಗೆ ಬರುವ ವಿಶ್ವಾಸಿಗಳ ಮಕ್ಕಳು ಸತ್ಯವೇದದಲ್ಲಿರುವ ಎಲ್ಲಾ ಸಾಧಾರಣ ಕಥೆಗಳನ್ನೆಲ್ಲಾ ತಿಳಿದುಕೊಂಡಿದ್ದರು. ಒಂದುವೇಳೆ ನಾನು ನೋವನ ನಾವೆಯ ಕಥೆಯನ್ನಾಗಲಿ ಅಥವಾ ಯೋನ ಮತ್ತು ಮೀನಿನ ಕಥೆಯನ್ನಾಗಲಿ ಹೇಳುವುದಕ್ಕೆ ಆರಂಭಿಸಿದಾಗ, ಮಕ್ಕಳೆಲ್ಲರೂ ನರಳುತ್ತಾ ಮುಲುಕುತ್ತಾ ಇರುತ್ತಿದ್ದರು. ಯಾಕಂದರೆ, ಆ ಕಥೆಗಳೆಲ್ಲಾ ಅವರಿಗೆ ಚೆನ್ನಾಗಿ ಗೊತ್ತು. ನಾನು ತರಗತಿ ತೆಗೆದುಕೊಳ್ಳುವ ವಿಧಾನವನ್ನು ಮಾರ್ಪಾಟು ಮಾಡಿಕೊಳ್ಳುವುದಕ್ಕೆ ಆರಂಭಿಸಿದೆ, ಆದರೆ ಅದು ಅನಿವಾರ್ಯವಾಗಿ ಅದಕ್ಕೆ ಮುಂದಿನ ತರಗತಿಯ ವಿಧಾನಕ್ಕೆ ಹೋಲುವಂತಿತ್ತು; ನನ್ನ ವಿದ್ಯಾರ್ಥಿಗಳೆಲ್ಲರೂ ತುಂಬಾ ಬೇಸರಗೊಳ್ಳುತ್ತಿದ್ದರು. ಈ ಸಮಸ್ಯೆಯನ್ನು ಗುರುತಿಸಿ, “ಮಕ್ಕಳೇ ಪ್ರಮುಖರು” ಸಿಬ್ಬಂದಿಯೆಲ್ಲರು ಒಂದು ಹೊಸ ಆಲೋಚನೆಯನ್ನು ಪಡೆದುಕೊಂಡರು, ಅದೇನಂದರೆ ಉಪಾಧ್ಯಾಯರೆಲ್ಲರು ಮಕ್ಕಳಿಗೆ ಕಥೆಯನ್ನು ಹೇಳಬಾರದು! ಅದರ ಬದಲಾಗಿ, ನಿಮ್ಮ ವಿದ್ಯಾರ್ಥಿಗಳೆಲ್ಲರು ಕೇಸನ್ನು ಪರಿಷ್ಕರಿಸಬೇಕು, ಮತ್ತು ಪ್ರತೀ ವಾರ ಅವರು ಯಾವ ಕಥೆಯನ್ನು ಕಲಿಯುತ್ತಿದ್ದಾರೋ ಅದನ್ನು ಹೇಳಬೇಕು! ಇದರ ಅರ್ಥವೇನಂದರೆ, ನಿಮ್ಮ ಮಕ್ಕಳು ಆ ಕಥೆ ಯಾವುದೆಂದು ಕಂಡುಕೊಳ್ಳುವವರೆಗೂ ನಿಮ್ಮ ಮಕ್ಕಳನ್ನು ನಿಮಗೆ ಕೊಡಲ್ಪಡುವ ಉಪಾಧ್ಯಾಯರ ಕೈಪಿಡಿಯನ್ನು, ಅಥವಾ ಸೂಚನೆಗಳಿಗೆ (ಕ್ಲುಗಳಿಗೆ) ಉತ್ತರಗಳನ್ನು ನೋಡುವುದಕ್ಕೆ ಅನುಮತಿಸಬಾರದು. ಮಕ್ಕಳು ಕಥೆಯನ್ನು ಕಂಡುಕೊಳ್ಳುವುದಕ್ಕೆ ಅವರಿಗೆ ಪ್ರೋತ್ಸಾಹ ಕೊಡುವುದಕ್ಕೆ ನಿಮಗೆ ಪ್ರತೀ ವಾರ 5 ಸೂಚನೆಗಳನ್ನು (ಕ್ಲುಗಳನ್ನು) ಕೊಡಲಾಗುತ್ತದೆ. ಮಕ್ಕಳು ಆ ಸೂಚನೆಗಳನ್ನೂ (ಕ್ಲುಗಳನ್ನು) ನೋಡುತ್ತಿರುವಾಗ, ಯಾವುದನ್ನು ನಿಶ್ಚಯಗೊಳಿಸಬೇಡಿರಿ ಅಥವಾ ಯಾವುದನ್ನು ಉಪೇಕ್ಷಿಸಬೇಡಿರಿ, ಅದರಿಂದ ತರಗತಿಯ ಮೊದಲ ಆರಂಭ ಕ್ಷಣಗಳಲ್ಲಿ ಬೈಬಲ್ ಕಥೆಯನ್ನು ಕಂಡುಕೊಳ್ಳುವುದರಲ್ಲಿ ಪ್ರತಿಯೊಬ್ಬರೂ ತುಂಬಾ ಹೆಚ್ಚಾಗಿ ಸಂತೋಷಪಡುತ್ತಾರೆ.

ಕೇಸ್ ಪರಿಷ್ಕಾರವಾದ ಕೂಡಲೇ, ನೀವು ಸಂಡೇ ಸ್ಕೂಲ್ ತರಗತಿಯ ಸಾಧಾರಣ ಭಾಗಗಳು ಇರುತ್ತವೆ, ಆಗ ಕೆಲವೊಂದು ವಿನೋದದಿಂದ ಕೂಡಿರುವ ಚಟುವಟಿಕೆಗಳಿರುತ್ತವೆ. ಪ್ರತೀ ವಾರ ನಾವು ಒಂದು ಆಟವನ್ನು, ಚರ್ಚೆಯ ಪ್ರಶ್ನೆಗಳನ್ನು, ಪಜಿಲ್.ಗಳು ಮತ್ತು ಬಣ್ಣ ಹಚ್ಚುವಿಕೆ ಚಟುವಟಿಕೆಗಳಿರುವ ವಿದ್ಯಾರ್ಥಿ ಪುಟಗಳು ಮತ್ತು "ಡಾ. ಲೂಕಸ್" ಎಂದು ಕರೆಯಲ್ಪಡುವ ದೊಡ್ಡ ವಿಜ್ಞಾನಿಯೊಂದಿಗೆ ವಿನೋದಾತ್ಮಕವಾದ ವಿಜ್ಞಾನ ಪ್ರಯೋಗಗಳು ಇರುತ್ತವೆ. ತರಗತಿಯಲ್ಲಿಯೇ ನೀವು ಪ್ರಯೋಗಗಳನ್ನು ಮಾಡಬಹುದು, ಅಥವಾ ನಾವು ತಯಾರು ಮಾಡಿರುವ ವಿಡಿಯೋಗಳನ್ನೂ ನೀವು ಉಪಯೋಗಿಸಬಹುದು.

ನಮ್ಮ ಸೇವೆಯಲ್ಲಿ ಯಾವಾಗಲೂ ಇರುವಂತೆಯೇ, ಈ ವರ್ಷದ ಕಾರ್ಯಕ್ರಮದ ಸಮಾಚಾರವೆಲ್ಲಾ ನಿಮಗೆ ಉಚಿತವಾಗಿ ಕೊಡಲ್ಪಡುವುದು. ನೀವು ಗ್ರಾಮೀಣ ಪ್ರಾಂತ್ಯದಲ್ಲಿದ್ದರೂ, ಉಪಾಧ್ಯಾರಾಯರಾಗಿರುವವರು ಇಂಟರ್ನೆಟ್.ನಿಂದ ಪುಸ್ತಕಗಳನ್ನು ಡೌನ್.ಲೋಡ್ ಮಾಡಿಕೊಳ್ಳಬಹುದು ಮತ್ತು ನೀವು ವಿದ್ಯಾರ್ಥಿ ಪುಟಗಳನ್ನು ಕಾಪಿ ಮಾಡಿಕೊಳ್ಳಬಹುದೋ ಇಲ್ಲವೋ ಎಂದು ತಿಳಿದುಕೊಳ್ಳಬಹುದು. "ಮಕ್ಕಳ ಬೈಬಲ್ ಪರಿಶೋಧನೆ"ಯಲ್ಲಿ ತುಂಬಾ ಹೆಚ್ಚು ಚಟುವಟಿಕೆಗಳಿವೆ. ಆದ್ದರಿಂದ ವಿದ್ಯಾರ್ಥಿ ಪುಸ್ತಕಗಳನ್ನು ಬಳಸಬಾರದೆಂದು ನೀವು ತೀರ್ಮಾನಿಸಿಕೊಂಡರೂ, ನಿಮ್ಮ ಪರಿಸ್ಥಿತಿಗಳಿಗೆ ಅವು ಉಪಯೋಗವಾಗುತ್ತವೆ. ಈ ಕಾರ್ಯಕ್ರಮವನ್ನು ಮಾಡುವುದಕ್ಕೆ ನಿಮಗೆ ಇಂಟರ್ನೆಟ್ ಬೇಕಾಗಿರುವುದಿಲ್ಲ! ಒಬ್ಬರು ಒಂದು ಸಮಯವನ್ನುಂಟು ಮಾಡುತ್ತಾರೆ, ಬೇಕಾದವುಗಳನ್ನು ಸಭೆಯ ಸ್ಥಳಕ್ಕೆ ತರುತ್ತಾರೆ. ಅದನಂತರ ನಿಮ್ಮ ಸೇವೆಯು ಹೇಗೆ ಬೆಳೆಯುತ್ತದೆಯೆಂದು ನೀವು ನೋಡಿರಿ!

ಅತ್ಯುತ್ಸಾಹಕವಾದ, ಹೊಸದಾದ ಈ ಕಾರ್ಯಕ್ರಮದೊಂದಿಗೆ ನಾವೆಲ್ಲರು ಸೇರಿ, ಸಂಡೇ ಸ್ಕೂಲಿನೊಳಗೆ ಧುಮುಕೋಣ1 ಸಿಬಿಐ ಎಲ್ಲಾ 3 ಘಟಕಗಳಲ್ಲಿರುವ ಈ 39 ಪಾಠಗಳಲ್ಲಿ ದಾವೀದ, ಗೊಲ್ಯಾತ್, ಎಸ್ತೇರಳು, ಸೃಷ್ಟಿ, ಯೇಸು ಕ್ರಿಸ್ತನ ಪುನರುತ್ಥಾನ, ವಿಶ್ವಾಸ ಮತ್ತು ಇನ್ನೂ ಅನೇಕ ವಿಷಯಗಳ ಕುರಿತಾಗಿ ನಿಮ್ಮ ವಿದ್ಯಾರ್ಥಿಗಳು ಕಲಿತುಕೊಳ್ಳುತ್ತಾ ಇರುತ್ತಾರೆ. ನೀವು ನಿಮ್ಮ ತರಗತಿಯನ್ನು ವಿನೋದಾತ್ಮಕವಾಗಿ ಮತ್ತು ಉತ್ಸಾಹಕರವಾಗಿ ಮಾಡಬೇಕೆಂದು ನಿಮಗೆ ನಾನು ಸವಾಲು ಬೀಸುತ್ತಿದ್ದೇನೆ! ಸೃಜನಾತ್ಮಕವಾಗಿ ಲ್ಯಾಬ್ ಕೋಟು, ವಿಜ್ಞಾನದ ಪ್ರಯೋಗಗಳನ್ನುಂಟು ಮಾಡಿರಿ ಮತ್ತು "ಅಪರಾಧ ಸನ್ನಿವೇಶವನ್ನು" ತೋರಿಸುವುದಕ್ಕೆ ಹಳದಿ ಟೇಪ್ ಬಳಸುವುದು, ಇದನ್ನು ನಾವು "ಬೈಬಲ್ ಸನ್ನಿವೇಶ" ಎಂದು ಕರೆಯುತ್ತೇವೆ. ಈ ವರ್ಷದಲ್ಲಿ ನಿಮ್ಮ ವಿದ್ಯಾರ್ಥಿಗಳೆಲ್ಲರು ಹೆಚ್ಚಿನ ವಿನೋದವನ್ನು ಪಡೆಯುತ್ತಾರೆ!

ಒಂದು ಹೊಸದಾದ, ಉತ್ಸಾಹವನ್ನುಂಟು ಮಾಡುವ ವಿಧಾನದಲ್ಲಿ ನಿಮ್ಮ ಮಕ್ಕಳಿಗೆ ನೀವು ಸೇವೆ ಮಾಡುತ್ತಿರುವಾಗ ದೇವರು ನಿಮ್ಮನ್ನು ಹೆಚ್ಚಾಗಿ ಆಶೀರ್ವಾದ ಮಾಡಲಿ!

ಕ್ರಿಸ್ತನಲ್ಲಿ ನಿಮ್ಮ ಸಹೋದರಿ,
ಕ್ರಿಸ್ಟಿನಾ ಕ್ರಾಸ್



# --[ ಹೇಗೆ ಉಪಯೋಗಿಸಬೇಕು?]——



ವಿನೋದಾತ್ಮಕವಾದ ಪರಿಶೋಧನ ಬೈಬಲ್ ಕಾರ್ಯಕ್ರಮಕ್ಕೆ ಸುಸ್ವಾಗತ! ನಿಮ್ಮ ವಿದ್ಯಾರ್ಥಿಗಳನ್ನು ನೀವು ತರಬೇತಿಗೊಳಿಸುವಿರೆಂದು ನಮಗೆ ನಿರೀಕ್ಷೆಯುಂಟು. ಅದೇ ಸಮಯದಲ್ಲಿ, ಎಲ್ಲರು ಸೇರಿ ತುಂಬಾ ಹೆಚ್ಚಾದ ವಿನೋದವನ್ನು ಪಡೆಯಿರಿ! ಈ ಕಾರ್ಯಕ್ರಮವನ್ನು ನೀವು ಮಕ್ಕಳಿಗಾಗಿ ವಾರದ ಬೈಬಲ್ ಮಿನಿಸ್ತ್ರೀ ಎಂದಾಗಲಿ, ಮಕ್ಕಳ ಸಭೆ ಎಂದಾಗಲಿ ಅಥವಾ ಸಂಡೇ ಸ್ಕೂಲ್ ಎಂದಾಗಲಿ ಉಪಯೋಗಿಸಿಕೊಳ್ಳಬಹುದು. ನಮ್ಮ ವೆಬ್.ಸೈಟ್.ನಲ್ಲಿ ದೃಶ್ಯ ಸಾಧನೆಗಳು ಲಭ್ಯದಲ್ಲಿವೆ. ಆದುದರಿಂದ ಪ್ರತಿಯೊಂದು ಚಿತ್ರವನ್ನು ದೊಡ್ಡದಾಗಿ ತೋರಿಸಬಹುದು, ಅಥವಾ ನಿಮ್ಮ ಮೊಬೈಲ್ ಫೋನ್ ಮೂಲಕ ವಿದ್ಯಾರ್ಥಿಗಳಿಗೆ ತೋರಿಸಬಹುದು. ಈ ಪಠ್ಯಕ್ರಮದ 3 ಘಟಕಗಳನ್ನು (ಅಥವಾ ವಿಭಾಗಗಳನ್ನು) ಓದಿ ಸಂತೋಷ ಪಡುತ್ತೀರೆಂದು ನಾವು ನಿರೀಕ್ಷಿಸುತ್ತಿದ್ದೇವೆ. ಇದು ನಿಮಗೆ 9 ತಿಂಗಳುಗಳ ತರಗತಿಗಳನ್ನು  ಕೊಡುತ್ತದೆ. ಈ ಮೊದಲನೇ ಘಟಕದಲ್ಲಿ 13 ಪಾಠಗಳಿರುತ್ತವೆ ಮತ್ತು ಇನ್ನುಳಿದ 2 ಘಟಕಗಳಲ್ಲಿ (ವಿಭಾಗಗಳಲ್ಲಿ) 39 ಪಾಠಗಳನ್ನು ನೀವು ಹೊಂದಿಕೊಳ್ಳುವಿರಿ.

## ಶಿಫಾರಸು ಮಾಡುವ ವೇಳಾಪಟ್ಟಿ (2-2 1/2 ಗಂಟೆಗಳು)

- 5 ಸೂಚನೆಗಳೊಂದಿಗೆ ಪರಿಚಯ (25 ನಿಮಿಷಗಳು)
    - ಅಂಶ (3 ನಿಮಿಷ)
    - ನಾಟಕ (10 ನಿಮಿಷ)
    - ವಸ್ತು (3 ನಿಮಿಷ)
    - ಪುರಾತನ ವಸ್ತು ಶಾಸ್ತ್ರ (2 ನಿಮಿಷ)
    - ಬೈಬಲ್ ಸನ್ನಿವೇಶ (7 ನಿಮಿಷ)
- ಮುಖ್ಯ ಪಾಠದ ಸಮಯ (35 ನಿಮಿಷ)
    - ಬೈಬಲ್ ಕಥೆ / ಕೇಸ್ ಪರಿಷ್ಕಾರ ಮಾಡಲಾಗಿದೆ (13 ನಿಮಿಷ)
    - ಅನ್ವಯ (2 ನಿಮಿಷ)
    - ಕಂಠಪಾಠ ವಾಕ್ಯ ಕಲಿತುಕೊಳ್ಳುವುದು (15 ನಿಮಿಷ)
    - ಮನೆಗೆಲಸ (3 ನಿಮಿಷ)
    - ದೇವರ ಡಿ.ಎನ್.ಎ. (2 ನಿಮಿಷ)
- ವಿನೋದ ಸಮಯ (1 ಗಂಟೆ)
    - ಆಟ (15 ನಿಮಿಷ)
    - ಚರ್ಚೆ (15 ನಿಮಿಷ)
    - ವಿದ್ಯಾರ್ಥಿ ಪುಸ್ತಕಗಳು (15 ನಿಮಿಷ)



    ○ ಲೂಕಸ್ ವಿಜ್ಞಾನ ಪ್ರಯೋಗ (15 ನಿಮಿಷ)
- "ಯಾರೆಂದು ಕಂಡುಹಿಡಿಯಿರಿ (ಗೆಸ್ ವೂ)" ಎನ್ನುವ ಆಟ (ಕಡ್ಡಾಯವಲ್ಲ) (30 ನಿಮಿಷ)



## ಸೂಚನೆಗಳು!

ಕೇಸನ್ನು ಪರಿಷ್ಕಾರ ಮಾಡಲು ನಿಮ್ಮ "ಪರಿಶೋಧಕರಿಗೆ" ಐದು ಸೂಚನೆಗಳೊಂದಿಗೆ ನಿಮ್ಮ ತರಗತಿಯನ್ನು ಪ್ರಾರಂಭಿಸಿಕೊಳ್ಳಿರಿ. ಇದಕ್ಕೆ ನಿಮಗೆ 5 ರಿಂದ 15 ನಿಮಿಷಗಳ ಸಮಯ ಬೇಕಾಗುತ್ತಿರಬಹುದು. ವಿನೋದವೆಲ್ಲ ನಿಮ್ಮ ಮೇಲೆಯೇ ಆಧಾರಪಟ್ಟಿರುತ್ತದೆ! ಪ್ರತಿಯೊಂದು ಪಾಠಕ್ಕೆ 5 ಸೂಚನೆಗಳಿರುತ್ತವೆ. ಆ ಸೂಚನೆಗಳನ್ನು ನೀವು ನಿಮ್ಮ ಮೊಬೈಲ್.ನಲ್ಲಿ ಉಪಯೋಗಿಸಿಕೊಳ್ಳಬಹುದು ಅಥವಾ ತಿಳಿಯಪಡಿಸುವುದಕ್ಕೆ ತರಗತಿಯಲ್ಲಿಗೆ ಆ ಸೂಚನೆಗಳನ್ನು ಉಂಟುಮಾಡಬಹುದು.

### 1 ಸೂಚನೆ #1 ಅಂಶ

ಮೊಟ್ಟಮೊದಲನೇ ಸೂಚನೆ ಏನೆಂದರೆ ಪಾಠಕ್ಕಾಗಿ ಕೊಡಲ್ಪಟ್ಟ ಅಂಶವಾಗಿರುತ್ತದೆ. ಅಂಶವನ್ನು ವಿದ್ಯಾರ್ಥಿಗಳೆಲ್ಲರು ಓದಬೇಕು ಅಥವಾ ಅದನ್ನು ನೋಡುವುದಕ್ಕೆ ಅವರು ಒಂದು ಕಾಗದ ಮೇಲೆ ಮುದ್ರಣ ತೆಗೆದುಕೊಳ್ಳಬಹುದು ಉದಾಹರಣೆಗೆ, ದಾವೀದ ಮತ್ತು ಗೊಲ್ಯಾತರ ಮೇಲೆ ಪಾಠ ಇದೆಯೆಂದು ತಿಳಿದುಕೊಳ್ಳೋಣ, ಅದಕ್ಕೆ "ಮೊಂಡಾದ ಶಕ್ತಿಗೆ ಆಘಾತ" ಎಂದು ಕರೆಯಬಹುದು. ಮೊಂಡಾದ ಶಕ್ತಿಗೆ ಆಘಾತ ಎನ್ನುವುದು ದಾವೀದನು ಒಂದು ನದಿಯೊಳಗಿನಿಂದ ಕಲ್ಲನ್ನು ತೆಗೆದುಕೊಂಡು ಗೊಲ್ಯಾತನ ಹಣೆಯ ಮೇಲೆ ಹೊಡೆದು ಸಾಯಿಸಿದ್ದನ್ನು ಸೂಚಿಸುತ್ತದೆ. ಪರಿಶೋಧಕರು ಮತ್ತು ಫೋರನ್ಸಿಕ್ ವಿಶ್ಲೇಷಕರಿಂದ ತೆಗೆಕೊಂಡಿರುವ ಪದಗಳು ನಿಮ್ಮ ಬೈಬಲ್ ತರಗತಿಗೆ ವಿನೋದವನ್ನು ಕೊಡುತ್ತವೆ. ನಿಮ್ಮ ಉಪಾಧ್ಯಾಯ ಪುಸ್ತಕವನ್ನು ವಿದ್ಯಾರ್ಥಿಗಳಿಗೆ ತೋರಿಸಬಾರದೆಂದು ನೆನಪಿಟ್ಟುಕೊಳ್ಳಿರಿ. ಅದರಿಂದ ಅವರು ಮೋಸಮಾಡುವುದಿಲ್ಲ ಮತ್ತು ಬೈಬಲ್ ಕಥೆಯನ್ನು ನೋಡುವುದಿಲ್ಲ.

### 2 ಸೂಚನೆ #2 ನಾಟಕ



ಪ್ರತೀ ವಾರ ಒಂದು ನಾಟಕಕ್ಕೆ ಎರಡನೇ ಸೂಚನೆಯನ್ನು ಕೊಡಲಾಗಿದೆ. ನಿಮ್ಮ ಉಪಾಧ್ಯಾಯರು ಈ ಕಥೆಯನ್ನು ನಾಟಕ ಮಾಡಿ ತೋರಿಸಬೇಕು ಅಥವಾ ನಿಮ್ಮ ವಿದ್ಯಾರ್ಥಿಗಳು ನಾಟಕ ಮಾಡಿ ತೋರಿಸಬಹುದು. ಬೈಬಲ್ ಕಥೆಯನ್ನು ಸಂಪೂರ್ಣವಾಗಿ ತಿಳಿಸಿದೇ ನಾಟಕ ರೂಪದಲ್ಲಿ ಕೊಡುವುದೇ ಇನ್ನೊಂದು ಆಲೋಚನೆ. ಗೊಲ್ಯಾತ ಮತ್ತು ದಾವೀದ ಮೇಲಿನ ಪಾಠದಲ್ಲಿ, ಸೈನಿಕನು ಮನೆಗೆ ಬಂದು, ತನ್ನ ಹೆಂಡತಿಯೊಂದಿಗೆ ಮಾತನಾಡುತ್ತಿರುತ್ತಾರೆ. ಸೈನಿಕನು ಫಿಲಿಸ್ತಿಯನ್ ಆಗಿರುತ್ತಾನೆ ಮತ್ತು ಅವರು ಹೇಗೆ ಯುದ್ಧದಲ್ಲಿ ಸೋತಿದ್ದಾರೆಂದು ಮಾತನಾಡುತ್ತಿರುತ್ತಾನೆ. ಅವರು "ಬಲವಾಗಿರುವ" ಒಬ್ಬ ಮನುಷ್ಯನನ್ನು ಸೂಚಿಸುತ್ತಾರೆ ಮತ್ತು ತನ್ನ ಸಹೋದರನು ಕೂಡ ದೊಡ್ಡವನಾಗಿರುತ್ತಾನೆ. (ಗೊಲ್ಯಾತನ ಹೆಸರು ಹೇಳದಂತೆ ವ್ಯವಹರಿಸಬೇಕು). ಗೊಲ್ಯಾತನಿಗೆ "ಬಲವಾಗಿರುವ" ಒಬ್ಬ ತಮ್ಮನಿದ್ದಾನೆಂದು ಬೈಬಲ್ ಹೇಳುವುಡಿಲ್ಲ, ಇದು ಕೇವಲ ಬೈಬಲ್ ಕಥೆಯನ್ನು ನಿಮ್ಮ ವಿದ್ಯಾರ್ಥಿಗಳು ಕಂಡುಕೊಳ್ಳುವುದಕ್ಕೆ ಮಾತ್ರ ಮಾಡುತ್ತಿರುವ ವಿನೋದಾತ್ಮಕವಾದ ನಾಟಕವಷ್ಟೇ.



## ಸೂಚನೆ #3 ವಸ್ತು

ಪ್ರತಿಯೊಂದು ಪಾಠಕ್ಕಾಗಿ ನೀವು ತರಗತಿಗೆ ತೆಗೆದುಕೊಂಡು ಬರಬೇಕಾದ ಒಂದು ವಸ್ತುವು ಇರುತ್ತದೆ. ಇದು ನಿಮ್ಮ ವಿದ್ಯಾರ್ಥಿಗಳು ಮುಟ್ಟಿಕೊಳ್ಳುವ ಭೌತಿಕವಾದ ವಸ್ತುವಾಗಿರುತ್ತದೆ. ಇದು ಬೈಬಲ್ ಕಥೆ ಏನಾಗಿರುತ್ತದೆಯೆಂದು ಅವರು ಕಂಡು ಹಿಡಿಯುವುದಕ್ಕೆ ಸಹಾಯ ಮಾಡುತ್ತದೆ. ಉದಾಹರಣೆಗೆ, ನಿಮಗೆ ಕೊಟ್ಟಿರುವ ಪಾಠದಲ್ಲಿ, ತರಗತಿಗೆ ತೆಗೆದುಕೊಂಡು ಬರಬೇಕಾದ ವಸ್ತುವು 5 ಕಲ್ಲುಗಳೆಂದು ಹೇಳಲ್ಪಟ್ಟಿದೆ. ಈ ಕಲ್ಲುಗಳನ್ನು ವಿದ್ಯಾರ್ಥಿಗಳು ನೋಡಿದಾಗ, ದಾವೀದನು ನದಿಯ ಬಳಿ 5 ಕಲ್ಲುಗಳನ್ನು ತೆಗೆದುಕೊಂಡಿರುವ ಕಥೆಯನ್ನು ಈ ಸಮಯದಲ್ಲಿ ವಿದ್ಯಾರ್ಥಿಗಳು ಕಂಡುಹಿಡಿದರೆ, ಅದನ್ನು ಒಪ್ಪಿಕೊಳ್ಳಬೇಡಿರಿ ಅಥವಾ ತಿರಸ್ಕರಿಸಬೇಡಿರಿ. ಹಾಗೆಯೇ ನೀವು ನಿಮ್ಮ ವಿದ್ಯಾರ್ಥಿಗಳಿಗೆ ಸುಳ್ಳು ಕೂಡ ಹೇಳಬಾರದು, ಆದರೆ ನೀವು ಸಾಧ್ಯವದಷ್ಟು ಸಮಯ ವಿದ್ಯಾರ್ಥಿಗಳು ಇದು ಯಾವ ಕಥೆಯೆಂದು ಪ್ರಶ್ನಿಸುವುದನ್ನು ಮುಂದೆವರಿಸಿರಿ.

## ಸೂಚನೆ #4

## ಪುರಾತನ ವಸ್ತು ಶಾಸ್ತ್ರ




ಪ್ರತಿಯೊಂದು ಪಾಠಕ್ಕೆ ನಾಲ್ಕನೆಯ ಸೂಚನೆ ಏನಂದರೆ ಪುರಾತನ ವಸ್ತು ಶಾಸ್ತ್ರದ ಚಿತ್ರವಾಗಿರುತ್ತದೆ. ಇಲ್ಲಿ ಕೊಟ್ಟಿರುವ ಚಿತ್ರವು, ಈಗಿನ ಗಾತ್ ಪಟ್ಟಣದ ಆಧುನಿಕ ಚಿತ್ರ. ಇದೀಗ ಟೆಲ್ ಜಫಿಟ್ ನ್ಯಾಷನಲ್ ಪಾರ್ಕ್.ನೊಳಗೆ ಕಂಡು ಬರುತ್ತದೆ. (ರಹಸ್ಯ: ಗೊಲ್ಯಾತನ ಊರು ಫಿಲಿಷ್ಟಿನ್ ಪಟ್ಟಣ.) ನೀವು ಈ ಚಿತ್ರವನ್ನು ತೋರಿಸಿ, ರಹಸ್ಯದ ಮಾತು ಹೇಳದಂತೆ, ಇದು ಪುರಾತನದ ಗಾತ್ ಪಟ್ಟಣದ ಚಿತ್ರವೆಂದು ಹೇಳಬೇಕು. ಅನೇಕ ಜನರಿಗೆ ಗೊಲ್ಯಾತನ ಹುಟ್ಟಿದ ಊರು ಗಾತ್ ಎಂಬುವ ವಿಷಯ ಗೊತ್ತಿರುವುದಿಲ್ಲ. ಆದ್ದರಿಂದ ನಿಮ್ಮ ಪಾಠವು ಇನ್ನೂ ರಹಸ್ಯವಾಗಿರುತ್ತದೆ!

## ಸೂಚನೆ #5 ಬೈಬಲ್ ಸನ್ನಿವೇಶ



ಪ್ರತೀವಾರ ಕೊನೆಯ ಸೂಚನೆಯು ಬೈಬಲ್ ಸನ್ನಿವೇಶವಾಗಿರುತ್ತದೆ. ನಿಮ್ಮ ಪರಿಶೋಧಕರು ಪರಿಶೋಧನೆ ಮಾಡುವುದಕ್ಕೆ ಅಪರಾಧ ಸನ್ನಿವೇಶದಂತೆ ಕಾಣಿಸಿಕೊಳ್ಳುವ ರೀತಿಯಲ್ಲಿ ನೀವೇ ಸೃಷ್ಟಿಸಬೇಕು.




ಉದಾಹರಣೆಗೆ, ಅನನೀಯ ಮತ್ತು ಸಪ್ಫೀರಳು ದೇವರಿಗೆ ಸುಳ್ಳು ಹೇಳಿರುವ ಪಾಠದಿಂದ ನೀವು ಬೈಬಲ್ ಸನ್ನಿವೇಶವನ್ನು ಬರೆಯಬಹುದು. ನೀವು ನಿಮ್ಮ ಮಕ್ಕಳು ಪರಿಶೋಧನೆ ಮಾಡುವುದಕ್ಕೆ ನಾವು ಚಿತ್ರದಲ್ಲಿ ಕೊಟ್ಟಿರುವಂತೆ ಗೊಂಬೆಗಳನ್ನು ಬರೆಯಬಹುದು, ಅಥವಾ ನೀವೇ ನಿಮ್ಮದೇಯಾದ ಸೃಜನಾತ್ಮಕತೆಯಿಂದ ಸನ್ನಿವೇಶವನ್ನು ಸೃಷ್ಟಿಸಬಹುದು. ಇಲ್ಲಿ ನೀವು ನೋಡುವುದಾದರೆ, ಈ ಸಭೆಯು ತಮ್ಮ ವಿದ್ಯಾರ್ಥಿಗಳ ಪರಿಶೋಧನೆಗಾಗಿ ಹೆಚ್ಚಾದ ವಿನೋದವನ್ನು ಸೃಷ್ಟಿಸಲು, ನೆಲದ ಮೇಲೆ ಹಾಕಿರುವ ಸೂಚನೆಗಳ ಸುತ್ತಮುತ್ತ ಪೋಲೀಸ್ ಟೇಪ್.ನ್ನು ಇಟ್ಟಿದ್ದಾರೆ ಮತ್ತು ಅವರು ಶವಗಳ ಗೊಂಬೆಗಳ ಗೆರೆಗಳಿಗೆ ಟೇಪ್.ನ್ನು ಉಪಯೋಗಿಸಿದ್ದಾರೆ.

ಕೇಸ್ ಪರಿಷ್ಕರಿಸಲಾಗಿದೆ    ಕೇಸ್ ಪರಿಷ್ಕರಿಸಲಾಗಿದೆ

# ಕೇಸ್ ಪರಿಷ್ಕರಿಸಲಾಗಿದೆ!

ಒಂದುಬಾರಿ ನಿಮ್ಮ ವಿದ್ಯಾರ್ಥಿಗಳು ಸೂಚನೆಗಳನ್ನು ಪರಿಶೋಧನೆ ಮಾಡಿದನಂತರ, ಹಾಗೆಯೇ ಕೇಸನ್ನು ಪರಿಷ್ಕಾರ ಮಾಡುವುದಕ್ಕೆ ಅನುಮತಿಸಿರಿ ಅಥವಾ ಈ ವಾರದಲ್ಲಿ ಯಾವ ಕಥೆಯನ್ನು ನೀವು ಹೇಳುತ್ತಿರುವಿರೋ ಅದನ್ನು ಅವರು ಕಂಡುಹಿಡಿಯುವದಕ್ಕೆ ಸಮಯವನ್ನು ಕೊಡಿರಿ. ಅನೇಕ ವರ್ಷಗಳ ಕಾಲ ಸಭೆಗೆ ಬರಲಾರದ ಮಕ್ಕಳು ನಿಮ್ಮ ಹತ್ತಿರವಿದ್ದರೆ, ಅವರು ಬೈಬಲ್ ಕಥೆಯನ್ನು ಕಂಡುಹಿಡಿಯಲು ತುಂಬಾ ಕಷ್ಟಪಡುತ್ತಿರಬಹುದು. ಅದು ಸಮಸ್ಯೆಯಂತೆ ನೋಡದೆ, ಅವರಿಗೆ ಬೈಬಲ್ ಕಥೆಯನ್ನು ಹೇಳಿರಿ. ಆದರೂ ಅವರು ಸರಿಯಾಗಿ ಕಂಡುಹಿಡಿ ಯಲಿಲ್ಲವೆಂದರೆ,  ಸೂಚನೆಗಳೆಲ್ಲವೂ ಕಥೆಗೋಸ್ಕರ ತುಂಬಾ ವಿನೋದವುಳ್ಳ ಪರಿಚಯವನ್ನು ಕೊಡುತ್ತವೆ. ಅದು ಒಂದು ಪ್ರತ್ಯೇಕವಾದ ಸಂಡೇ ಸ್ಕೂಲ್.ನ್ನು ನಿಮಗೆ ಕೊಡುತ್ತದೆ.

## ಬೈಬಲ್ ಕಥೆ



ಎಲ್ಲಾ ಸೂಚನೆಗಳು ಆದಮೇಲೆ, ಈ ವಾರದಲ್ಲಿ ಯಾವ ಬೈಬಲ್ ಕಥೆಯನ್ನು ಕಲಿತುಕೊಳ್ಳುತ್ತೀವೆಂದು ನಿಮ್ಮ ವಿದ್ಯಾರ್ಥಿಗಳಿಗೆ ಹೇಳಿರಿ. ಸಹಜವಾಗಿ ಸಂಡೇ ಸ್ಕೂಲ್ ತರಗತಿಯಲ್ಲಿ ಹೇಳುವಂತೆಯೇ  ಈಗ ಕಥೆಯನ್ನು ಹೇಳಬೇಕು. ನಿಮಗೆ ಕೊಡಲ್ಪಟ್ಟ ಅನುಬಂಧ ಪುಸ್ತಕದಲ್ಲಿ ಬೈಬಲ್ ಕಥೆಯನ್ನು ನೋಡಬಹುದು, ಅಥವಾ ಉಪಾಧ್ಯಾಯರ ಪುಸ್ತಕದ ಸಹಾಯದೊಂದಿಗೆ ನೀವು ಕಥೆಯನ್ನು ಹೇಳಬಹುದು.  ಕಥೆಯನ್ನು ಹೇಳುವುದಕ್ಕೆ ನಮ್ಮ ಉಪಾಧ್ಯಾಯರ ಪುಸ್ತಕವನ್ನು ನೀವು ಉಪಯೋಗಿಸುವುದಾದರೆ, ಅವಾಗಲೂ ನಿಮ್ಮ  ಹತ್ತಿರ ಬೈಬಲ್.ನ್ನು ಇಟ್ಟುಕೊಂಡಿರುವುದು ಒಳ್ಳೇಯದು. ಅಗ ನೀವು ಬೈಬಲಿನಿಂದ ಕಥೆಯನ್ನು ಓದಿ ಹೇಳಬಹುದು. ಕಥೆಯಲ್ಲಿರುವವರಲ್ಲಿ ಒಬ್ಬರ ಚಿತ್ರಕ್ಕೆ ಬಣ್ಣ ಹಚ್ಚುವುದು ಪ್ರತೀ ವಾರ ಇರುತ್ತದೆ. ಕೆಲವೊಂದುಸಲ ಕಥೆಯ ನಾಯಕನಿಗೆ ಬಣ್ಣ ಹಚ್ಚುತ್ತಾರೆ, ಮತ್ತೊಂದುಸಲ ಕಥೆಯ ವಿಲನ್.ಗೆ ಬಣ್ಣ ಹಚ್ಚುತ್ತಾರೆ. ದಾವೀದ ಮತ್ತು ಗೊಲ್ಯಾತನ ಪಾಠದಲ್ಲಿ, ನಿಮ್ಮ ವಿದ್ಯಾರ್ಥಿಗಳಿಗೆ ತೋರಿಸುವದಕ್ಕೆ ಗೊಲ್ಯಾತನ ಚಿತ್ರವಿದೆ. ಪ್ರತಿಯೊಬ್ಬ ವಿದ್ಯಾರ್ಥಿ ತಿನ್ನುವುದಕ್ಕೆ ಕೊಡಲು, ನಿಮಗೆ ಕೊಡಲ್ಪಟ್ಟ ಬೈಬಲ್ ವ್ಯಕ್ತಿಗಳ ಕಾರ್ಡುಗಳನ್ನು

ಉಪಯೋಗಿಸಿರಿ. ಇವು ಹಾಜರಾತಿ ಕಾರ್ಡುಗಳಾಗಿ ನೀವು ಉಪಯೋಗಿಸಬಹುದು, ಅಥವಾ "ಯಾರೆಂದು ಕಂಡುಹಿಡಿಯಿರಿ (ಗೆಸ್ ವೂ)" ಎನ್ನುವ ಆಟವನ್ನು ಆಡುವುದಕ್ಕೆ ಕೂಡ ಉಪಯೋಗಿಸಬಹುದು. ಈ ಆಟದ ಕುರಿತಾದ ಸೂಚನೆಗಳನ್ನು "ಹೇಗೆ ಉಪಯೋಗಿಸಬೇಕು" ಎನ್ನುವ ಈ ವಿಭಾಗದ ಕೊನೆಯ ಭಾಗದಲ್ಲಿ ತಿಳಿಸಲಾಗಿದೆ.

### ಅನ್ವಯ

ಪಾಠ ಹೇಳಿದನಂತರ ಜೀವನಕ್ಕೆ ಸರಿಯಾಗುವ ಅನ್ವಯವನ್ನು ಹಂಚಿಕೊಳ್ಳಿರಿ. ದಾವೀದ ಮತ್ತು ಗೊಲ್ಯಾತನ ಕಥೆಗಾದರೆ, "ನಾನು ಚಿಕ್ಕವನಾಗಿದ್ದರೂ ನಾನು ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಬಲ್ಲೆ" ಎನ್ನುವ ಅನ್ಯವಯವನ್ನು ಉಪಯೋಗಿಸಬಹುದು. ದೊಡ್ಡ ಕಾರ್ಯವನ್ನು ಮಾಡುವುದಕ್ಕೆ ದೇವರು ಚಿಕ್ಕವನಾಗಿರುವ ದಾವೀದನನ್ನು ಹೇಗೆ ಉಪಯೋಗಿಸಿಕೊಂಡರೆಂದು ಮತ್ತು ನಿಮ್ಮ ಮಕ್ಕಳನ್ನೂ ದೇವರು ಹೇಗೆ ಉಪಯೋಗಿಸಿಕೊಳ್ಳುತ್ತಾರೆನ್ನುವುದರ ಕುರಿತಾಗಿ ನಿಮ್ಮ ಮಕ್ಕಳೊಂದಿಗೆ ಮಾತನಾಡಿರಿ,

### ಕಂಠಪಾಠ ವಾಕ್ಯ

ಪ್ರತಿಯೊಂದು ವಾರಕ್ಕೆ ಕೊಡಲ್ಪಟ್ಟ ಕಂಠಪಾಠ ವಾಕ್ಯವು ಜೀವನಕ್ಕೆ ಅಳವಡಿಸುವ ಮಾತುಗಳಾನುಸವಾಗಿ ಹೋಗುವುದಕ್ಕೆ ಆಯ್ಕೆ ಮಾಡಲಾಗಿದೆ. ಬೈಬಲ್ ವಾಕ್ಯವನ್ನು ನಿಮ್ಮ ಮಕ್ಕಳು ಕಂಠಪಾಠಲು ಸ್ವಲ್ಪ ಸಮಯ ಸಹಾಯ ಮಾಡಿರಿ.

### ಮನೆಗೆಲಸ

ವಾರವೆಲ್ಲ ಕ್ರಿಯಾ ರೂಪದಲ್ಲಿ ನಿಮ್ಮ ಮಕ್ಕಳು ನಡೆಯುವಂತೆ ನಿಮ್ಮ ಮಕ್ಕಳಿಗೆ ಪ್ರತೀ ವಾರವು ಒಂದು ಮನೆಗೆಲಸವನ್ನು ಕೊಡಲಾಗುತ್ತದೆ. ಈ ಪಠ್ಯಕ್ರಮದಲ್ಲಿ ಇದು ತುಂಬಾ ಪ್ರಾಮುಖ್ಯವಾದ ವಿಷಯ! ನಾವು ಕೇವಲ ವಾಕ್ಯವನ್ನು ಕೇಳುವವರಾಗಿರಬೇಕೆನ್ನುವುದೇ ದೇವರ ಬಯಕೆಯಲ್ಲ, ಆದರೆ ಅದರ ಪ್ರಕಾರ ನಡೆಯುವುದೇ ಆತನ ಇಷ್ಟವಾಗಿದೆ! ಸಭೆಯಲ್ಲಿ ನಿಮ್ಮ ವಿದ್ಯಾರ್ಥಿಗಳು ಕಲಿತುಕೊಂಡಿರುವುದನ್ನು ಹೊರ ಪ್ರಪಂಚದಲ್ಲಿಯೂ ಅದನ್ನು ಅನುಸರಿಸಿ ಜೀವಿಸಬೇಕು. ಪ್ರತೀ ವಾರ ನಿಮ್ಮ ಕಲಿತುಕೊಳ್ಳುವ ಪಾಠವನ್ನು ಕ್ರಿಯಾ ರೂಪದಲ್ಲಿ ತೋರಿಸದೆ, ಕೇವಲ ಬೈಬಲ್ ವಾಕ್ಯಗಳನ್ನು ಮತ್ತು ಸಿದ್ಧಾಂತವನ್ನು ಕಂಠಪಾಠ ಮಾಡುವುದರಿಂದ ಫರಿಸಾಯರನ್ನಾಗಿ ಮಾಡಬೇಡಿರಿ. ನಾವು ವೇಷಧಾರಿಗಳನ್ನು ತಯಾರುಗೊಳಿಸುವ ತಪ್ಪನ್ನು ಮಾಡಬಾರದು! ನೀವು ನಿಮ್ಮ ವಿದ್ಯಾರ್ಥಿಗಳನ್ನು ವೇಷಧಾರಿಗಳಾಗಿ ಪ್ರೋತ್ಸಾಹ ಮಾಡುತ್ತಿಲ್ಲವೆಂದು ತಿಳಿದುಕೊಳ್ಳಬೇಕೆಂದರೆ ಒಂದೇ ಒಂದು ಮಾರ್ಗವಿದೆ. ಅದೇನಂದರೆ ಅವರು (ವಿದ್ಯಾರ್ಥಿಗಳು) ವಾರ ಮಧ್ಯೆದಲ್ಲಿ ಕಲಿತುಕೊಂಡಿರುವ ಪಾಠದ ಅನುಸಾರವಾಗಿ ನಡೆದುಕೊಳ್ಳುವುದೇ.

### ದೇವರ ಡಿ.ಎನ್.ಎ.




ದೇವರ ಡಿ.ಎನ್.ಎ. ಎನ್ನುವುದು ದೇವರ ಕುರಿತಾಗಿ ನಾವು ಕಲಿತುಕೊಳ್ಳುವ ಗುಣಲಕ್ಷಣವಾಗಿರುತ್ತದೆ. ಇದು ಬೈಬಲ್ ವಾಕ್ಯಾನುಸಾರವಾಗಿರುತ್ತದೆ. ಉದಾಹರಣೆಗೆ, ದಾವೀದ ಮತ್ತು ಗೊಲ್ಯಾತನ ಪಾಠದಲ್ಲಿ, ದೇವರು ತನ್ನ ಪ್ರಣಾಳಿಕೆಗಳನ್ನು ನೆರವೇರಿಸಿಕೊಳ್ಳಲು, ಜನರನ್ನು ಉಪಯೋಗಿಸಿಕೊಳ್ಳುತ್ತಾರೆನ್ನುವ ಪಾಠವನ್ನು ನಾವು ಕಲಿತುಕೊಳ್ಳಬಹುದು.

# ವಿನೋದ ಸಮಯ!

### ಆಟ

ನಿಮ್ಮ ತರಗತಿಗೆ ಆಟಗಳು ತುಂಬಾ ಪ್ರಾಮುಖ್ಯ, ನಿಮ್ಮ ವಿದ್ಯಾರ್ಥಿಗಳು ತಿರುಗಿ ತರಗತಿಗೆ ಬರುವುದಕ್ಕೆ ಸಹಾಯ ಮಾಡುತ್ತವೆ! ಮಕ್ಕಳಿಗೆ ಆಟಗಳೆಂದರೆ ತುಂಬಾ ಇಷ್ಟ. ಪ್ರತಿಯೊಂದು ತರಗತಿಯಲ್ಲಿ ಆಟವನ್ನು ಸೇರಿಸಿದರೆ, ವಾರ ವಾರಕ್ಕೂ ನಿಮ್ಮ ತರಗತಿ ಬೆಳೆಯುವುದನ್ನು ನೋಡುವಿರಿ. ನಿಮ್ಮ ತರಗತಿಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿದ್ದರೆ, ನೀವು ಅನೇಕ ಜೀವನಗಳನ್ನು ಮಾರ್ಪಡಿಸುವಿರಿ!

## ಚರ್ಚೆ



ಸವಾಲುನೊಂದಿಗೆ ಕೂಡಿರುವ ಚರ್ಚೆಯಲ್ಲಿ ನಿಮ್ಮ ಮಕ್ಕಳೆಲ್ಲರನ್ನು ಚುರುಕಾಗಿರುವುದಕ್ಕೆ ನಿಮಗೆ ಚರ್ಚೆ ಮಾಡಿಕೊಳ್ಳಲು ಮೂರು ಪ್ರಶ್ನೆಗಳು ಕೊಟ್ಟಿದ್ದೇವೆ. ಆ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳಿಕೊಂಡು ಹೋಗುವುದು ಸರಿಯಾದ ಪದ್ಧತಿಯಲ್ಲ. ಆದರೆ ಪ್ರತಿಯೊಂದು ಪ್ರಶ್ನೆಯ ಕುರಿತಾಗಿ ಅವರು ನಿಜವಾಗಿ ಮಾತನಾಡಿಕೊಳ್ಳುವುದಕ್ಕೆ ಅವರಿಗೆ ಸಮಯವನ್ನು ಕೊಡಿರಿ. ಅವರು ಎಷ್ಟು ಹೆಚ್ಚಾಗಿ ವಾದಿಸುತ್ತಾರೋ, ಅಷ್ಟೇ ಒಳ್ಳೆಯದನ್ನು ನೀವು ಅವರಿಗೆ ಮಾಡುವಿರಿ! ಆದುದರಿಂದ, ದೊಡ್ಡ ವಿವಾದವುಳ್ಳ ಚರ್ಚೆ ನಡೆಯುವುದಕ್ಕೆ ಪ್ರಯತ್ನಿಸಿರಿ. ಆಗ ನೀವು ನಿಜವಾದ ಅಭಿಪ್ರಾಯಗಳನ್ನು ನಿಮ್ಮ ಮಕ್ಕಳಿಂದ ಪಡೆದುಕೊಳ್ಳುವಿರಿ. ನಾವು ಆ ಪ್ರಶ್ನೆಗಳಿಗೆ ಉತ್ತರಗಳನ್ನು ಉಪಾಧ್ಯಾಯರ ಪುಸ್ತಕದಲ್ಲಿ ಕೊಟ್ಟಿದ್ದೇವೆ. ಆದ್ದರಿಂದ ಪ್ರಶ್ನೆಯ ಚರ್ಚೆಯ ಕೊನೆಯ ಭಾಗದಲ್ಲಿ ನೀವೂ ನಿಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಬಹುದು.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು

ನಿಮ್ಮ ತರಗತಿಗೆ ಚಟುವಟಿಕೆಗಳಾಗಿ ಉಪಯೋಗಿಸುವುದಕ್ಕೆ  ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಪುಟಗಳು ಕೂಡ ಇವೆ. ಮಕ್ಕಳಿಗೆ ಬಣ್ಣ ಹಚ್ಚುವುದೆಂದರೆ ಇಷ್ಟ ಮತ್ತು ಪದಗಳನ್ನು ಕಂಡುಹಿಡಿಯುವುದೆಂದರೆ ಇಷ್ಟ. ನಿಮ್ಮ ತರಗತಿಯನ್ನು ವಿನೋದಾತ್ಮಕವಾಗಿ ಮಾಡಿಕೊಳ್ಳಲು ನಮ್ಮ ವಿದ್ಯಾರ್ಥಿ ಪುಸ್ತಕಗಳನ್ನು ಉಪಯೋಗಿಸುವಿರೆಂದು ನಾವು ನಿರೀಕ್ಷಿಸುತ್ತೇವೆ. ಈ ವಿಭಾಗದಲ್ಲಿ, ವಿದ್ಯಾರ್ಥಿ ಪುಸ್ತಕಗಳಲ್ಲಿ 4ನೆ ಪುಟದಲ್ಲಿ ಪಜಿಲ್.ಗಳಿಗೆ ಉತ್ತರಗಳನ್ನು ಕಂಡುಕೊಳ್ಳುವಿರಿ.

## ಲೂಕಸ್ ರವರ ಪ್ರಯೋಗ

ನಿಮ್ಮ ತರಗತಿಯ ಕೊನೆಯ ಚಟುವಟಿಕೆ ಕ್ರೇಜಿ ವಿಜ್ಞಾನಿಯಾದ ಡಾಕ್ಟರ್ ಲೂಕಸ್.ರವರೊಂದಿಗೆ ವಿಜ್ಞಾನದ ಪ್ರಯೋಗವಾಗಿರುತ್ತದೆ! ಪ್ರತೀ ವಾರ ಇವರು ನಿಮಗೆ ವಿಜ್ಞಾನದ ಪ್ರಯೋಗವು ಕೊಡುತ್ತಾರೆ, ಅದನ್ನು ನೀವು ತರಗತಿಯಲ್ಲಿ ಒಂದು ಚಟುವಟಿಕೆಯಾಗಿ ಮಾಡಬಹುದು. ನೀವು ಅವರ ವೀಡಿಯೋಗಳನ್ನು ನೋಡಬಹುದು, ಅಥವಾ ಈ ಚಿತ್ರದಲ್ಲಿ ಒಬ್ಬ ಉಪಾಧ್ಯಾಯಿನಿ ತನ್ನ ಪ್ರಯೋಗಶಾಲೆಯ ಬಟ್ಟೆಗಳನ್ನು ಧರಿಸಿಕೊಂಡು ಪ್ರಯೋಗ ಮಾಡುತ್ತಿರುವಂತೆಯೇ, ನೀವೂ ಪ್ರಯೋಗವನ್ನು ಮಾಡಬಹುದು.





## ಯಾರೆಂದು ಕಂಡುಹಿಡಿಯಿರಿ ಎನ್ನುವ ಆಟ




ನಿಮ್ಮ ತರಗತಿಯಲ್ಲಿ ಕೊನೆಯದಾಗಿ ಮಾಡಬಹುದಾದ ಚಟುವಟಿಕೆ ಏನೆಂದರೆ ಅದು ಒಂದು ಆಟ. "ಯಾರೆಂದು ಕಂಡುಹಿಡಿಯಿರಿ" ಎಂದು ಕರೆಯಲ್ಪಡುವ ಬೈಬಲ್ ವ್ಯಕ್ತಿಗಳ ಕಾರ್ಡುಗಳೊಂದಿಗೆ ಈ ಆಟ ಆಡಬಹುದು. ಇದು ಸಾಂಪ್ರದಾಯಿಕವಾದ ಕೆಳಗೆ ಕುಳಿತುಕೊಂಡು ಇಬ್ಬರು ಅಥವಾ ಮೂವರು ಸಹಭಾಗಿಗಳಾಗಿ ಆಡುವ ಆಟ ಅಥವಾ ಇಬ್ಬರು ಮಕ್ಕಳು ಒಬ್ಬರಿಗೊಬ್ಬರು ಎದುರಾಳಿ ಆಡುವ ಆಟ.

ಪ್ರತಿಯೊಬ್ಬ ವಿದ್ಯಾರ್ಥಿಗೆ 13 ಕಾರ್ಡುಗಳನ್ನು ಮುದ್ರಿಸಿ ಕೊಡಿರಿ. ಉಪಾಧ್ಯಾಯರ ಹತ್ತಿರವೂ ಒಂದು ಸೆಟ್ ಕಾರ್ಡುಗಳು ಇರಬೇಕು. ಈ ಆಟವನ್ನು ಆಡುವ ಪ್ರತಿಯೊಬ್ಬ ವಿದ್ಯಾರ್ಥಿ ಬೈಬಲ್ ವ್ಯಕ್ತಿಗಳ ವಿಷಯದಲ್ಲಿ ತುಂಬಾ ಸುಪರಿಚಿತರಾಗುತ್ತಾರೆ.

ಕಾರ್ಡುಗಳನ್ನು ನಿಲ್ಲಿಸುವುದಕ್ಕೆ ಒಂದು ದಪ್ಪ ಕಾಗದವನ್ನು ತೆಗೆದುಕೊಂಡು ಮಡಿಚಿರಿ. ನಿಮ್ಮ ಸಹಭಾಗಿ ಅಥವಾ ನಮ್ಮ ಉಪಾಧ್ಯಾಯರ ಬಳಿ ಬೈಬಲ್ ವ್ಯಕ್ತಿಯ ಯಾರ ಕಾರ್ಡು ಇದೆಯೆಂದು  ಊಹಿಸಿ ಹೇಳಬೇಕು. ನಿಮ್ಮ ಸಹಭಾಗಿಯಿಂದ ಆ ಕಾರ್ಡನ್ನು ರಹಸ್ಯವಾಗಿ ಇಡುತ್ತಾ, ಪ್ರತಿಯೊಬ್ಬರೂ ಬೈಬಲ್ ವ್ಯಕ್ತಿಯ ಕಾರ್ಡನ್ನು ಆಯ್ಕೆಮಾಡಿಕೊಳ್ಳಬೇಕು.

ಬೈಬಲ್ ವ್ಯಕ್ತಿಗಳ ವಿವಿಧವಾದ ಲಕ್ಷಣಗಳನ್ನು ನೋಡಿರಿ, ಅದರಲ್ಲಿ ವರ ಕಣ್ಣುಗಳ ಬಣ್ಣವನ್ನು, ಕೂದಲಿನ ಬಣ್ಣವನ್ನು ಕೂಡ ಸೇರಿಸಬೇಕು, ಅವರಿಗೆ ಗಡ್ಡ ಬಂದಿದ್ದರೆ, ಅವರು ಟೋಪಿಯನ್ನು, ಅವರ ಮೂಗು ಅಥವ ಕಿವಿಗಳ ಸೈಜುಗಳನ್ನು ಇಟ್ಟುಕೊಂಡಿದ್ದರೆ, ಮತ್ತು ಅವರು ಸ್ತ್ರೀಯೋ ಅಥವಾ ಪುರುಷನೋ ಎನ್ನುವವುಗಳನ್ನು ಕೂಡ ಸೇರಿಸಬೇಕು. ಈ ಎಲ್ಲಾ ವಿಷಯಗಳನ್ನು ಮೊದಲ ಆಟಗಾರನು ಕೇಳುವುದಕ್ಕೆ ಪ್ರಾರಂಭಿಸುತ್ತಾನೆ, ಮತ್ತು ಎರಡನೇ ಆಟಗಾರನು "ಹೌದು" ಅಥವಾ "ಅಲ್ಲ" ಎಂದು ಎರಡು ಪದಗಳ ಉತ್ತರ ಮಾತ್ರವೇ ಕೊಡಬೇಕು. ಒಂದು ತಿರುಗುವಿಕೆಗೆ ಒಂದು ಪ್ರಶ್ನೆ ಮಾತ್ರ ಅನುಮತಿಸಬೇಕು. ಒಂದುಸಲ ನೀವು ಉತ್ತರ ಕೇಳಿಸಿಕೊಂಡಾಗ, ನಿಮ್ಮ ಹತ್ತಿರವಿಲ್ಲದ ಕಾರ್ಡುಗಳನ್ನು ಕೆಳಗಿಡಬಹುದು. ಉದಾಹರಣೆಗೆ, ನೀವು ಸ್ತ್ರೀ ಎಂದು ಕೇಳಿದ್ದೀರಿ, ನಿನ್ನ ಸಹಭಾಗಿ "ಅಲ್ಲ" ಎಂದು ಹೇಳುತ್ತಾನೆ, ಆಗ ನೀವು ಸ್ತ್ರೀಯರ ಎಲ್ಲಾ ಕಾರ್ಡುಗಳನ್ನು ಕೆಳಗೆ ಇಡಬೇಕು. ಹೀಗೆ ರಹಸ್ಯ ಬೈಬಲ್ ವ್ಯಕ್ತಿಯನ್ನು ಕಂಡುಹಿಡಿಯುವವರೆಗೂ ಪ್ರಶ್ನೆಗಳನ್ನು ಕೇಳುತ್ತಾ ಮುಂದೆವರಿಸಬೇಕು!



# --[ ಕೇಸ್ 1 ]--

## ಸೂಚನೆಗಳು! (ಕ್ಲೂಸ್) (ಪಾಠ 1)

### 1 ಸೂಚನೆ 1# ಅಂಶ (ಪಾಠ 1)

ಮೊಂಡಾದ ಆಯುಧಗಳೊಂದಿಗೆ ಹೊಡೆದಿರುವ ಗಾಯದೊಂದಿಗೆ ಕೇಸ್

### 2 ಸೂಚನೆ #2 ನಾಟಕ (ಪಾಠ 1)

ಕಥೆ ಹೇಳುವವರು: ಈ ಕಥೆಯು ಕಲ್ಪನೆಯಾಗಿರುತ್ತದೆ, ಆದರೆ ತಪ್ಪು ಮಾದದಿರುವವರನ್ನು ಸಂರಕ್ಷಿಸಲು ಕೆಲವೊಂದು ಹೆಸರುಗಳನ್ನು ಮತ್ತು ಸ್ಥಳಗಳನ್ನು ಮಾರ್ಪಾಟು ಮಾಡಲಾಗಿದೆ.

ಸೈನಿಕ : ಹನೀ, ನಾನು ಪಡೆದುಕೊಂಡ ಆ ದಿನವನ್ನು ನೀನು ನಂಬದೇ ಇರಬಹುದು, ನಾನು ಅದನ್ನು ಕೇವಲ ಜೀವಂತವಾಗಿರುವಂತೆ ಮಾಡಿದೆನು!

ಹೆಂಡತಿ : ಅಲ್ಲಿಗೆ ಹೋಗಬಾರದೆಂದು ನಾನು ನಿಮಗೆ ಹೇಳಿದೆ, ಆದರೂ ನೀವು ಅದನ್ನು ಕೇಳಿಸಿಕೊಂಡಿಲ್ಲ.



ಸೈನಿಕ ; ಹೌದು, ಆಗ ನೀನು ಹೇಳಿದ್ದು ಸರಿಯೇ, ಆದರೆ ಅಲ್ಲಿ ಏನು ನಡೆದಿದೆ ಎಂದು ನೀನು ತಿಳಿದುಕೊಳ್ಳುವುದಕ್ಕೆ ಅಲ್ಲಿ ನೀನು ಇದ್ದಿಲ್ಲ.

ಹೆಂಡತಿ : ನನ್ನ ತಂದೆಯ ಕತ್ತಿಯು ಎಲ್ಲಿದೆ?

ಸೈನಿಕ : ಎಪೆಸ್ ಡಮ್ಮಿಮ್.ನ ಕ್ಯಾಂಪಸ್.ನಲ್ಲಿ ಅದನ್ನು ಬಿಟ್ಟು ಬಂದೆ (ಪಿಸುಮಾತು)

ಹೆಂಡತಿ : ಒಳ್ಳೇದು, ಒಳ್ಳೆಯ ಸಮಯ ಸೈನಿಕ, ನೀನು ಹಾಗೆಯೇ ಹಿಂದಕ್ಕೆ ಶಾರೈಮ್ ರಸ್ತೆ ಕಡೆಗೆ ಹೋಗಿ, ಅದನ್ನು ತೆಗೆದುಕೊಂಡು ಬಾ.

ಸೈನಿಕ : ನಾನು ಅದನ್ನು ಮಾಡುವುದಿಲ್ಲ, ಅವರು ನನ್ನನ್ನು ಕೊಂದು ಹಾಕುತ್ತಾರೆ.

ಹೆಂಡತಿ : ನೀನು ಮಾಡದಿದ್ದರೆ, ಇಲ್ಲಿ ನಿನಗೆ ಸಿಗುವ ಅವಕಾಶಗಳು ಅಷ್ಟು ಒಳ್ಳೆಯದಾಗಿ ಕಾಣಿಸಿಕೊಳ್ಳುವುದಿಲ್ಲ.

ಸೈನಿಕ : ನೀನು ಕೋಪದಲ್ಲಿ ಇದ್ದೀಯೆಂದು ನನಗೆ ಗೊತ್ತು, ಆದರೆ ನಿಮ್ಮ ತಂದೆಯ ಖಡ್ಗಕ್ಕಾಗಿ ನಾನು ತಿರುಗಿ ಹೋಗುವುದಿಲ್ಲ.

ಹೆಂಡತಿ : ಈ ದೊಡ್ಡ ಅವಕಾಶವನ್ನು ನೀನು ಯಾಕೆ ತೆಗೆದುಕೊಳ್ಳಬಾರದು, ನಿನಗೆ ಅಷ್ಟು ಭಯವಿದ್ದರೆ, ತನ್ನ ದೊಡ್ಡಣ್ಣ ನಿನ್ನ ಜೊತೆಯಲ್ಲಿ ಇರುತ್ತಾನೆ.

ಸೈನಿಕ : ನಾನು ಹೋಗುವುದಿಲ್ಲ, ತನ್ನ ಅಣ್ಣನು ಸತ್ತು ಹೋಗಿದ್ದಾನೆ, ನಾವು ಆತನನ್ನು ಕಳೆದುಕೊಂಡಿದ್ದೇವೆ.

ಹೆಂಡತಿ : [ಹಿಟ್ಟು ಕಲಿಸುವ ಬಟ್ಟಲನ್ನು ಕೆಳಗೆ ಬೀಳಿಸುವಳು, ಅದರಲ್ಲಿರುವ ಹಿಟ್ಟೆಲ್ಲಾ ನೆಲದ ಮೇಲೆ ಚಲ್ಲಿಹೋಗುವುದು] ಓ, ಹನೀ, ಏನಾಯಿತು?

ಸೈನಿಕ : ಅದು ವಿಚಿತ್ರವಾಗಿರುತ್ತದೆಯೆಂದು ನಿನಗೆ ನಾನು ಹೇಳಿದೆ. ಎಫೆಸ್.ನಲ್ಲಿ ನಾವು ನಡೆದಾಡಿದ್ದೆವು. ಸೋಕೋ ಮೂಲಕ. ಒಂದು ತಿಂಗಳು ವರೆಗೂ ನಾವು ಅವುಗಳನ್ನು ಹಿಡಿದುಕೊಂಡಿದ್ದೇವೆ. ಪ್ರತಿದಿನ ದೊಡ್ಡಣ್ಣ ಹೊರಗಡೆ ಹೋಗಿ, ಜಗಳ ಮಾಡುವುದಕ್ಕೆ ಸವಾಲು ಮಾಡುತ್ತಿದ್ದ ಮತ್ತು ಅವರನ್ನು ಜಾಸ್ತಿಯಾಗಿ ಹಿಯಾಳಿಸುತ್ತಿದ್ದ. ಆಗ ನಮ್ಮ ಸರ್ವಾಂಗ ಕವಚವನ್ನು ಧರಿಸಿಕೊಳ್ಳುತ್ತಿರಲಿಲ್ಲ ಅದು ವಿನೋದವಾಗಿರುತ್ತಿತ್ತು. ನಾವು ಸುಮ್ಮನೆ ಹೊರಗಡೆಗೆ ಹೋಗಿ, ಅವನು ಅವರನ್ನು ಮೂರ್ಖರನ್ನಾಗಿ ಮಾಡುತ್ತಿರುವುದನ್ನು ನೋಡುತ್ತಿದ್ದೆವು. ನಿಮ್ಮ ತಂದೆಯ ಕತ್ತಿಯನ್ನು ಆ ಗುಡಾರದೊಳಗೆ ಬಿಟ್ಟು ಬಂದೆನು. ನಾನು ಉದ್ದೇಶಪೂರ್ವಕವಾಗಿ ಬಿಟ್ಟುಬಂದಿಲ್ಲ.

ಹೆಂಡತಿ : ಗುಡಾರದಲ್ಲಿ? ಗುಡಾರದ ಕುರಿತಾಗಿ ಮಾತಾಡುತ್ತೇನೆ, ನೀವು ಆ ಗುಡಾರವನ್ನು ಹಿಂದಕ್ಕೆ ತೆಗೆದುಕೊಂಡು ಬಂದಿದ್ದೀರಾ?

ಸೈನಿಕ : ಇಲ್ಲ.

ಹೆಂಡತಿ : ಹೋ... ಈ ವರ್ಷದಲ್ಲಿ ನಾವು ಹೊರಗಡೆ ಶಿಬಿರಕ್ಕೆ (ಕ್ಯಾಂಪಿಂಗ್) ಹೊರಟರೆ, ಈಗ ಏನನ್ನು ಉಪಯೋಗಿಸುವುದು?

ಸೈನಿಕ : ಹನಿ, ಯಾರಿಗೂ ಗುಡಾರಗಳಿಲ್ಲ, ಅಥವಾ ಖಡ್ಗಗಳಿಲ್ಲ, ಎಷ್ಟು ಶೀಘ್ರವಾದರೆ, ಅಷ್ಟು ಶೀಘ್ರವಾಗಿ ನಾನು ಮನೆಗೆ ಬಂದೆನು, ಹೀಗೆ ಯಾರೂ ಮಾಡಲಿಲ್ಲ. ಅದಕ್ಕೆ ನೀನು ಸಂತೋಷಪಡು.

ಹೆಂಡತಿ : ಒಳ್ಳೇಯದು, ಮನೆಗೆ ಸುಸ್ವಾಗತ. ನಾವು ಹೇಗೋ ಒಂದುರೀತಿ ಮಾಡಿಕೊಳ್ಳೋಣ. ನಾನು ನಿನ್ನನ್ನು ತುಂಬಾ ಕಳೆದುಕೊಂಡಿದ್ದೇನೆ.

ಸೈನಿಕ : ನಾನೂ ನಿನ್ನನ್ನು ತುಂಬಾ ಕಳೆದುಕೊಂಡಿದ್ದೇನೆ.

## 3 ಸೂಚನೆ #3 ವಸ್ತು (ಪಾಠ 1)

ಸೂಚನೆಯಾಗಿ ಈ ಭೌತಿಕ ವಸ್ತುವನ್ನು ನಿಮ್ಮ ತರಗತಿಗೆ ತೆಗೆದುಕೊಂಡು ಬನ್ನಿರಿ : 5 ಕಲ್ಲುಗಳು





## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 1)

ಗಾತ್ ಪಟ್ಟಣದ ಇತ್ತೀಚಿನ ಚಿತ್ರ. ಇದೀಗ ಟೆಲ್ ಜಫಿಟ್ ನ್ಯಾಷನಲ್ ಪಾರ್ಕ್.ನಲ್ಲಿದೆ. (ರಹಸ್ಯ : ಗೊಲ್ಯಾತನ ಮನೆ ಪಾಲಿಸ್ಟೈನ್ ಪಟ್ಟಣ.)

## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 1)

ರಹಸ್ಯ : ಗೊಲ್ಯಾತನ ದೊಡ್ಡ ದೊಡ್ಡ ಪಾದದ ಹೆಜ್ಜೆಗಳು ಮತ್ತು ಸೈನ್ಯದ ಚಿಕ್ಕ ಚಿಕ್ಕ ಹೆಜ್ಜೆಗಳು.



# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 1)

### ಬೈಬಲ್ ಕಥೆ (ಪಾಠ 1)

ದಾವೀದ ಮತ್ತು ಗೊಲ್ಯಾತ್

ಬೈಬಲಿನಿಂದ : 1 ಸಮೂ.17:1-53

ಇಸ್ರಾಯೇಲ್ಯರು ಮತ್ತು ಫಿಲಿಸ್ಟಿಯರ ಮಧ್ಯೆದಲ್ಲಿರುವ ಯುದ್ಧ ಮೈದಾನದಲ್ಲಿ ನಿಂತಿದ್ದರು, ನಾನು ಜಯವನ್ನು ಗಳಿಸುತ್ತೇನೆಂದು ದಾವೀದನಿಗೆ ಗೊತ್ತಿತ್ತು. ತನ್ನ ಕಡೆಗೆ ದೇವರು ಇರುವುದರಿಂದ ಸೋತು ಹೋಗುವುದಿಲ್ಲ, ಆದರೆ 9 ಅಡಿ ಎತ್ತರವಿರುವ ದೊಡ್ಡ ಗಾತ್ರವಿರುವವನು ಮುಂದೆ ಮುಂದೆ ನಡೆದು ಬರುತ್ತಿರುವುದನ್ನು ನೋಡಿ ದಾವೀದನು ಭಯಗೊಂಡಿರಬಹುದು. ಗೊಲ್ಯಾತನು ತುಂಬಾ ಬಲಶಾಲಿಯಾಗಿ, ಇಸ್ರಾಯೇಲ್ಯರನ್ನು ಹಂಗಿಸುತ್ತಿದ್ದನು. ಈ ಫಿಲಿಸ್ಟಿಯನ ಜೊತೆಯಲ್ಲಿ ಯುದ್ಧ ಮಾಡುವುದಕ್ಕೆ ಯಾರೂ ಇಷ್ಟಪಡಲಿಲ್ಲ.



ದಾವೀದನು ಸೈನಿಕನಾಗುವುದಕ್ಕೆ ದೊಡ್ಡವನಾಗಿದ್ದಿಲ್ಲ; ಅವನು ತುಂಬಾ ಚಿಕ್ಕವನಾಗಿ, ಕುರಿಗಳನ್ನು ಕಾಯುತ್ತಿದ್ದನು, ಆದರೆ ಅಷ್ಟೇ ಧೈರ್ಯಶಾಲಿಯಾಗಿದ್ದನು. ಈ ಚಿಕ್ಕ ವಯಸ್ಸಿನಲ್ಲಿ, ತನ್ನ ಕೈಗೋಲುಯಿಂದ ಸಿಂಹವನ್ನು ಮತ್ತು ಕರಡಿಯನ್ನು ಸಾಯಿಸಿದ್ದನು. ಏನೇಯಾದರು ಈ ಯುದ್ಧದಲ್ಲಿ ದಾವೀದನ್ ಕಡೆಗೆ ದೇವರೇ ನಿಂತುಕೊಂಡಿದ್ದಾರೆ. ಕರ್ತನ ನಾಮದಲ್ಲಿ ಬಂದರೆ ಸೋತು ಹೋಗುವುದಿಲ್ಲವೆಂದು ತನಗೆ ಚೆನ್ನಾಗಿ ಗೊತ್ತಿತ್ತು.

5 ನುಣುಪಾದ ಕಲ್ಲುಗಳನ್ನು ತೆಗೆದುಕೊಂಡು, ಅದರಲ್ಲಿ ಒಂದನ್ನು ತನ್ನ ಕೈಯಲ್ಲಿರುವ ಕವಣೆಯಲ್ಲಿಟ್ಟುಕೊಂಡನು. ಗೊಲ್ಯಾತನ ಭಾರೀ ದೇಹವು ಹತ್ತಿರತ್ತರಕ್ಕೆ ಬರುತ್ತಿತ್ತು. ಸರಿಯಾದ ಸಮಯಕ್ಕಾಗಿ ಕಾಯಬೇಕಾದ ಅವಶ್ಯಕತೆಯಿದೆಯೆಂದು ದಾವೀದನು ತಿಳಿದಿದ್ದನು, ಈಗ ತನ್ನ ಕೈಯಲ್ಲಿರುವ ಕಣಿವೆಯನ್ನು ಬೀಸುವುದಕ್ಕೆ ಆರಂಭಿಸಿದನು. ಅದನ್ನು ಹೆಚ್ಚಿನಸಲ ಸುತ್ತಿ, ಗೊಲ್ಯಾತನ ಎರಡು ಕಣ್ಣುಗಳ ನಡುವೆ ಇರುವ ಆ ಚಿಕ್ಕ ಸ್ಥಳದಲ್ಲಿ ತಗುಲುವಂತೆ ಬೀಸಿದನು. ಆ ಕಲ್ಲು ಅವನ ಹಣೆಯೊಳಗೆ ಹೊಕ್ಕಿತು. ಗೊಲ್ಯಾತನು ನೆಲದ ಮೇಲೆ ಬೋರಲ ಬಿದ್ದು ಸತ್ತುಹೋದನು. ಫಿಲಿಸ್ಟಿಯನರ ಸೈನ್ಯವು ತಮ್ಮ ನಾಯಕನು ನೆಲಕ್ಕೆ ಬಿದ್ದು ಹೋದದ್ದನ್ನು ನೋಡಿ ಓಡಿಹೋದರು.

### ಅನ್ವಯ (ಪಾಠ 1)

ನಾನು ಚಿಕ್ಕವನಾಗಿದ್ದರೂ, ನಾನು ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಬಲ್ಲೆ.

### ಕಂಠಪಾಠ ವಾಕ್ಯ (ಪಾಠ 1)

"...ನಿರೀಕ್ಷೆಯಿರಲಿ ಎಂದು ನಾನು ನಿಮ್ಮ ವಿಷಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು; ಅವು ಅಹಿತದ ಯೋಚನೆಗಳಲ್ಲ, ಹಿತದ ಯೋಚನೆಗಳೇ." ಯೆರೆಮಿಯಾ.29:11.

**ಮನೆಗೆಲಸ (ಪಾಠ 1)**

ನಿಮ್ಮದಲ್ಲದ ಕೆಲಸವನ್ನು ಈ ವಾರ ನೀವು ತೆಗೆದುಕೊಳ್ಳಿರಿ, ಹೇಗೆಂದರೆ ಪ್ರತಿದಿನ ಪಾತ್ರೆಗಳನ್ನು ತೊಳೆಯಿರಿ, ಅಥವಾ ಪ್ರತಿದಿನ ಸಹಜವಾಗಿ ನೀವು ಮಾಡದ ಕೆಲಸವನ್ನು ತೆಗೆದುಕೊಂಡು, ನಿಮ್ಮ ತಂದೆತಾಯಿಗಳಿಗೆ ಮಾಡಿ ತೋರಿಸಿರಿ. ನೀವು ದೊಡ್ಡ ದೊಡ್ಡ ಕಾರ್ಯಗಳು ಮಾಡುವಂತೆ ದೇವರು ನಿಮಗೆ ಸಹಾಯ ಮಾಡುತ್ತಾನೆ.

**ದೇವರ ಡಿ.ಎನ್.ಎ (ಪಾಠ 1)**




ಈ ಪಾಠದಿಂದ ನಾವು ದೇವರ ಕುರಿತಾಗಿ ಏನನ್ನು ಕಲಿತುಕೊಂಡಿದ್ದೇವೆ? ದೇವರು ತನ್ನ ಪ್ರಣಾಳಿಕೆಗಳನ್ನು ನೆರವೇರಿಸಿಕೊಳ್ಳಲು, ಅನೇಕ ಜನರನ್ನು ಉಪಯೋಗಿಸಿಕೊಳ್ಳುತ್ತಾನೆ.



# ವಿನೋದ ಸಮಯ! (ಪಾಠ 1)

**ಆಟ (ಪಾಠ 1)**

**ಶಾಡೋ ಟ್ಯಾಗ್**

ಟ್ಯಾಗ್ ಮಾಡುವುದಕ್ಕೆ ಕೆಲವರು ವಿದ್ಯಾರ್ಥಿಗಳನ್ನು ಉಪಾಧ್ಯಾಯರು ಆಯ್ಕೆ ಮಾಡಿಕೊಳ್ಳುವ ಇತರ ಟ್ಯಾಗ್ ಆಟಗಳಂತೆಯೇ ಈ ಆಟವು ಇರುತ್ತದೆ ಮತ್ತು ಅವರು ಓಡುತ್ತಾ ಇತರ ಮಕ್ಕಳನ್ನು ಟ್ಯಾಗ್ ಮಾಡುತ್ತಾರೆ. ಈ ಒಂದು ವಿಧಾನದಲ್ಲಿ, ಆಟ ಆಡುವವರನ್ನು ಮುಟ್ಟುವುದರ ಬದಲಾಗಿ, ಅವರ ನೆರಳುಗಳ ಮೇಲೆ ಹೆಜ್ಜೆಯನ್ನು ಹಾಕುವುದರ ಮೂಲಕ ಟ್ಯಾಗ್ ಮಾಡಬೇಕು.

**ಚರ್ಚೆ (ಪಾಠ 1)**

(ಹಿರಿಯ ವಿದ್ಯಾರ್ಥಿಗಳಿಗಾಗಿ)



1. ಇದಾದ ಮೇಲೆ ಏನು ನಡೆಯುತ್ತದೆಯೆಂದು ನಿಮಗೆ ಗೊತ್ತಿದ್ದರೆ, ನೀವು ಮಾಡುತ್ತಿರುವುದು ಹೇಗೆ ಮಾರ್ಪಾಟು ಹೊಂದುವುದು?

ಲಾಟರಿ ಟಿಕೆಟ್.ಗಳನ್ನು ಕೊಂಡುಕೊಳ್ಳುವುದರ ಕುರಿತಾಗಿ, ಸ್ಟೈಲಿಶ್ ಬಟ್ಟೆಗಳನ್ನು ಕೊಂಡುಕೊಳ್ಳುವುದರ ಕುರಿತಾಗಿ, ಅಥವಾ ವಿಪತ್ತುಗಳನ್ನು ತಪ್ಪಿಸಿಕೊಳ್ಳುವುದರ ಕುರಿತಾಗಿ ಕೆಲವೊಂದು ನಿಮಿಷಗಳ ಕಾಲ ಮಾತನಾಡಲು ನಿಮ್ಮ ಸಮಯವನ್ನು ವೆಚ್ಚಗೊಲಿಸಿರಿ. ಊಹಿಸುವಂಥಹ ವಿಧಾನದಲ್ಲಿ ದೇವರು ಯಾವರೀತಿ ಕೆಲಸ ಮಾಡುತ್ತಾರೆನ್ನುವ ಆಲೋಚನೆಯ ಕುರಿತಾಗಿ ಮತ್ತು ಭೂತಕಾಲದಲ್ಲಿ ದೇವರು ಮಾಡಿರುವ ಕಾರ್ಯಗಳನ್ನು ನೋಡಿ ತಿಳಿದುಕೊಳ್ಳುವುದರ ಮೂಲಕ, ಆದಮೇಲೆ ದೇವರು ಏನು ಮಾಡಬಹುದೆಂದು ನಾವು ಹೇಗೆ ತಿಳಿದುಕೊಳ್ಳಬಹುದು ಎನ್ನುವುದರ ಕುರಿತಾಗಿ ಪರಿಚಯ ಮಾಡಿಸಿರಿ. ನಂಬಿಕೆಯಲ್ಲಿ ಒಂದು ಭಾಗ ಏನಂದರೆ ಇದಾದಮೇಲೆ ದೇವರು ಏನು ಮಾಡುತ್ತಾರೆಂದು ಮತ್ತು ಅದರಲ್ಲಿ ಅವರು ಹೇಗೆ ಪಾಲ್ಗೊಳ್ಳುತ್ತಾರೆಂದು ತಿಳಿದುಕೊಳ್ಳುವುದಾಗಿರುತ್ತದೆ. "ನನ್ನನ್ನು ಅಂಥ ಸಿಂಹದ ಮತ್ತು ಕರಡಿಯ ಉಗುರುಗಳಿಗೆ ತಪ್ಪಿಸಿದ ಯೆಹೋವನು ಈ ಫಿಲಿಪ್ಪಿಯನ ಕೈಗೂ ತಪ್ಪಿಸುವನು…." 1 ಸಮೂ.17:37.

2. ದಾವೀದನು ಗೊಲ್ಯಾತನನ್ನು ಕೊಲ್ಲುವುದಕ್ಕೆ ಮುಂಚಿತವಾಗಿ, ದಾವೀದನು ಗೊಲ್ಯಾತನನ್ನು ಅಪಹಾಸ್ಯಗೊಳಿಸಿದನು, ದಾವೀದನು ಗೊಲ್ಯಾತನನ್ನು ಅಪಹಾಸ್ಯಗೊಳಿಸಿದ್ದು ಯಾಕೆ ಸರಿಯಾಗಿರುತ್ತದೆ? ನೀವು ಇನ್ನೊಬ್ಬರನ್ನು ಅಪಹಾಸ್ಯಗೊಳಿಸುರುವುದು ಸರಿಯೆಂದು ಹೇಳುವ ಕಾರಣಗಳೇನು?


ಇದು ಒಂದು ವಿಧವಾದ ಟ್ರಿಕ್ (ಉಪಾಯವುಳ್ಳ) ಪ್ರಶ್ನೆಯಾಗಿರುತ್ತದೆ, ದಾವೀದನು ಗೊಲ್ಯಾತನನ್ನು ಹಿಯಾಳಿಸಿರುವುದು ಅಂಗೀಕಾರಯೋಗ್ಯವಲ್ಲ, ಆದರೆ, ಅದು ಕಥೆಯಲ್ಲಿ ಒಂದು ಭಾಗವಾಗಿರುತ್ತದೆ. ಅದು ತನ್ನ ನಂಬಿಕೆಯನ್ನು ತೋರಿಸುವುದಾಗಿದೆ.


3. ಭಾರೀ ದೊಡ್ಡ ರಣಶೂರನನ್ನು ಕೊಲ್ಲುವುದಕ್ಕೆ ದಾವೀದನಿಗೆ ಸಿಕ್ಕ ದೊಡ್ಡ ಅವಕಾಶ, ಇದು ಕೇವಲ ತನ್ನ ಸಹೋದರರಿಗೆ ಸೇವೆ


ಮಾಡುವದರಿಂದ ಮಾತ್ರ ಆ ಅವಕಾಶ ಸಿಕ್ಕಿದೆ. ಒಬ್ಬರಿಗೊಬ್ಬರಿಗೆ ನಾವು ಯಾವರೀತಿ ಸೇವೆ ಮಾಡಿಕೊಳ್ಳುತ್ತಿದ್ದೇವೆ ಮತ್ತು ಒಬ್ಬರನ್ನೊಬ್ಬರು ಯಾವರೀತಿ ನಡೆಸಿಕೊಳ್ಳುತ್ತಿದ್ದೇವೆ?

ಒಬ್ಬರಿಗೊಬ್ಬರು ಸೇವೆ ಮಾಡಿಕೊಳ್ಳುವುದು ಮತ್ತು ಒಬ್ಬ ರನ್ನೊಬ್ಬರು ನಡೆಸಿಕೊಳ್ಳುವುದು ವಿಭಿನ್ನವಾಗಿದ್ದರೂ; ಅಲ್ಲಿ ನಾಯಕತ್ವವನ್ನುಂಟು ಮಾಡುವ ಸೇವಾ ಭಾವನೆಯ ನಾಯಕತ್ವವು ಅಲ್ಲಿದೆ ಮತ್ತು ಆ ಸೇವೆಯು ಮಾದರಿಕರವಾಗಿದೆ. ಸೇವೆ ಮಾಡುವಾಗ, ನೀವು ಕೆಲವೊಂದು ಅವಕಾಶಗಳನ್ನು ಕಾಣಿಸಿಕೊಳ್ಳಬಹುದು; ನೀವು ಕಂಡ ಅವಕಾಶಗಳ ಪ್ರಕಾರ ನೀವು ನಡೆದುಕೊಳ್ಳುವುದಾದರೆ, ಅದು ನಾಯಕತ್ವದ ಮಾದರಿಯ ರೂಪವೆಂದು ನಿರೂಪಣೆಗೊಲಿಸುವಿರಿ.

## ವಿದ್ಯಾರ್ಥಿಗಳ ಪುಟಗಳಿಗೆ ಉತ್ತರಗಳು (ಪಾಠ 1)







## ಲೂಕಾಸ್ ರವರ ಪ್ರಯೋಗ (ಪಾಠ 1)

ಒಂದು ಪಾತ್ರೆಯಲ್ಲಿ (ಅಥವಾ ಗಡಿಗೆಯಲ್ಲಿ) ಒಂದು ಬಟ್ಟಲಿನ ಕಾಲ್ ಭಾಗ ನೀರಿನೊಂದಿಗೆ, ಕಾಲ್ ಭಾಗ ಬಟ್ಟಲಿನ ವೆನಿಗರ್ ಹಾಕಿರಿ. ಅದರೊಳಗೆ ಕಾಲ್ ಭಾಗ ಬಟ್ಟಲಿನ ಬೇಕಿಂಗ್ ಸೋಡಾವನ್ನು ಮಿಶ್ರಣಗೊಳಿಸಿರಿ. ಆ ಮಿಶ್ರಣವು ಬೊಬ್ಬೆಗಳಾಗಿ ಎದ್ದು ಬರುವುದು, ಕಾರ್ಬನ್ ಡಯಾಕ್ಸೈಡ್.ನೊಂದಿಗೆ ಆ ಪಾತ್ರೆಯು ತುಂಬಿರುತ್ತದೆ. ಅದು ಸಾಮಾನ್ಯವಾದ ಗಾಳಿಗಿಂತಲೂ ತುಂಬಾ ದಟ್ಟವಾಗಿರುತ್ತದೆ. ಆಗ ದ್ರವ ಪದಾರ್ಥವನ್ನು ಬಿಟ್ಟು, ಕಾರ್ಬನ್ ಡಯಾಕ್ಸೈಡ್.ನ್ನು ಬೆಳಗುತ್ತಿರುವ ಕ್ಯಾಂಡಲ್ ಮೇಲೆ ಸುರಿಸಿರಿ, ಆಗ ಕ್ಯಾಂಡಲ್ ಆರಿ ಹೋಗುತ್ತದೆ. (ಇದನ್ನು ಇನ್ನೂ ಸ್ಪಷ್ಟವಾಗಿ ಯೂ ಟ್ಯೂಬ್.ನಲ್ಲಿ ನೋಡಬಹುದು).
https://www.facebook.com/childrenareimportant/videos/1291835197519527/

# --[ ಕೇಸ್ 2 ]--



## ಸೂಚನೆಗಳು! (ಕ್ಲೂಸ್) (ಪಾಠ 2)

### 1 ಸೂಚನೆ 1# ಅಂಶ (ಪಾಠ 2)

ಕಾಣೆಯಾದ ಶವದ ಕೇಸ್

### 2 ಸೂಚನೆ 2# ನಾಟಕ (ಪಾಠ 2)

ಕಥೆ ಹೇಳುವವರು: ಈ ಕಥೆಯ ಕಲ್ಪನಾ ಕಥೆಯಾಗಿರುತ್ತದೆ, ಆದರೆ ಅಪರಾಧಿಯನ್ನು ರಕ್ಷಿಸಲು ಕೆಲವೊಂದು ಹೆಸರುಗಳು ಮತ್ತು ಸ್ಥಳಗಳು ಮಾರ್ಪಾಟು ಮಾಡಲಾಗಿದೆ.

ಪತ್ತೆದಾರ: ಅವರ ಹೆಜ್ಜೆ ಗುರುತುಗಳ ಚಿತ್ರಣವನ್ನು ತೆಗೆದುಕೊಂಡು ಬನ್ನಿರಿ, ಇದು ಸೆಟ್ ಸಂಖ್ಯೆ 5ರಂತೆ ಕಾಣಿಸಿಕೊಳ್ಳುತ್ತಿದೆ.



ಟೆಕ್: ಇಲ್ಲಿ ಪುರುಷರ ಗುರುತುಗಳ 2 ಸೆಟ್.ಗಳು ನನ್ನ ಬಳಿ ಇವೆ. ಅವರು ಓಡಿ ಹೋಗುತ್ತಿರುವಂತೆ ಅವುಗಳು ಕಾಣಿಸಿಕೊಳ್ಳುತ್ತಿವೆ.

ಪತ್ತೆದಾರ: ಆದರೆ ಅಲ್ಲಿ ನಮಗೆ ಬೂಟ್ ಗುರುತುಗಳಿವೆ. ಅವರು ನಿಂತುಕೊಂಡಿರುವ ಗಾರ್ಡ್.ಗಳಾಗಿ ಕಾಣಿಸುಕೊಳ್ಳುತ್ತಿದ್ದಾರೆ, ಅವರು ಎಷ್ಟು ಕೆಲಸವನ್ನು ಮಾಡಿರಬಹುದೋ ನೋಡಿರಿ.

ಟೆಕ್: ಇವು ತುಂಬಾ ಚಿಕ್ಕದಾಗಿ ಕಾಣಿಸಿಕೊಳ್ಳುತ್ತಿವೆ. ಅವರು 2 ಹೆಣ್ಣು ಮಕ್ಕಳಾಗಿರಬೇಕು, ಅಥವಾ ಮೂವರಾಗಿರುತ್ತಾರೆ,  ಇವರು ಸ್ವಲ್ಪ ದಪ್ಪವಾಗಿರಬಹುದು.

ಪತ್ತೆದಾರ: [ಇನ್ನೊಂದು ಕಡೆ ನೋಡಿದರೆ, ಇನ್ನೊಂದು ಮುದ್ರೆಯನ್ನು ಗಮನಿಸಬಹುದು] ಇದರ ಕುರಿತಾಗಿ ಏನು ಹೇಳಬಹುದು, ಈ ಮುದ್ರಣವು ತುಂಬಾ ದೊಡ್ಡದಾಗಿ ಕಾಣಿಸಿಕೊಳ್ಳುತ್ತಿದೆ, ಇದು ಟೆಕ್.ಯಿಂದ ಎಲ್ಲಾ ಸುತ್ತ ಮುತ್ತ ನೋಡುವಂತ ದೊಡ್ಡದಾಗಿದೆಯಾ???

ಟೆಕ್: ಹೌದು? [ಕೆಮರಾದಿಂದ ಮೇಲಕ್ಕೆ ನೋಡುತ್ತಾ]

ಪತ್ತೆದಾರ: ಮಲಿನಗೊಳಿಸುವ ಈ ಅಪರಾಧ ಸನ್ನಿವೇಶದ ಕುರಿತಾಗಿ ನಾನು ಏನೆಂದು ಹೇಳುವೆನು?

ಟೆಕ್: [ಗುಟುಕು ನುಂಗುತ್ತಾ] ಅದನ್ನು ಮತ್ತೊಂದುಬಾರಿ ನಾನು ಮಾಡಿದ್ದರೆ, ನನಗೆ ಸಿಟ್ಟು ಬರುತ್ತಿತ್ತು?

ಪತ್ತೆದಾರ: ನೀನು ಇಲ್ಲಿ ಇನ್ನೂ ಕೆಲಸ ಮಾದುತ್ತಿರುವೆಯಾ?

ಟೆಕ್: ಇಲ್ಲ

ಪತ್ತೆದಾರ: ನಿಜವಾಗಿ ಆಲೋಚನೆ ಮಾಡುವುದು ತುಂಬಾ ಕಷ್ಟ, ಇಲ್ಲಿ ನೀನು ನಡೆದಾಡಿದ್ದೀಯಾ ಅಥವಾ ಇಲ್ಲಿರುವ ಕಲ್ಮಶದ ಕುರಿತಾಗಿ ಆಲೋಚನೆ ಮಾಡುತ್ತಿರುವೆಯಾ?

ಟೆಕ್: ಇಲ್ಲ, ನಾನು ಪ್ರಮಾಣ ಮಾಡುತ್ತಿದ್ದೇನೆ!

ಪತ್ತೆದಾರ: ಇಲ್ಲಿ ನೀನೂ ಇಲ್ಲದಿದ್ದರೆ ಮತ್ತು ನಾನೂ ಇಲ್ಲದಿದ್ದರೆ, ಇಲ್ಲಿ ದೊಡ್ಡ ದೊಡ್ಡ ಪಾದ ಮುದ್ರೆಗಳು ಇಲ್ಲಿ ಮತ್ತು ಅಲ್ಲಿ ಹೇಗೆ ಬಂದವು (ಪಾದ ಮುದ್ರೆಗಳನ್ನು ತೋರಿಸುತ್ತಾ)?

ಟೆಕ್: ಆ ಸ್ತ್ರೀಯರು ಏನೋ ಒಂದನ್ನು ಹೊತ್ತುಕೊಂಡು ಹೋಗಿರುವಂತೆ ಕಾಣಿಸಿಕೊಳ್ಳುತ್ತಿದೆ.

ಪತ್ತೆದಾರ: ಹೌದು, ಆದರೆ ಅವರು ಅಷ್ಟು ದೊಡ್ಡದೇನೂ ಹೊತ್ತುಕೊಂಡು ಹೋಗಲಿಲ್ಲ, ಅವರು ಏನಾದರು ಚಿಕ್ಕ ಚಿಕ್ಕ ಡಬ್ಬಿಗಳು ಮತ್ತು ಬಟ್ಟೆಗಳನ್ನು ಹೊತ್ತುಕೊಂಡು ಹೋಗಿರಬಹುದು

ಟೆಕ್: ಓಡಿ ಹೋದ ಪುರುಷರು ಅಷ್ಟು ದೊಡ್ಡದಾಗಿ ಏನನ್ನು ತೆಗೆದುಕೊಂಡು ಹೋಗಿದ್ದಂತಿಲ್ಲ.

ಪತ್ತೆದಾರ: ನನಗೆ ಇದು ಅರ್ಥವಾಗುತ್ತಿಲ್ಲ. ಗುಹೆಯೊಳಗಿನಿಂದ ಬಂದ ಪಾದ ಮುದ್ರೆಗಳು ನನ್ನ ಬಳಿ ಇವೆ, ಆದರೆ ಗುಹೆಯೊಳಗೆ ಹೋದಂತ ಪಾದ ಮುದ್ರೆಗಳು ಇಲ್ಲ. ಓಡಿ ಹೋದಂತ ಪುರುಷರ ಪಾದ ಮುದ್ರೆಗಳು, ಬೂಟ್ ಮುದ್ರೆಗಳು, ಆದರೆ ಆ ದೊಡ್ಡ ಮುದ್ರೆಗಳು ಇಲ್ಲಿ ಕಾಣಿಸಿಕೊಳ್ಳುತ್ತಿವೆ ಮತ್ತು ಆ ದೊಡ್ಡ ಬಂಡೆಯ ಮೇಲೆ ಹಾದು ಹೋದಂತೆ ಕಾಣಿಸುತ್ತಿದೆ.

ಟೆಕ್: ಕಳೆದ ರಾತ್ರಿಯಲ್ಲಿ ಭೂಕಂಪವೇನಾದರೂ ಬಂದಿರಬೇಕು. ಆದರೂ ಇಲ್ಲಿರುವ ತೋಟವು ತುಂಬಾ ಚೆನ್ನಾಗಿದೆ.

ಪತ್ತೆದಾರ: ನೀನು ಏನು ಹೇಳುತ್ತಿದ್ದೀಯಾ?

ಟೆಕ್: ತೋಟವು ತುಂಬಾ ಸುಂದರವಾಗಿದೆ?

ಪತ್ತೆದಾರ: ಇಲ್ಲ, ಅದಕ್ಕೆ ಮುಂಚಿತವಾಗಿ ಏನು ಹೇಳಿದ್ದೀಯಾ....

## 3 ಸೂಚನೆ #3 ವಸ್ತು (ಪಾಠ 2)

ಒಂದು ಸೂಚನೆಯಾಗಿ ಈ ಭೌತಿಕ ವಸ್ತುವನ್ನು ತರಗತಿಗೆ ತೆಗೆದುಕೊಂಡು ಬನ್ನಿರಿ: ಅಲಾರ್ಮ್ ಗಡಿಯಾರ


## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 2)




ಚಿ ರೋ ವಿತ್ ಎ ವ್ರಾತ್" ಎನ್ನುವುದು ನೆಲ ಮಾಳಿಗೆಗಳಲ್ಲಿ ಕಂಡುಕೊಂಡಲ್ಪಟ್ಟಿದೆ, ಅಲ್ಲಿ ಅನೇಕ ರಹಸ್ಯ ಗುರುತುಗಳಿವೆ (ಸುಮಾರು 350) (ರಹಸ್ಯ: ಇದು ಪುನರುತ್ಥಾನದ ಜಯವನ್ನು ಸೂಚಿಸುತ್ತದೆ ಮತ್ತು ಇದನ್ನು ರೋಮಾ ಸೈನಿಕರ ಮೇಲ್ಭಾಗದಲ್ಲಿ ತೋರಿಸಲಾಗುತ್ತದೆ.)

**5** ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 2)

ರಹಸ್ಯ: ಮಗ್ದಳದ ಮರಿಯಳು ಸುಗಂಧ ದ್ರವ್ಯವನ್ನು ಸುರಿದಳು, ಕಾವಲುಗಾರರು, ತೋಟ ಮತ್ತು ತೋಟ ಮಾಲಿ ಕಾರಣದಿಂದ. ಯಾಕಂದರೆ ಮರಿಯಳು ಆತನನ್ನು ತೋಟದ ಮಾಲಿ ಅಂದುಕೊಂಡಿದ್ದಳು.



ಕೇಸ್ ಪರಿಷ್ಕರಿಸಲಾಗಿದೆ    ಕೇಸ್ ಪರಿಷ್ಕರಿಸಲಾಗಿದೆ

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 2)

ಕೇಸ್ ಪರಿಷ್ಕರಿಸಲಾಗಿದೆ! (ಪಾಠ 2)

**ಕ್ರಿಸ್ತನ ಪುನರುತ್ಥಾನ**

**ಬೈಬಲ್ ವಾಕ್ಯದಿಂದ: ಮತ್ತಾಯ 28; ಯೋಹಾನ.20:6-9**

ಏನೇನು ನಡೆಯಬೇಕೆಂದು ಯೇಸು ಹೇಳಿದ್ದನೋ, ಅವುಗಳೆಲ್ಲಾ ನಡೆಯುತ್ತಿರುವಾಗ ಶಿಷ್ಯರಿಗೆಲ್ಲರಿಗೆ ಆಶ್ಚರ್ಯ! ಯೇಸು ಹಿಡಿಯಲ್ಪಟ್ಟಿದ್ದಾನೆ, ಶ್ರಮೆಗಳನ್ನು ಹಿಂಸೆಗಳನ್ನು ವಹಿಸಿ, ಶಿಲುಬೆಗೆ ಏರಿಸಲ್ಪಟ್ಟಿದ್ದಾನೆ. ಮೂರು ದಿವಸಗಳಾದನಂತರ, ಬೆಳಗಿನ ಜಾವದಲ್ಲಿ ಪ್ರಧಾನ ಯಾಜಕರು ಕಾವಲುಗಾರರೊಂದಿಗೆ ರಹಸ್ಯ ಭೇಟಿಗೆ ಹೊರಟಿದ್ದರು. ಅಲ್ಲಿ ನಡೆದಿರುವ ಭಯಂಕರವಾದ ಭೂಕಂಪದ ಕುರಿತಾಗಿ ಕಾವಲುಗಾರರು ವಿವರಣೆ ಕೊಟ್ಟರು. ಕರ್ತನ ದೂತ ಕೆಳಗೆ ಇಳಿದು ಬಂದು ಸಮಾಧಿಯ ಕಲ್ಲನ್ನು ಉರುಳಿಸಿಟ್ಟಿದ್ದನು ಮತ್ತು ಆ ಕಲ್ಲಿನ ಮೇಲೆ ಆ ದೂತನು ಕೂತುಕೊಂಡಿದ್ದನು. ಆ ದೂತ ಬಿಳೀ ಅಂಗಿಯನ್ನು ಧರಿಸಿಕೊಂದಿದ್ದನು ಮತ್ತು ಆ ಉಡುಪು ಹಿಮದಂತೆ ಬೆಳಗುತ್ತಿತ್ತು.ಅವರು ಯಾವರೀತಿ ಹೆದರಿ ನಡುಗಿದ್ದರೋ ಮತ್ತು ಯಾವರೀತಿ ಸತ್ತವರಂತೆ ಆದರೋ ಅದರ ಅನುಭವವನ್ನು ಹಂಚಿಕೊಂಡರು. ಒಂದು ಪ್ರಣಾಳಿಕೆಯೊಂದಿಗೆ ಪ್ರಧಾನ ಯಾಜಕರು ಬಂದಿದ್ದರು, "ನಾವು ನಿದ್ದೆ ಹೋಗುತ್ತಿರುವಾಗ, ತನ್ನ ಶಿಷ್ಯರು ರಾತ್ರಿ ಸಮಯದಲ್ಲಿ ಬಂದು ಯೇಸುವಿನ ದೇಹವನ್ನು ತೆಗೆದುಕೊಂಡು ಹೋದರು" ಎನ್ನುವ ಸುಳ್ಳನ್ನು ಕಾವಲುಗಾರರು ಹೇಳುವುದಕ್ಕೆ ಯಾಜಕರು ಅವರಿಗೆ ತುಂಬಾ ಜಾಸ್ತಿ ಲಂಚವನ್ನು ಕೊಟ್ಟರು, ಇದರ ಸುದ್ದಿ ದೇಶಾಧಿಪತಿಯ ಕಿವಿಯಲ್ಲಿ ಬಿದ್ದರೆ, ನಿಮ್ಮನ್ನು ಕಾಪಾಡುವುದಕ್ಕೆ ಅವನನ್ನು ಸಮಾಧಾನಪಡಿಸುತ್ತೇವೆಂದು ಯಾಜಕರು ಹೇಳಿದರು. ಅವರಿಗೆ ತೊಂದರೆಯಾಗಬೇಕಾಗಿತ್ತು.

ಮರಿಯಳು ಮತ್ತು ಮಗ್ದಳದ ಮರಿಯಳು ಸಮಾಧಿಯ ಬಳಿಗೆ ಹೋದಾಗ, ಅಲ್ಲಿ ದೂತನು ಆ ಸ್ತ್ರೀಯರಿಗೆ ಹೇಳಿದ ಮಾತೇನಂದರೆ, ನೀವು ಹೆದರಬೇಡಿರಿ; ಶಿಲುಬೆಗೆ ಹಾಕಲ್ಪಟ್ಟಿದ್ದ ಯೇಸುವನ್ನು ಹುಡುಕುತ್ತೀರೆಂದು ಬಲ್ಲೆನು. ಆತನು ಇಲ್ಲಿ ಇಲ್ಲ; ತಾನು ಹೇಳಿದಂತೆ ಎದ್ದಿದ್ದಾನೆ; ಬನ್ನಿ, ಆತನು ಮಲಗಿದ್ದ ಸ್ಥಳವನ್ನು ನೋಡಿರಿ; ಮತ್ತು ಬೇಗ ಹೋಗಿ ಆತನ ಶಿಷ್ಯರಿಗೆ - ಸತ್ತವನು ಬದುಕಿದ್ದಾನೆ, ಆತನು ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆ, ಅಲ್ಲಿ ಆತನನ್ನು ಕಾಣುವಿರಿ ಎಂದು ತಿಳಿಸಿರಿ; ನಾನು ನಿಮಗೆ ಹೇಳಿದ್ದೇನೆ ನೋಡಿರಿ ಎಂದು ಹೇಳಿದನು". ಈ ಸುದ್ದಿಯನ್ನು ಎಲ್ಲರಿಗೆ ಹೇಳುವುದಕ್ಕೆ ಆ ಸ್ತ್ರೀಯರು ಆ ಸಮಾಧಿಯಿಂದ ಬೇಗನೆ ಹೊರಟುಹೋದರು. ಯೇಸು ಅವರ ಎದುರಿಗೆ ಬಂದು - ಹೆದರಬೇಡಿರಿ; ನನ್ನ ಸಹೋದರರ ಬಳಿಗೆ ಹೋಗಿ ಅವರು ಗಲಿಲಾಯಕ್ಕೆ ಹೋಗಬೇಕೆಂದು ಹೇಳಿರಿ; ಅಲ್ಲಿ ನನ್ನನ್ನು ನೋಡುವರು ಎಂದು ಹೇಳಿದನು."

ಪೇತ್ರನು ಮತ್ತು ಯೋಹಾನನು ತಮ್ಮಷ್ಟಕ್ಕೆ ತಾವೇ ಇದನ್ನು ಅವರು ನೋಡಬೇಕಾಗಿತ್ತು, ಅವರು ಸಮಾಧಿಯೊಳಗೆ ನೇರವಾಗಿ ಹೊರಟುಹೋದರು. ಆ ಸಮಾಧಿಯೊಳಗೆ ಅವರು ಬಟ್ಟೆಗಳನ್ನು ಮಾತ್ರ ಕಂಡುಕೊಂಡರು. ಅವರು ಆ ಆಧಾರವನ್ನು ನೋಡಿದಾಗ, ಯೇಸು ನಿಜವಾಗಿ ಮರಣದಿಂದ ಎಬ್ಬಿಸಲ್ಪಟ್ಟಿದ್ದಾನೆಂದು ತಿಳಿದು, ಆ ಸುದ್ದಿಯನ್ನು ನಂಬಿದರು!

### ಅನ್ವಯ (ಪಾಠ 2)

ಎಲ್ಲವು ತಪ್ಪಾದ ಹಾದಿಯಲ್ಲಿ ಹೊರಟು ಹೋಗುತ್ತಿವೆಯೆಂದು ನಾನು ತಿಳಿದುಕೊಂಡಿದ್ದರೂ, ದೇವರು ಇನ್ನೂ ನಂಬಿಗಸ್ತನಾಗಿರುವನು.

### ಕಂಠಪಾಠ ವಾಕ್ಯ (ಪಾಠ 2)

ನಂಬಿಗಸ್ತನು; ಕರ್ತನಾದ ಯೇಸುಕ್ರಿಸ್ತನೆಂಬ ತನ್ನ ಮಗನ ಅನ್ಯೋನ್ಯತೆಗೆ ನಿಮ್ಮನ್ನು ಕರೆದವನು ಆತನೇ." - 1 ಕೊರಿಂಥ.1:9

### ಮನೆಗೆಲಸ (ಪಾಠ 2)

ನೀವು ಅನುಭವಿಸಿದ ಕೆಟ್ಟದಾದ ಸಮಯದ ಕುರಿತಾಗಿ ಬೇರೆ ಯಾರದರೊಬ್ಬರಿಗೆ ಹೇಳಿರಿ, ಆದರೆ ಅದೆಲ್ಲಾ ಒಳ್ಳೆಯದಕ್ಕಾಗಿಯೇ ಮಾರ್ಪಾಟು ಹೊಂದುತ್ತದೆ. ಇದರ ಮೂಲಕವೇ ದೇವರು ಕೆಲವೊಂದು ಪ್ರಾಮುಖ್ಯವಾದ ವಿಷಯಗಳನ್ನು ನಿಮಗೆ ತಿಳಿಸಿಕೊಡುತ್ತಾರೆ.

### ದೇವರ ಡಿ.ಏನ್.ಎ (ಪಾಠ 2)




ಈ ಪಾಠದಿಂದ ದೇವರ ಕುರಿತಾಗಿ ನಾವು ಏನನ್ನು ಕಲಿತುಕೊಳ್ಳುತ್ತಿದ್ದೇವೆ? ಯೇಸುವಿನ ಕುರಿತಾಗಿ ಮತ್ತು ಅವರು ಯಾಕೆ ಈ ಲೋಕಕ್ಕೆ ಬಂದಿದ್ದಾರೆಂದು ಜನರೆಲ್ಲರೂ ತಿಳಿದುಕೊಳ್ಳಬೇಕೆಂದು ದೇವರು ಬಯಸಿದ್ದಾರೆ.



## ವಿನೋದ ಸಮಯ! (ಪಾಠ 2)

### ಆಟ (ಪಾಠ 2)

ಒಂದು ತರಗತಿಯಲ್ಲಿ ಬಲೂನ್ ಸಾಕ್ಸರ್

ವಿದ್ಯಾರ್ಥಿಗಳನ್ನು ಎರಡು ತಂಡಗಳಾಗಿ ವಿಭಾಗಿಸಿರಿ, ಕುರ್ಚಿಗಳ ಎರಡು ಸಾಲಾಗಿ ಅವುಗಳಲ್ಲಿ ಅವರನ್ನು ಕೂತುಕೊಳ್ಳುವುದಕ್ಕೆ ಹೇಳಿರಿಅವ ಅವರಿಗೆ ಒಂದು ಮೀಟರ್ ದೂರದಲ್ಲಿ ಎರಡು ತಂಡಗಳಿಂದ ಉಳಿದ ಆಟಗಾರರನ್ನು ಕೂಡಿಸಿರಿ. ಎರಡು ತಂಡಗಳ ಕೊನೆಯ ಭಾಗದಲ್ಲಿ ಗೋಲ್ ಪೋಸ್ಟ್.ಗಳನ್ನು ಅಂಟಿಸಿರಿ. ನಾಯಕನು ಅವರ ಮಧ್ಯೆದಲ್ಲಿ ಒಂದು ಬಲೂನ್ ಟಾಸ್ ಹಾಕುವಂತೆ ಹಾರಿಸುವನು. ಆಟಗಾರರೆಲ್ಲರೂ ಅವರು ಕುಳಿತಂತ ಕುರ್ಚಿಗಳಲ್ಲಿಯೇ ಕುಳಿತುಕೊಂಡಿರಬೇಕು. ಆಟದ ಮುಖ್ಯ ಉದ್ದೇಶವೇನಂದರೆ ಬಲೂನ್.ನನ್ನು ನೆಲದ ಮೇಲೆ ಹೊಡೆದುಕೊಂಡು ಹೋಗುತ್ತಾ ಗೋಲ್ ಮಾಡಬೇಕು. ಸಾಕ್ಸರ್ ಆಟದಲ್ಲಿ ಇರುವಂತೆಯೇ ಆಡಬೇಕು,  ಆ ಬಲೂನ್ ಹಾಕಿರುವ ಹದ್ದುಗಳನ್ನು ದಾಟಿ ಹೋದರೆ, ನಾಯಕನು  ಆಟವನ್ನು ಆರಂಭಿಸಲು ಅಥವಾ ಬಲೂನ್.ನನ್ನು ಮೇಲಕ್ಕೆ ಹಾರಿಸುವುದಕ್ಕೆ ಇನ್ನೊಂದು ತಂಡಕ್ಕೆ ಕೊಡುತ್ತಾನೆ.

### ಚರ್ಚೆ (ಪಾಠ 2)

(ಹಿರಿಯ ವಿದ್ಯಾರ್ಥಿಗಳಿಗಾಗಿ)

1. ಶಿಷ್ಯರೆಲ್ಲರೂ ಕ್ರಿಸ್ತನ ಮರಣವನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲದ ಕಾರಣದಿಂದ ಒಂದು ಮನೆಯಲ್ಲಿ ಸೇರಿ ಬಚ್ಚಿಟ್ಟುಕೊಂಡಿದ್ದರು. ಇತರರು ಯಾರಾದರೂ ದೇವರ ವಾಕ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿದ್ದರೆ, ನೀವು ಯಾವರೀತಿ ಸ್ಪಂದಿಸುವಿರಿ? ನಿಮಗೆ ಬೈಬಲ್ ಸರಿಯಾಗಿ ಅರ್ಥವಾಗುತ್ತಿದೆಯೆಂದು ನೀವು ಹೇಗೆ ತಿಳಿಯುವಿರಿ?

ಸತ್ಯವೇದವನ್ನು ಅರ್ಥಮಾಡಿಕೊಳ್ಳುವುದಕ್ಕೆ ನಿಮ್ಮ ಹಿರಿಯರ ಸಹಾಯವನ್ನು ತೆಗೆದುಕೊಳ್ಳಿರಿ. ಸತ್ಯವೇದದಲ್ಲಿರುವ ಇತರ ವಾಕ್ಯಭಾಗದ ಸ್ಪಷ್ಟವಾದ ಅರ್ಥದೊಂದಿಗೆ ಇನ್ನೊಂದು ಬೈಬಲ್ ವಾಕ್ಯಬಾಗದ ಕುರಿತಾಗಿ ನಾನು ಅರ್ಥಮಾಡಿಕೊಂಡಿರುವ ಅರ್ಥವು ವಿಭೇದಕ್ಕೆ ಒಳಗಾಗದಂತೆ ನೋಡಿಕೊಳ್ಳಿರಿ.

2. ದೇವರು ಮಾಡಿದ ಕಾರ್ಯವನ್ನು ಜನರಿಗೆ ಹೇಳಬೇಡಿರೆಂದು ಸಿಪಾಯಿಗಳನ್ನು ಒತ್ತಡಕ್ಕೆ ಗುರಿ ಮಾಡಿದರು. ದೇವರ ಕುರಿತಾಗಿ ಜನರಿಗೆ ಹೇಳಬೇಕೆಂದು ನೀವು ಆಲೋಚನೆ ಮಾಡಿಗಾಗ ನೀವು ಯಾವ ಯಾವ ಒತ್ತಡಗಳಿಗೆ ಗುರಿಯಾಗುತ್ತೀರಿ?


ಒತ್ತಡದ ಕುರಿತಾಗಿ ಮಕ್ಕಳನ್ನೇ ಮಾತನಾಡಿಸಿರಿ, ತುಂಬಾ ಒಳ್ಳೇಯವರಾಗಿ ಅಥವಾ ತುಂಬಾ ಭಕ್ತಿಯುಳ್ಳವರಾಗಿ ಇರಬಾರದೆಂದು ಸ್ನೇಹಿತರು ನಮಗೆ ಹೇಳುತ್ತಿರುತ್ತಾರೆ, ಹೀಗೆ ತುಂಬಾ ಹೆಚ್ಚಿನ ಸಮಯ ಮಕ್ಕಳು ಕಳೆಯುತ್ತಾರೆ ಮತ್ತು ಒಬ್ಬರು ಹೇಳಿದ ಉತ್ತರವು ಮತ್ತೊಬ್ಬರು ಹೇಳದಂತೆ ನೋಡಬಹುದು. ಒಳಗಿನ ಒತ್ತಡದ ಕುರಿತಾಗಿ ಮಾತನಾಡಿರಿ, ನಾವು ನಮ್ಮ ಸ್ವಾರ್ಥವನ್ನು ಮತ್ತು ನಮ್ಮನ್ನು ನಾವು ಸಂತೋಷಪಡಿಸಿಕೊಳ್ಳುವುದನ್ನು ನೋಡಿಕೊಳ್ಳುತ್ತೇವೆ. ಹತೋಟಿಯಲ್ಲಿರುವ ಒಳ್ಳೇಯ ಮತ್ತು ಆರೋಗ್ಯಕರವಾದ ಕೆಲಸಕ್ಕೆಬಾರದ ಕಾರ್ಯಗಳನ್ನು ಆಯ್ಕೆ ಮಾಡಿಕೊಳ್ಳುವುದು ತುಂಬಾ ಸುಲಭ, ಆದರೆ ಅವು ಹೆಚ್ಚಾದಲ್ಲಿ ತುಂಬಾ ಅಪಾಯಕರ. ಕುಟುಂಬ ಒತ್ತಡವನ್ನು ನಿರ್ಲಕ್ಷ್ಯ ಮಾಡಬೇಡಿರಿ. ಯೇಸುವಿನ ಕುರಿತಾಗಿ ಮಾತನಾಡಬಾರದೆಂದು ನಿಮ್ಮ ಬಂಧುಗಳು ನಿಮ್ಮನ್ನು ಕೇಳುತ್ತಾರೆ, ಅಥವಾ ಅವರ ಧರ್ಮ ಕಾರ್ಯಗಳಲ್ಲಿ ನೀವು ಪಾಲ್ಗೊಳ್ಳಬೇಕೆಂದು ನಿಮ್ಮನ್ನು ಒತ್ತಡ ಮಾಡುತ್ತಾರೆ. ಈ ಎಲ್ಲಾ ಒತ್ತಡಗಳಲ್ಲಿ, ತುಂಬಾ ಸಮತೋಲನವಿದೆ, ನಮ್ಮ ಸುತ್ತಮುತ್ತಲಿರುವ ಜನರನ್ನು ಪ್ರೀತಿಸುವುದು ಅವರನ್ನು ಗೌರವಿಸುವಂತಿರುತ್ತದೆ ಮತ್ತು ವಿಭಿನ್ನತೆಯಾಗಿ ಇರಬೇಕಾಗಿರುತ್ತದೆ, ಆದರೆ ಅದೇ ಸಮಯದಲ್ಲಿ ನಾವು ದೇವರಿಗೆ ನಂಬಿಗಸ್ತರಾಗಿ ಇರಬೇಕೆಂದು ಆತನು ನಮ್ಮಿಂದ ಬಯಸುತ್ತಿದ್ದಾನೆ.





3. ಶಿಷ್ಯರಿಗೆಲ್ಲರಿಗೆ ಒಂದು ಸಂದೇಶವನ್ನು ಹಂಚಲು ದೇವರು ಸ್ತ್ರೀಯರನ್ನು ಆರಿಸಿಕೊಂಡಿದ್ದಾರೆ. ಅವರ ಮಾತನ್ನು ಶಿಷ್ಯರು ಕೇಳಿಸಿಕೊಳ್ಳದಿದ್ದರೆ ಏನು ಆಗುತ್ತಿತ್ತು? ಇತರರಿಗೂ ಮತ್ತು ನಮಗೂ ಕೊಡುವ ದೇವರ ಸಂದೇಶಗಳನ್ನು ನಾವು ಕಳೆದುಕೊಳ್ಳುತ್ತಿರಲಿಲ್ಲ ಎಂದು ಖಂಡಿತವಾಗಿ ನಾವು ಹೇಳುತ್ತಿದ್ದೀವೋ?

ವಿವಾದಾಸ್ಪದವಾದ ಚರ್ಚೆಯನ್ನು ಆರಂಭಿಸುವುದಕ್ಕೆ ಸಭೆಯಲ್ಲಿನ ಸ್ತ್ರೀಯರ ವಿಷಯವನ್ನು ಉಪಯೋಗಿಸುವುದರ ಮೂಲಕ ಎಲ್ಲರು ಮಾತನಾಡುವಂತೆ ಮಕ್ಕಳನ್ನು ಒಂಗೂಡಿಸಿರಿ. ಅವರು ಸ್ತ್ರೀಯರ ಸ್ಥಾನದಲ್ಲಿದ್ದು ಮಾತನಾಡಲು ಅವಕಾಶವನ್ನು ಕೊಡಿರಿ, ಆದನಂತರ ದೇವರು ಪ್ರತಿಯೊಬ್ಬರಿಗೂ ವಿವಿಧವಾದ ವರಗಳು ಅನುಗ್ರಹಿಸಿದ್ದಾನೆ ಮತ್ತು ಅವರ ವರಗಳ ತಕ್ಕಂತೆ ಯಾರ ಮಾತನ್ನಾದರೂ ನಾವು ಲಕ್ಷ್ಯ ವಿಡದಿದ್ದರೆ, ಅವರ ಮೂಲಕ ನಮಗೋಸ್ಕರ ದೇವರು ಹೇಳ ಬಯಸುವ ಸಂದೇಶವನ್ನು ಕಳೆದುಕೊಳ್ಳುತ್ತೇವೆಂದು ಸ್ಪಷ್ಟವಾಗಿ ತೋರಿಸುವ ಎಫೆಸ. 4 ಮತ್ತು 1 ಕೊರಿಂಥ.12 ಅಧ್ಯಾಯಗಳನ್ನು ತೋರಿಸಿರಿ.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 2)



### ಲೂಕಾಸ್ ರವರ ಪ್ರಯೋಗ (ಪಾಠ 2)

ಮೂರು ವಸ್ತುಗಳು ಬಚ್ಚಿಟ್ಟಲ್ಪಟ್ಟಿವೆಯೆಂದು ವಿದ್ಯಾರ್ಥಿಗಳು ತಿಳಿದುಕೊಳ್ಳುವಂತೆ ಹೇಳಿರಿ: ಒಂದು ವಸ್ತುವು ಬಚ್ಚಿಟ್ಟಲ್ಪಟ್ಟಿದೆ, ಆದರೆ ಸಿಕ್ಕಿದೆ; ಮತ್ತೊಂದು ವಸ್ತುವು ಬಚ್ಚಿಟ್ಟಲ್ಪಟ್ಟಿದೆ, ಆದರೆ ಸಿಗಲೇ ಇಲ್ಲ; ಇನ್ನೊಂದು ವಸ್ತುವು ಬಚ್ಚಿಟ್ಟಲ್ಪಟ್ಟಿದೆ, ಆದರೆ ತನ್ನಷ್ಟಕ್ಕದೆ ಬಿಟ್ಟು ಹೋಗುತ್ತದೆ. ಇದನ್ನು ಒಂದು ವಿನೋದಾತ್ಮಕವಾದ ಚಟುವಟಿಕೆಯಾಗಿರುವಂತೆ, ಅವರು ಹುಡುಕಿ ಕಂಡುಕೊಳ್ಳುವಂತೆ ಕೆಲವೊಂದು ವಸ್ತುಗಳನ್ನು ನಿಮ್ಮ ತರಗತಿಯಲ್ಲಿ ಬಚ್ಚಿಡಿರಿ. (ಇನ್ನೂ ಹೆಚ್ಚಿನ ವಿವರಿಗಳಿಗೆ ಯೂ ಟ್ಯೂಬ್.ನಲ್ಲಿ ನೋಡಿರಿ).

https://www.facebook.com/childrenareimportant/videos/1291864664183247/

# --[ ಕೇಸ್ 3 ]--

## ಸೂಚನೆಗಳು! (ಕ್ಲೂಸ್) (ಪಾಠ 3)

### 1 ಸೂಚನೆ 1# ಅಂಶ (ಪಾಠ 3)

ನೀರಿನೊಳಗೆ ಎಸೆಯಲ್ಪಟ್ಟ ಒಬ್ಬ ಮನುಷ್ಯನ ಕೇಸ್

### 2 ಸೂಚನೆ 2# ನಾಟಕ (ಪಾಠ 3)

ಕಥೆ ಹೇಳುವವರು: ಈ ಕಥೆಯ ಕಲ್ಪನಾ ಕಥೆಯಾಗಿರುತ್ತದೆ, ಆದರೆ ಅಪರಾಧಿಯನ್ನು ರಕ್ಷಿಸಲು ಕೆಲವೊಂದು ಹೆಸರುಗಳು ಮತ್ತು ಸ್ಥಳಗಳು ಮಾರ್ಪಾಟು ಮಾಡಲಾಗಿದೆ.

ಕೇಪ್ಟನ್: ಈ ರಿಪೋರ್ಟನ್ನು (ವರಧಿಯನ್ನು) ನಾನು ಫೈಲ್ ಮಾಡಬೇಕು.

ಕೋಸ್ಟ್ ಗಾರ್ಡ್: ಆಯಿತು, ಅಸಹಜವಾದ ಘಟನೆಗಳನ್ನೂ ರಿಪೋರ್ಟ್ ಮಾಡುವುದಕ್ಕೋಸ್ಕರ ಇಲ್ಲಿ ಕೆಲವೊಂದು ಪತ್ರಗಳಿವೆ. ನಿಮಗೆ ಯಾವ ಪತ್ರ ಬೇಕು?

ಕೇಪ್ಟನ್: ನೀರಿನೊಳಗೆ ಎಸೆಯಲ್ಪಟ್ಟ ಒಬ್ಬ ಮನುಷ್ಯನು.

ಕೋಸ್ಟ್ ಗಾರ್ಡ್: ನೀವು ಅವನನ್ನು ರಕ್ಷಿಸಿದ್ದೀರೋ?

ಕೇಪ್ಟನ್: ಇಲ್ಲ ಸಾರ್, ನಾವು ರಕ್ಷಿಸುವುದಕ್ಕಾಗಲಿಲ್ಲ.

ಕೋಸ್ಟ್ ಗಾರ್ಡ್: ವಾತಾವರಣವು ಹೇಗಿತ್ತು? ಅಂಥ ಭಯಂಕರವಾದ ಬಿರುಗಾಳಿಯಲ್ಲಿ ನೀವೇನಾದರು ಸಿಲುಕಿಕೊಂಡಿದ್ದೀರೋ?

ಕೇಪ್ಟನ್: ಹೌದು ಸಾರ್, ನಾವೆಲ್ಲರು ಸಾಯಬೇಕಾದ ಪರಿಸ್ಥಿತಿ ಬಂದಿತ್ತು.

ಕೋಸ್ಟ್ ಗಾರ್ಡ್: ಓಕೇ, ನಿಮ್ಮ ಹಡಗಿನಲ್ಲಿರುವ ಸಾಮಾನುಗಳೇನಾದರು ಕಳೆದುಕೊಂಡು ನಷ್ಟವನ್ನು ಹೊಂದಿದ್ದೀರಾ? ನೀವೇನಾದರೂ ಸಾಮಾನುಗಳನ್ನು ಕಳೆದುಕೊಂಡಿದ್ದರೆ, ನೀವು ಈ ಪತ್ರವನ್ನು ತುಂಬಿಸಿರಿ.

ಕೇಪ್ಟನ್: ಅವನು ಪ್ರಯಾಣಿಕನು.

ಕೋಸ್ಟ್ ಗಾರ್ಡ್: ಓ..ಹೌದಾ, ಆದರೆ ನೀವು ಇಲ್ಲಿರುವ ಇನ್ನೊಂದು ಪತ್ರವನ್ನು (ಫಾರ್ಮ್) ತುಂಬಿಸಬೇಕು, ಅದರ ಮೂಲಕ ನಾವು ಸತ್ತಂತ ವ್ಯಕ್ತಿಯ ಕುಟುಂಬಕ್ಕೆ ಸಮಾಚಾರವನ್ನು ತಿಳಿಸಿಕೊಡುತ್ತೇವೆ, ಅವನಿಗೆ ವ್ಯಕ್ತಿಗತವಾದ ಒತ್ತಡಗಳೇನಾದರೂ ಇವೆಯೋ?

ಕೇಪ್ಟನ್: ಅವನು ಸತ್ತಿದ್ದಾನೋ ಇಲ್ಲವೋ ಎಂದು ಇನ್ನೂ ಖಂಡಿತವಾಗಿ ಗೊತ್ತಿಲ್ಲ.

ಕೋಸ್ಟ್ ಗಾರ್ಡ್: ನೀವು ಅವನನ್ನು ಭಯಂಕರವಾದ ಬಿರುಗಾಳಿಯಲ್ಲಿ ಸಮುದ್ರದಲ್ಲಿ ಅವನನ್ನು ಕಳೆದುಕೊಂಡಿದ್ದೀರಲ್ಲವೋ?

ಕೇಪ್ಟನ್: ಹೌದು, ಆದರೆ ಅದು ಬಿರುಗಾಳಿ ಬಂದಾದ ಮೇಲೆ ನಡೆದಿದೆ.

ಕೋಸ್ಟ್ ಗಾರ್ಡ್: ಅವನ ಹಿಂದೆ ಹೋಗುವುದಕ್ಕೆ ನೀವು ಪ್ರಯತ್ನಪಟ್ಟಿದ್ದೀರೋ?

ಕೇಪ್ಟನ್: ಅವನು ಒಂದು ತರಾ..ಅವನ ಹಿಂದೆ ಹೋಗುವುದಕ್ಕೆ ಸಿದ್ಧವಾಗುತ್ತಿರುವಾಗಲೇ, ಅವನು ಕಾಣೆಯಾದ....


### 3 ಸೂಚನೆ #3 ವಸ್ತು (ಪಾಠ 3)




ಒಂದು ಸೂಚನೆಯಾಗಿ ಈ ಭೌತಿಕ ವಸ್ತುವನ್ನು ತರಗತಿಗೆ ತೆಗೆದುಕೊಂಡು ಬನ್ನಿರಿ:
ಮೀನಿಗೆ ಗಾಳ ಹಾಕುವ ಕೊಂಡಿ

### 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 3)

ಸಾಮ್ರಾಜ್ಯಶಾಹಿಯಾಗಿರುವ ನಿನೆವೆ ಎನ್ನುವ ಪಟ್ಟಣವು 1,50,000 ಜನಸಂಖ್ಯೆಗಿಂತಲೂ ದೊಡ್ಡದಾದ ನಗರ. ಭವ್ಯವಾದ ಸ್ಥಳಗಳು, ಗುಡಿಗಳು, ದೊಡ್ಡ ದೊಡ್ಡ ಗೋಡೆಗಳು ಮತ್ತು ಗೋಪುರಗಳನ್ನು ಒಳಗೊಂಡಿರುವ ನಗರ. ಇಲ್ಲಿ ಕಾಣಿಸುತ್ತಿರುವ ಆಧುನಿಕ ಚಿತ್ರವು ನಿನೆವೆ ಗೋಡೆಗಳನ್ನು ತೋರಿಸುತ್ತಿದೆ. ಆ ಗೋಡೆಯಲ್ಲಿ ಕೆಲವೊಂದು ಭಾಗಗಳನ್ನು ತಿರುಗಿ ನಿರ್ಮಿಸಿದ್ದಾರೆ. (ರಹಸ್ಯ: ನಿನೆವೆ ಎನ್ನುವ ಪಟ್ಟಣವು ದೇವರು ಯೋನಾನನ್ನು ಕಳುಹಿಸಿದ ಪಟ್ಟಣವಾಗಿದೆ.)



### 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 3)

ರಹಸ್ಯ: ಹಡಗಿನ ಮೇಲೆ ತುಂಬಾ ಭಯಂಕರ ಪರಿಸ್ಥಿತಿಯಾಗಿದ್ದಿತ್ತು. ಯಾಕಂದರೆ ನಾವಿಕರು "ಹಡಗಿನ ಸಾಮಾನುಗಳನ್ನು" ನೀರಿನಲ್ಲಿ ಬೀಸಾಡಿದರು, ಬಿರುಗಾಳಿಯ ಮೇಘವು ಕಾಣೆಯಾಯಿತು. ಆದ್ದರಿಂದ ತುಫಾನು ನಿಂತುಹೋಯಿತು.

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 3)

## ಬೈಬಲ್ ಕಥೆ (ಪಾಠ 3)

**ಯೋನನು**

**ಬೈಬಲ್ ವಾಕ್ಯದಿಂದ: ಯೋನಾ 1**



ಕರ್ತನ ದೃಷ್ಟಿಯಲ್ಲಿ ಅನೇಕವಾದ ಕೆಟ್ಟ ಕಾರ್ಯಗಳು ನಿನೆವೆ ಎನ್ನುವ ಪಟ್ಟಣದಲ್ಲಿ ನಡೆಯುತ್ತಾಯಿದ್ದವು, ಆಗ ದೇವರು ಯೋನನಿಗೆ, ನೀನು ಆ ಪಟ್ಟಣಕ್ಕೆ ಹೋಗಿ ಅವರನ್ನು ಎಚ್ಚರಿಸು ಎಂದು ಹೇಳಿದರು. ಅವರ ಪಾಪಗಳನ್ನು ನಿಲ್ಲಿಸಬೇಕೆನ್ನುವುದೇ ದೇವರ ಬಯಕೆಯಾಗಿತ್ತು. ಇದಕ್ಕೆ ಯೋನನು ವಿಧೇಯತೆಯನ್ನು ತೋರಿಸುವುದಕ್ಕೆ ಬದಲಾಗಿ, ಬೇರೆ ಯಾವುದೋ ಒಂದು ದೂರದಾಚೆಗೆ ಹೋಗುವ ಒಂದು ಹಡಗಿನಲ್ಲಿ ಏರುತ್ತಾನೆ. ಯೋನನು ಆ ಹಡಗಿನಲ್ಲಿ ಮಲಗುವುದಕ್ಕೆ ಹೋದ ತಕ್ಷಣವೇ, ಆ ಹಡಗಿನಲ್ಲಿರುವ ಜನರೆಲ್ಲರೂ ತುಫಾನು ಬರುವುದನ್ನು ನೋಡಿದರು. ಕೆಲವು ಗಂಟೆಗಳಾದನಂತರ, ಅಷ್ಟು ಭಯಂಕರವಾದ ತುಫಾನು ಸಮಯದಲ್ಲಿಯೂ ಈ ಮನುಷ್ಯನು ಹೇಗೆ ಮಲಗಿದ್ದಾನೆಂದು ಕೇಪ್ಟನ್ ನೋಡಿ ಬೆರಗಾದನು. ಆ ಹಡಗು ಸಮುದ್ರದಲ್ಲಿ ಮುಳುಗಿ ಹೋಗುತ್ತದೆಯೆಂದು ಎಲ್ಲರು ತಿಳಿದು, ದೇವರು ಯಾಕೆ ಈ ತುಫಾನು ಕಳುಹಿಸಿದ್ದಾನೆಂದು ತಿಳಿದುಕೊಳ್ಳಬೇಕೆಂದಿದ್ದರು. ಇದಕ್ಕೆ ಯಾರು ಕಾರಣವೆಂದು ತಿಳಿಯಬೇಕೆಂದರೆ, ಚೀಟುಗಳು ಹಾಕುವುದು ಉತ್ತಮವೆಂದ, ಚೀಟುಗಳು ಹಾಕಿದರು. ಅದರಲ್ಲಿ ಚೀಟು ಹೊರ ತೆಗೆದಾಗ, ಅದು ಯೋನನಿಗೆ ಬಂತು. ಅವರೆಲ್ಲರೂ ಈಗ ನಡೆಯುತ್ತಿದೆಯೆಂದು ತಿಳಿದುಕೊಳ್ಳಬೇಕೆಂದು ಬಯಸಿದ್ದರು. ಆಗ ಯೋನನು ತನ್ನ ಪಾಪಗಳನ್ನು ಒಪ್ಪಿಕೊಂಡನು ಮತ್ತು ನನ್ನನ್ನು ಆ ಸಮುದ್ರದೊಳಗೆ ಎಸೆದುಹಾಕಿರಿ ಎಂದು ಅವರಿಗೆ ಹೇಳಿದನು. ಅದನ್ನು ಮಾಡುವುದಕ್ಕೆ ಅಲ್ಲಿರುವವರಿಗೆ ಇಷ್ಟವಿದ್ದಿಲ್ಲ. ಆದರೆ ಅವರು ಆ ಹಡಗನ್ನು ಕಡಲಿಗೆ ತರಬೇಕೆಂದು ಪ್ರಯತ್ನಪಟ್ಟರು. ಆದರೆ ಯೋನನನ್ನು ಸಮುದ್ರದೊಳಗೆ ಎಸೆಯುವುದೇ ಒಂದೇ ಮಾರ್ಗವೆಂದು ತೀರ್ಮಾನ ತೆಗೆದುಕೊಳ್ಳುವತನಕ ಆ ತುಫಾನು ತುಂಬಾ ಕೆರಳಿಸುತ್ತಿತ್ತು. ಯೋನನು ಆ ನೀರಿನೊಳಗೆ ಎಸೆಯಲ್ಪಟ್ಟನು, ಆಗ ತುಫಾನು ನಿಂತುಹೋಯಿತು. ಆಗ ಹಡಗು ಕದಲದಂತೆ ನೆಮ್ಮದಿಯಿಂದ ಹೋಯಿತು! ಯೋನನು ನೀರಿನೊಳಗೆ ಈಜುವುದಕ್ಕೆ ಆರಂಭಿಸಿದಾಗ, ಒಂದು ದೊಡ್ಡ ಮೀನು ಬಂದು, ತನ್ನನ್ನು ನುಂಗಿಬಿಟ್ಟಿತು. ಮೂರು ಹಗಲು ಮೂರು ರಾತ್ರಿ ಯೋನನು ಮೀನಿನ ಹೊಟ್ಟೆಯಲ್ಲಿ ಇದ್ದಿದ್ದನು. ಆ ಮೀನಿನ ಹೊಟ್ಟೆಯಲ್ಲಿ ಯೋನನು ಮಾಡಬಹುದಾದ ಒಂದೇ ಒಂದು ಕೆಲಸವೇನಂದರೆ ಅದು ಪ್ರಾರ್ಥನೆ ಮಾತ್ರ. ದೇವರ ಕ್ಷಮೆಗಾಗಿ ಆತನು ಪ್ರಾರ್ಥಿಸಿದ ಮತ್ತು ತನ್ನ ಎಲ್ಲಾ ಪಾಪಗಳನ್ನು ಒಪ್ಪಿಕೊಂಡನು. ಅಷ್ಟೇ ಅಲ್ಲದೆ, ತನಗೆ ದೇವರು ಕೊಟ್ಟ ಕೆಲಸಗಳನ್ನು ಮಾಡುತ್ತೇನೆಂದು ದೇವರಿಗೆ ಮಾತು ಕೊಟ್ಟನು. ಆಗ ದೇವರು ಯೋನನನ್ನು ಮೀನಿನ ಹೊಟ್ಟೆಯಿಂದ ಒಣ ನೆಲದ ಮೇಲೆ ಎಸೆಯುವುದರ ಮೂಲಕ ಅವನ ಪ್ರಾರ್ಥನೆಗಳಿಗೆ ಉತ್ತರಕೊಟ್ಟನು.

## ಅನ್ವಯ (ಪಾಠ 3)

ನಾನು ನನ್ನ ಪಾಪವನ್ನು ತಿಳಿದು ಗುರುತಿಸಿದಾಗ, ನಾನು ತಪ್ಪದೇ ಅದರ ಕುರಿತಾಗಿ ಪಶ್ಚಾತ್ತಾಪಪಟ್ಟು, ಅದನ್ನು ನಿಲ್ಲಿಸಬೇಕು.

## ಕಂಠಪಾಠ ವಾಕ್ಯ (ಪಾಠ 3)

ಆದದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿಬಿಡುವ ಹಾಗೆ ನೀವು ಪಶ್ಚಾತ್ತಾಪಪಟ್ಟು ಆತನ ಕಡೆಗೆ ತಿರುಗಿಕೊಳ್ಳಿರಿ. ತಿರುಗಿದರೆ ದೇವರ ಸನ್ನಿಧಾನದಿಂದ ವಿಶ್ರಾಂತಿ ಕಾಲಗಳು ಒದಗಿ ಆತನು ನಿಮಗೆ ನೇಮಕವಾಗಿರುವ ಕ್ರಿಸ್ತನಾದ ಯೇಸುವನ್ನು ಕಳುಹಿಸಿ ಕೊಡುವನು.
ಅಪೋ.ಕೃತ್ಯ.3:19

### ಮನೆಗೆಲಸ (ಪಾಠ 3)

ಈ ವಾರದಲ್ಲಿ ನೀವು ಮಾಡುವ ಅಥವಾ ಹೇಳುವ ಏನಾದರೊಂದು ತಪ್ಪು ವಿಷಯಗಳಿಗಾಗಿ, ನಾಚಿಕೆ ಪಡುವ ವಿಷಯಗಳಿಗಾಗಿ ತುಂಬಾ ಹೆಚ್ಚಾದ ಸೂಕ್ಷ್ಮತೆಯಿಂದ ಇರಬೇಕು ಮತ್ತು ಪಬ್ಲಿಕ್ ವಿಡಿಯೋಗಳಲ್ಲಿ ನೋಡುವುದಕ್ಕೆ ಇಷ್ಟಪಡಬಾರದು. ಪಶ್ಚಾತ್ತಾಪಪಡಿರಿ. ಮೊಟ್ಟ ಮೊದಲನೇಯದಾಗಿ ಅದನ್ನು ಮತ್ತೇ ಮಾಡುವುದಕ್ಕೆ ಮುಂಚಿತವಾಗಿ ನಿಂತು, ಅದರ ಕುರಿತಾಗಿ ಆಲೋಚನೆ ಮಾಡುವುದಕ್ಕ ದೇವರ ಸಹಾಯಕ್ಕಾಗಿ ಬೇಡಿಕೊಳ್ಳಿರಿ

### ದೇವರ ಡಿ.ಎನ್.ಎ (ಪಾಠ 3)

ಈ ಪಾಠದಿಂದ ದೇವರ ಕುರಿತಾಗಿ ನಾವು ಏನನ್ನು ಕಲಿತುಕೊಳ್ಳುತ್ತಿದ್ದೇವೆ? ದೇವರು ತನ್ನ ಜನರು ಸುಲಭವಾದ ಜೀವನವನ್ನು ಹೊಂದಿರುವದಕ್ಕಿಂತ ಆತನ ಜನರು ವಿಧೇಯತೆಯನ್ನು ತೋರಿಸಬೇಕೆಂದು ದೇವರು ಬಯಸುತ್ತಿದ್ದಾರೆ.






## ವಿನೋದ ಸಮಯ! (ಪಾಠ 3)

### ಆಟ (ಪಾಠ 3)

ಮೀನಿನ ರೆಕ್ಕೆಗಳು

ಪ್ರತಿಯೊಬ್ಬ ವಿದ್ಯಾರ್ಥಿಗಳು ತಮ್ಮ ನಡುವಿಗಳಿಗೆ ಕಟ್ಟಿಕೊಳ್ಳುವುದಕ್ಕಾಗಲಿ ಅಥವಾ ತಮ್ಮ ಹಿಂದಿನ ಜೇಬುಗಳಲ್ಲಿ ಇಟ್ಟುಕೊಳ್ಳುವುದಕ್ಕಾಗಲಿ ಅವರಿಗೆ ಹಳೇ ಸಾಕ್ಸ್.ಗಳನ್ನು (ಅಥವಾ ನೂಲುಹುರಿ, ತಂತಿ, ಕಾಗದ ಅಥವಾ ಬಟ್ಟೆಯನ್ನಾಗಲಿ ಕೊಡಬಹುದು). ಈ ಆಟವೇನಂದರೆ, ಈ ಆಟದಲ್ಲಿ ಆಡುವವರು ತಮಗೆ ಕೊಟ್ಟಿರುವ "ಸಾಕ್ಸ್.ಗಳನ್ನು ಅಥವಾ ಇನ್ನೂ ಯಾವುದೇ ವಸ್ತುಗಳನ್ನು" ಕಳೆದುಕೊಳ್ಳದೇ, ಇತರ ಆಟಗಾರರ ವಸ್ತುಗಳನ್ನು ತೆಗೆದುಕೊಳ್ಳಬೇಕು. ಒಂದುವೇಳೆ ಯಾರಾದರೂ ತಮ್ಮಲ್ಲಿರುವ ಬಟ್ಟೆಗಳನ್ನು ಕಳೆದುಕೊಂಡರೆ, ಅವರು ಕೆಳಗೆ ಕೂಡಬೇಕು, ಆದರೆ ಕುಳಿತುಕೊಂಡಿರುವ ಆಟಗಾರನ ಬಳಿಯಲ್ಲಿ ಬೇರೆ ಆಟಗಾರನು ತುಂಬಾ ಹತ್ತಿರಕ್ಕೆ ಬಂದರೆ, ಅವನ ಹತ್ತಿರವಿರುವ ಬಟ್ಟೆಯನ್ನು ತೆಗೆದುಕೊಳ್ಳಬಹುದು, ತೆಗೆದುಕೊಂಡಾಗ ಆಟದಲ್ಲಿ ಪುನಃ ಸೇರಬಹುದು.

### ಚರ್ಚೆ (ಪಾಠ 3)

(ಹಿರಿಯ ವಿದ್ಯಾರ್ಥಿಗಳಿಗಾಗಿ)

1. ಲೂಕ.11:30ರ ವಚನಭಾಗವು ಯೇಸುವಿಗೆ ಮತ್ತು ಯೋನನಿಗೆ ಹೋಲಿಕೆಗಳನ್ನು ನೋಡುವುದಕ್ಕೆ ನಮಗೆ ಕರೆಯನ್ನು ನೀಡುತ್ತಿದೆ, ಯೇಸು ಮತ್ತು ಯೋನನ ಕಥೆಗಳ ಮಧ್ಯೆದಲ್ಲಿ ಎಷ್ಟು ಹೋಲಿಕೆಗಳನ್ನು ನೀವು ನೋಡಬಹುದು?

ವಿದ್ಯಾರ್ಥಿಗಳು ತಮ್ಮ ಸ್ವಂತ ಆಲೋಚನೆಗಳಿಂದ ಈ ಮನೆಗೆಲಸವನ್ನು ಮಾಡಿದರೆ ಈ ಅಭ್ಯಾಸವು ಚೆನ್ನಾಗಿ ಕೆಲಸ ಮಾಡುತ್ತದೆ. ಅವರು ಯೋನನ ಪುಸ್ತಕವನ್ನು ಓದಲು ಹೇಳಿರಿ ಮತ್ತು ಅವರು ಹೇಳುವ ಉತ್ತರಗಳು ಚಿಕ್ಕ ಚಿಕ್ಕ ಹೋಲಿಕೆಗಳು ಇದ್ದಲ್ಲಿ ಅವುಗಳನ್ನು ಅಂಗೀಕರಿಸಿರಿ. ಕೆಳಗೆ ಪಟ್ಟಿ ಮಾಡಿರುವ ಕೆಲವು ಹೋಲಿಕೆಗಳನ್ನು ಅಂಗೀಕರಿಸಬಹುದು:

- ಸಮಾಧಿಯಲ್ಲಿ/ ಮೀನಿನಲ್ಲಿ 3 ದಿನಗಳು ಇದ್ದರು
- ದೇವರ ವಾಕ್ಯವನ್ನು ತಂದರು
- ದೂರ ಪ್ರಯಾಣ ಮಾಡಿದರು/ ಅಥವಾ ನಡೆದರು
- ತುಫಾನು ಬರುವಾಗ ಹಡಗಿನಲ್ಲಿ ಮಲಗಿದ್ದರು
- ತುಫಾನು ನಿಂತುಹೋಯಿತು



- ಪಶ್ಚಾತ್ತಾಪದ ಕುರಿತಾಗಿ ಬೋಧನೆ ಮಾಡಿದರು
- ಅಪರಾಧಿಯಲ್ಲದ ಮನುಷ್ಯನ ಮರಣದ ಕುರಿತಾಗಿ ಅವರ ಕೈಗಳನ್ನು ತೊಳೆದುಕೊಳ್ಳುವುದಕ್ಕೆ ನಿಜವಾದ ಕೊಲೆಗಾರರು ಪ್ರಯತ್ನಿಸಿದರು.
- ದೇವರ ದೃಷ್ಟಿಯಿಂದ ಬಹಿಷ್ಕರಿಸಲ್ಪಟ್ಟಿದ್ದರು
- ಪಟ್ಟಣದ ಹೊರಗಡೆ ಒಣಗಿದ ದ್ರಾಕ್ಷೆಬಳ್ಳಿ/ಮರ ಬೆಳೆದಿತ್ತು


2. ಆಜ್ಞೆಗಳನ್ನು ನಿರ್ಲಕ್ಷ್ಯ ಮಾಡುವುದಕ್ಕೂ ಮತ್ತು ಅವುಗಳಿಗೆ ಅವಿಧೇಯತೆಯನ್ನು ತೋರಿಸುವುದಕ್ಕೂ ಮಧ್ಯೆ ಇರುವ ವ್ಯತ್ಯಾಸವೇನು?


ಇನ್ನೊಂದು ರೀತಿಯಲ್ಲಿ, ಅವೆರಡರ ಮಧ್ಯೆದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಯಾಕಂದರೆ ಅವು ಒಂದೇ ಫಲಿತಾಂಶವನ್ನು ಕೊಡುತ್ತವೆ. ಎರಡು ಕಡೆಯಿಂದ, ಕೇಳಲ್ಪಟ್ಟಿದ್ದನ್ನು ನಾನು ಮಾಡಲಿಲ್ಲ. ಆದರೆ ದೇವರು ನಮ್ಮ ಹೃದಯಗಳನ್ನು ಮತ್ತು ಆಲೋಚನೆಗಳನ್ನು ನೋಡುವವನಾಗಿದ್ದಾನೆಂದು ಬೈಬಲ್ ಹೇಳುತ್ತಿರುವ ಸತ್ಯಾಂಶ. ಆದರೆ ನಾವು ಕೆಲವೊಂದುಸಲ ನಮ್ಮ ನಡತೆಯ ವಿಷಯದಲ್ಲಿ ನೆಪಗಳನ್ನು ಹೇಳುತ್ತೇವೆ. ನಾವು ಏನು ಮಾಡಿದರು ಅದಕ್ಕೆ ಬಾಧ್ಯತೆ ವಹಿಸಬೇಕಾದ ಅವಶ್ಯಕತೆಯಿಲ್ಲವೆಂದು ಮನಸ್ಸಿನಲ್ಲಿಟ್ಟುಕೊಂಡು ನಡೆಯುತ್ತಿರುತ್ತೇವೆ. ಈ ವಿಷಯವನ್ನು ಇನ್ನೂ ಹೆಚ್ಚಾಗಿ ಚರ್ಚೆ ಮಾಡುವುದಕ್ಕೆ ನಿಮ್ಮ ವಿದ್ಯಾರ್ಥಿಗಳನ್ನು ಪ್ರೋತ್ಸಹಿಸಿರಿ.


3. ಕ್ಷಮಿಸಲಾಗದ ಕೆಟ್ಟ ಕಾರ್ಯಗಳೇನು?

ಸೀರಿಯಲ್ ಕೊಲೆಗಾರರು, ಹಿಂಸಕರು ಮತ್ತು ಮಾರ್ಪಾಡು ಹೊಂದುವುದಕ್ಕೆ ಇಷ್ಟಪಡದೆ ಪಾಪಗಳನ್ನು ಮಾಡುವವರ ಕುರಿತಾಗಿ ಉದಾಹರಣೆಗಳನ್ನು ಹೇಳುತ್ತಾ ನಿಮ್ಮ ವಿದ್ಯಾರ್ಥಿಗಳ ಜೊತೆಯಲ್ಲಿ ಅನೇಕ ವಿಭಿನ್ನವಾದ ಕೆಟ್ಟ ವಿಷಯಗಳ ಕುರಿತಾಗಿ ಚರ್ಚೆ ಮಾಡಿರಿ. ಮಕ್ಕಳಿಗೆ ಮಾದಕ ದ್ರವ್ಯಗಳನ್ನು ಮಾರುವ ಜನರ ವಿಷಯವೇನು? (ನಿನೆವೆ ಜನರನ್ನು ದೇವರು ಕ್ಷಮಿಸಬಾರದೆಂದು ಯೋನನು ಬಯಸಿದ್ದನು, ಆದರೆ ದೇವರು ನಮ್ಮೆಲ್ಲರನ್ನು ಕ್ಷಮಿಸುವುದಕ್ಕೆ ಕೃಪೆಯುಳ್ಳವನಾಗಿದ್ದಾನೆ.)

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 3)





## ಲೂಕಾಸ್ ರವರ ಪ್ರಯೋಗ (ಪಾಠ 3)

ಮಾರ್ಷ್.ಮ್ಯಾಲೋಗಳನ್ನು ಕತ್ತರಿಸಿ, ಒಂದು ಕಡ್ಡಿಗೆ (ಹಲ್ಲು ಕಡ್ಡಿ) ಹಚ್ಚುವುದರ ಮೂಲಕ ಮಾರ್ಷ್.ಮ್ಯಾಲೋ ದ್ವೀಪವನ್ನು ವಿದ್ಯಾರ್ಥಿಗಳು ಮಾಡುವುದಕ್ಕೆ ಪ್ರೋತ್ಸಹಿಸಿರಿ. ಒಂದು ಪಾತ್ರೆಯಲ್ಲಿ ನೀರನ್ನು ತೆಗೆದುಕೊಳ್ಳಿರಿ, ಅದು ಸಮುದ್ರಕ್ಕೆ ಸಾದೃಶ್ಯವಾಗಿರುತ್ತದೆ. ಮಾರ್ಷ್.ಮ್ಯಾಲೋಗಳನ್ನು ಸ್ಪಷ್ಟವಾದ ಬಟ್ಟಲನ್ನು ತೆಗೆದುಕೊಂಡು ನೀರಿನಲ್ಲಿ ಮುಳುಗಿಸಿರಿ. ವಿನೋದಕ್ಕಾಗಿ, ಮೀನಿನ ಚಿತ್ರವನ್ನು ಬಿಡಿಸಿರಿ ಮತ್ತು ದ್ವೀಪವನ್ನಾಗಿ ಕಾಣಿಸಿಕೊಳ್ಳುವುದಕ್ಕೆ ಇನ್ನೂ ಬೇರೆ ಏನಾದರೂ ಮಾಡಬಹುದು. (ಯೂ ಟ್ಯೂಬ್.ನಲ್ಲಿ ಇನ್ನೂ ಹೆಚ್ಚಿನ ವಿಷಯಗಳನ್ನು ನೋಡಬಹುದು).

https://www.facebook.com/childrenareimportant/videos/1291904010845979/

# --[ ಕೇಸ್ 4 ]--



## ಸೂಚನೆಗಳು! (ಕ್ಲೂಸ್) (ಪಾಠ 4)

### ಸೂಚನೆ 1# ಅಂಶ (ಪಾಠ 4)

ಅನಾಮಿಕ ಸಹಾಯದ ಕುರಿತಾದ ಕೇಸ್

### ಸೂಚನೆ 2# ನಾಟಕ (ಪಾಠ 4)

ಕಥೆ ಹೇಳುವವರು: ಈ ಕಥೆಯ ಕಲ್ಪನಾ ಕಥೆಯಾಗಿರುತ್ತದೆ, ಆದರೆ ಅಪರಾಧಿಯನ್ನು ರಕ್ಷಿಸಲು ಕೆಲವೊಂದು ಹೆಸರುಗಳು ಮತ್ತು ಸ್ಥಳಗಳು ಮಾರ್ಪಾಟು ಮಾಡಲಾಗಿದೆ.

ಪೋಲೀಸ್ : ಹಲೋ ಸಾರ್, ನನ್ನ ಜೊತೆ ಕೆಲಸಗಾರನೇ, ನಿನ್ನನ್ನು ಕೆಲವೊಂದು ಪ್ರಶ್ನೆಗಳನ್ನು ಕೇಳಬೇಕೆಂದು ಇಷ್ಟಪಡುತ್ತಿದ್ದೇನೆ.



ಪಾದಚಾರಿ : ಹೇಳಿ ಆಫೀಸರ್, ಏನು ವಿಷಯ?

ಪೋಲೀಸ್ : ಕಳೆದ ರಾತ್ರಿಯಲ್ಲಿ ಹೈವೇ ರೋಡ್.ನಲ್ಲಿ ಹಿಟ್ ಅಂಡ್ ರನ್ ಆಕ್ಸಿಡೆಂಟ್ ಕುರಿತಾಗಿ ನಮಗೆ ವರಧಿ ಬಂದಿದೆ.

ಪಾದಚಾರಿ : ಓ.. ಹೌದಾ, ಅದಕ್ಕಾಗಿಯೇ ಅಂಥಹ ಹೈವೇ ರೋಡ್.ಗಳಲ್ಲಿ ನಾನು ಒಬ್ಬಂಟಿಗನಾಗಿ ಎಂದಿಗೂ ಪ್ರಯಾಣಿಸುವುದಿಲ್ಲ. ಆಫೀಸರ್.ಗಳಾಗಿರುವ ನೀವು ಸ್ವಲ್ಪ ಜನ ಮಾತ್ರ ಇದ್ದಾರೆ, ಆ ಹೈವೇನಲ್ಲಿ ಅಂಥಹ ಡಕಾಯಿತರಿಂದ ನಡೆಯುತ್ತಾಯಿದೆ.

ಪೋಲೀಸ್ : [ತನ್ನ ಜೊತೆ ಕೆಲಸಗಾರನನ್ನು ನೋಡುತ್ತಾ] ನಾನು ಡಕಾಯಿತರ ಕುರಿತಾಗಿ ಏನೂ ಹೇಳಲಿಲ್ಲ, ನೀನೇನಾದರೂ ಮಾಡಿದ್ದೀಯಾ?

ಪೋಲೀಸ್ 2 : ಇಲ್ಲ, ನಾನು ಮಾಡಲಿಲ್ಲ!

ಪೋಲೀಸ್ : ಅವರು ಡಕಾಯಿತರೆಂದು ನಿನಗೆ ಹೇಗೆ ಗೊತ್ತು? ಕಳೆದ ರಾತ್ರಿಯಲ್ಲಿ ನೀವು ಎಲ್ಲಿದ್ದೀರೆಂದು ಸ್ವಲ್ಪ ಮಾಹಿತಿ ಏನಾದರೂ ಹೇಳುತ್ತೀರೋ?

ಪಾದಚಾರಿ : ನಿಟ್ಟುಸಿರು ಬಿಡುತ್ತಾ.. ಈ ಪಟ್ಟಣದ ಕೋಟೆಯ ಹತ್ತಿರದಲ್ಲಿಯೇ ನನ್ನ ಕುಟುಂಬವನ್ನು ನೋಡುವುದಕ್ಕೆ ಹೋಗಿದ್ದೆ, ಮತ್ತು ಕಳೆದ ರಾತ್ರಿಯಲ್ಲಿ ನಾನು ಮನೆಗೆ ಹೋಗಿದ್ದೆ , ಆದದರಿಂದಲೇ ಈ ಬೆಳಗ್ಗೆ ನಾನು ಕೆಲಸಕ್ಕೆ ಬರುವುದಕ್ಕಾಯಿತು.

ಪೋಲೀಸ್ : ಓ.. ಕಳೆದ ರಾತ್ರಿ ನೀನು ಹೈವೇನಲ್ಲಿ ಇದ್ದೀರಿ?

ಪಾದಚಾರಿ : ಹೌದು ಸಾರ್.

ಪೋಲೀಸ್ : ರೋಡ್ ಪಕ್ಕದಲ್ಲಿ ಸುಮಾರು 180 ಸೆಂ.ಮೀ. ಎತ್ತರವಿರುವ, ಮಧ್ಯ ಸ್ಥಿತಿಯಲ್ಲಿ ಚೆನ್ನಾಗಿ ಬೆಳೆದಿರುವ, ಕೊಳಕು ಕೊಳೆತ ದೃಷ್ಟಿಯಿರುವ ಒಬ್ಬ ಮನುಷ್ಯನನ್ನು ನೀನೇದರೂ ನೋಡಿದ್ದೀಯಾ?

ಪಾದಚಾರಿ : ಇಲ್ಲ, ಬಹುಶಃ ನಾನು ಸರಿಯಾಗಿ ನೋಡಲಿಲ್ಲವೇನೋ, ಆದರೆ ಅವನ ನೋಟ ನನಗೆ ನೆನಪಿಗೆ ಬರುತ್ತಾಯಿಲ್ಲ.

ಪೋಲೀಸ್ 2 : [ನೋಟ್ ಪುಸ್ತಕವನ್ನು ತೆಗೆದು, ಹೇಳಿದ್ದನ್ನೆಲ್ಲಾ ಬರೆದುಕೊಳ್ಳಿರಿ]

ಪೋಲೀಸ್ : ನೀನು ಅವನನ್ನು ನೋಡಲಿಲ್ಲ ಅಥವಾ ಅವನನ್ನು ನೋಡುವುದಕ್ಕೆ ನಿನಗೆ ಇಷ್ಟವಾಗಲಿಲ್ಲ?

ಪಾದಚಾರಿ : ನೋಡಿ, ನಾನು ಸಿದ್ಧವಾಗಿದ್ದೇನೆ, ಏನೋ ಒಂದು ಕೆಲಸದ ಮೇಲೆ ನಾನು ಫೋನ್.ನಲ್ಲಿ ಮಾತನಾಡುತ್ತಿದ್ದೆ ಮತ್ತು ಅದಕ್ಕೆ ನನಗೆ ಅಷ್ಟು ಸಮಯವಿದ್ದಿಲ್ಲ. ಸಹಾಯಕ್ಕಾಗಿ ನನ್ನನ್ನು ಕರೆದಿದ್ದರೆ ಏನಾಗುತ್ತಿತ್ತು? ಅವರು ಮತ್ತೊಂದು ಬಾರಿ ಕರೆಯುವುದಕ್ಕೆ ಮುಂಚಿತವಾಗಿ ಎಷ್ಟು ಸಮಯವು ಹಿಡಿದಿದೆಯೆಂದು ಯಾರಿಗೆ ಗೊತ್ತು.

ಪೋಲೀಸ್ 2 : ಹಾ...ಹಾ...ಹ...ಹ... ಅವನಿಗೆ ಸಹಾಯ ಬೇಕಾಗಿದ್ದಿಲ್ಲ, ಯಾಕಂದರೆ ಅವನು ಸಹಾಯಕ್ಕಾಗಿ ಕರೆಯಲ್ಪಟ್ಟಿರಬಹುದು, ಹಾ..ಹ...ಅದು ತಮಾಷೆಯಾಗಿದೆಯಲ್ಲ, ಆದರೆ ನೀನು ಕರೆಯಲ್ಪಟ್ಟಿದ್ದೀಯಾ?

ಪಾದಚಾರಿ : ಅದನ್ನು ತಲೆಗೆ ಹಾಕಿಕೊಳ್ಳಬೇಡಿರಿ, ಅದು ಅಷ್ಟು ಪ್ರಾಮುಖ್ಯವಲ್ಲ.

ಪೋಲೀಸ್ : ಅಷ್ಟೇ, ನನಗೆ ಕೆಲವೊಂದು ಪ್ರಶ್ನೆಗಳಿವೆ. ನೀನು ನನಗೆ ಬೇಕಾದರೆ, ನಾನು ನಿಮ್ಮನ್ನು ಕರೆಯಬಹುದೇ?

ಪಾದಚಾರಿ : ಯಾವ ಸಮಯದಲ್ಲಾದರೂ ಕರೆಯಬಹುದು, ಸಹಾಯ ಮಾಡುವುದಕ್ಕೆ ನನಗೆ ತುಂಬಾ ಸಂತೋಷ.

ಪೋಲೀಸ್ 2 : [ಅಪನಂಬಿಕೆಯಿಂದ ಪಾದಚಾರಿಯನ್ನು ನೋಡುತ್ತಾ....]

## 3 ಸೂಚನೆ #3 ವಸ್ತು (ಪಾಠ 4)

ಒಂದು ಸೂಚನೆಯಾಗಿ ಈ ಭೌತಿಕ ವಸ್ತುವನ್ನು ತರಗತಿಗೆ ತೆಗೆದುಕೊಂಡು ಬನ್ನಿರಿ: ಪ್ರಥಮ ಚಿಕಿತ್ಸೆ (ಬ್ಯಾಂಡ್-ಏಡ್)





## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 4)

ಈ ದಿನದಂದು ಆಸ್ಪತ್ರೆಗೆ ಒಂದು ತುರ್ತು ಚಿಕಿತ್ಸೆಗಾಗಿ ಬರುವುದು. (ರಹಸ್ಯ : ಸಹಾಯಕ್ಕಾಗಿ ಹೊಡೆಯಲ್ಪಟ್ಟಿರುವ ವ್ಯಕ್ತಿಯ ಬಳಿಗೆ ಒಳ್ಳೇಯ ಸಮರ್ಯಾನನ್ನು ಅಲ್ಲಿಗೆ ಕಳುಹಿಸಲ್ಪಟ್ಟಿರುವುದು.

## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 4)

ರಹಸ್ಯ: ಖಾಲಿ ಚೀಲ ಮತ್ತು ನಾಣ್ಯಗಳೆಲ್ಲ ಬಿಸಾಡಲ್ಪಟ್ಟಿದ್ದವು ಯಾಕಂದರೆ ಅವನು ಕದ್ದಲ್ಪಟ್ಟಿದ್ದನು, ರಹದಾರಿ ಪಕ್ಕಕ್ಕೆ ಯಾಜಕನ ಮತ್ತು ಫರಿಸಾಯನ 2 ಜೊತೆ ಹೆಜ್ಜೆಗಳು ಇದ್ದವು, ಹೊಡೆಯಲ್ಪಟ್ಟ ವ್ಯಕ್ತಿಯ ಭೌತಿಕ ದೇಹದ ಗುರುತು ಅಲ್ಲಿ ಹಾಕಲ್ಪಟ್ಟಿತು.



# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 4)

## ಬೈಬಲ್ ಕಥೆ (ಪಾಠ 4)

**ಒಳ್ಳೇಯ ಸಮರ್ಯಾನು**

**ಬೈಬಲ್ ವಾಕ್ಯದಿಂದ: ಲೂಕ.10:25-37**



ಧರ್ಮಶಾಸ್ತ್ರದಲ್ಲಿ ಪ್ರವೀಣನಾಗಿರುವ ಒಬ್ಬ ವ್ಯಕ್ತಿ ಯೇಸುವನ್ನು ಪರೀಕ್ಷೆ ಮಾಡಲು, "ನಿತ್ಯ ಜೀವದ ಸ್ವಾಸ್ಥ್ಯವನ್ನು ಪಡೆಯಬೇಕೆಂದರೆ ನಾನೇನು ಮಾಡಬೇಕು?" ಎಂದು ಒಂದು ಪ್ರಶ್ನೆ ಕೇಳಿದನು. ಯೇಸು ಅವನಿಗೆ ದೊಡ್ಡ ಆಜ್ಞೆಯೊಂದಿಗೆ ಉತ್ತರ ಕೊಟ್ಟನು : "ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಶಕ್ತಿಯಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು. ಮತ್ತು ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂದು ಬರೆದದೆ ಅಂದನು. 'ಆ ಧರ್ಮೋಪದೇಶಕನು ತನ್ನ ನೆರೆಯವರ ಹೆಸರುಗಳ ಪಟ್ಟಿಯನ್ನು ಕೊಡುವುದರ ಬದಲಾಗಿ, "ಯಾರು ನನ್ನ ನೆರೆಯವನು?" ಎಂದು ಪ್ರಶ್ನೆಯನ್ನು ಕೇಳುವುದರ ಮೂಲಕ ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದನು. ಆಗ ಯೇಸು ಕೆಳಗಿನ ಕಥೆಯನ್ನು ಹೇಳುವುದರ ಮೂಲಕ ಯಾರು ನೆರೆಯವರು ಎಂದು ಅವನಿಗೆ ಚೆನ್ನಾಗಿ ತಿಳಿಸಿಕೊಟ್ಟನು.

ಯೆರೂಷಲೇಮಿನಿಂದ ಘಟ್ಟ ಇಳಿದು ಯೆರಿಕೋವಿಗೆ ಆ ಮಣ್ಣಿನ ಹಾದಿಯಲ್ಲಿ ಒಬ್ಬ ಮನುಷ್ಯನು ನಡೆದು ಹೋಗುತ್ತಿರುವಾಗ, ಅವನನ್ನು ಅರಜೀವದಲ್ಲಿ ಇರುವ ತನಕ ಹೊಡೆದು, ತನ್ನ ಬಟ್ಟೆಗಳನ್ನು ಕದ್ದುಕೊಂಡು ಹೋದರು. ಆ ಧೂಳಿನಲ್ಲಿ ಬರೆಬತ್ತಲೆಯಿಂದ, ನಡೆಯುವುದಕ್ಕಾಗದೆ ರಕ್ತ ಸೋರಿಸಿಕೊಳ್ಳುತ್ತಾ ಬಿದ್ದಿದ್ದ ಆ ಮನುಷ್ಯನು ಒಬ್ಬ ಯಾಜಕನು (ದೇವರ ಭಯದಲ್ಲಿರುವ ಒಂದು ಕುಟುಂಬದಿಂದ ಬಂದ ಒಬ್ಬ ಒಳ್ಳೇಯ ಮನುಷ್ಯ - ಲೇವಿಯರು) ಬರುವುದನ್ನು ನೋಡಿದನು, ಅವರಿಬ್ಬರು ಕಣ್ಣಲ್ಲಿ ಕಣ್ಣಿಟ್ಟು ನೋಡಿದಾಗ, ಆ ಯಾಜಕನು ಆ ಮನುಷ್ಯನ ಹತ್ತಿರವಿರದೆ ದಾಟಿ ಹೋದನು. ಆದನಂತರ ಇನ್ನೊಬ್ಬ ವಿದೇಶಿ ವ್ಯಕ್ತಿ, ಅಂದರೆ ಸಭೆಯಲ್ಲಿ ಸೇರಿಸಿಕೊಳ್ಳದ ವ್ಯಕ್ತಿ, ತಪ್ಪು ಮಾರ್ಗದಲ್ಲಿ ದೇವರನ್ನು ಆರಾಧಿಸುವ ವ್ಯಕ್ತಿ (ಸಮರ್ಯಾದವನು) ಆ ಮನುಷ್ಯನನ್ನು ನೋಡಿ, ಅವನ ಮೇಲೆ ಕನಿಕರಪಟ್ಟನು. ಆ ಸಮರ್ಯಾದವನು ಅಲ್ಲಿ ನಿಂತು, ಅವನ ಗಾಯಗಳಲ್ಲಿ ಎಣ್ಣೆಯನ್ನೂ ದ್ರಾಕ್ಷಾರಸವನ್ನೂ ಹೊಯ್ದು ಕಟ್ಟಿ ತನ್ನ ಸ್ವಂತ ವಾಹನದ ಮೇಲೆ ಹತ್ತಿಸಿಕೊಂಡು ಛತ್ರಕ್ಕೆ ಕರಕೊಂಡು ಹೋಗಿ ಅವನನ್ನು ಆರೈಕೆ ಮಾಡಿದನು: ಛತ್ರ, ಖರ್ಚುಗಳು ಮತ್ತು ಅವನನ್ನು ನೋಡಿಕೊಳ್ಳುವುದಕ್ಕೆ ಒಬ್ಬನಿಗೆ ಆಗುವ ಖರ್ಚು, ಹಾಗೆ ಪ್ರತಿಯೊಂದಕ್ಕೂ ಹಣ ಕೊಟ್ಟನು.

"ಈ ಮೂವರಲ್ಲಿ ಯಾವನು ಕಳ್ಳರ ಕೈಗೆ ಸಿಕ್ಕಿದವನಿಗೆ ನೆರೆಯವನಾದನೆಂದು ನಿನಗೆ ತೋರುತ್ತದೆ ಹೇಳು ಎಂದು ಕೇಳಿದ್ದಕ್ಕೆ ಆ ಧರ್ಮೋಪದೇಶಕನು - ಅವನಿಗೆ ದಯೆ ತೋರಿಸಿದವನೇ ಅಂದನು. ಆಗ ಯೇಸು ಅವನಿಗೆ - ಹೋಗು, ನೀನೂ ಅದರಂತೆ ಮಾಡು ಎಂದು ಹೇಳಿದನು."

## ಅನ್ವಯ (ಪಾಠ 4)

ಒಳ್ಳೇಯ ಸಮರ್ಯಾನಂತೆ, ನಾನು ಕೂಡ ಪ್ರತಿಯೊಬ್ಬರ ವಿಷಯದಲ್ಲಿ ಕರುಣೆಯನ್ನು ತೋರಬೇಕು.

## ಕಂಠಪಾಠ ವಾಕ್ಯ (ಪಾಠ 4)

ನಿಮಗೆ ಪ್ರೀತಿ ತೋರಿಸುವವರನ್ನೇ ನೀವು ಪ್ರೀತಿಸಿದರೆ ಫಲವೇನು?" - ಮತ್ತಾಯ.5:46.

## ಮನೆಗೆಲಸ (ಪಾಠ 4)

ನಿಮಗೆ ಸ್ನೇಹಿತನಾಗದಿರುವ ಒಬ್ಬ ವ್ಯಕ್ತಿಯನ್ನು ಆರಿಸಿಕೊಲ್ಲಿರಿ ಮತ್ತು ಅವರನ್ನು ಸ್ನೇಹಭಾವನೆಯಿಂದ ಮಾತನಾಡಿಸಿರಿ. ನಿಮ್ಮ ಶಾಲೆಯ ಸಮಯ ಆದಮೇಲೆ ಆಟವಾಡುವುದಕ್ಕೆ ಅವರನ್ನು ಆಹ್ವಾನಿಸಿರಿ, ಅಥವಾ ಮಧ್ಯಾಹ್ನ ಊಟದ ಸಮಯದದಲ್ಲಿ ನಿಮ್ಮ ಜೊತೆಯಲ್ಲಿ ಕೂಡಿ ತಿನ್ನುವುದಕ್ಕೆ ಕರೆಯಿರಿ.

## ದೇವರ ಡಿ.ಏನ್.ಎ (ಪಾಠ 4)

ಈ ಪಾಠದಿಂದ ದೇವರ ಕುರಿತಾಗಿ ನಾವು ಏನನ್ನು ಕಲಿತುಕೊಳ್ಳುತ್ತಿದ್ದೇವೆ? ನಾವೆಲ್ಲರು ಇನ್ನೊಬ್ಬರಿಗೆ ಸಹಾಯ ಮಾಡಬೇಕೆಂದು ದೇವರು ಬಯಸುತ್ತಿದ್ದಾರೆ.






# ವಿನೋದ ಸಮಯ! (ಪಾಠ 4)

## ಆಟ (ಪಾಠ 4)

ಬಡ್ಡಿ ಟ್ಯಾಗ್

ಈ ಆಟವನ್ನು ಆರಂಭಿಸಲು ಕನಿಷ್ಠವೆಂದರೆ 6 ಮಂದಿ ಆಟಗಾರರು ಬೇಕಾಗುತ್ತಾರೆ (ಹೆಚ್ಚು ಮಂದಿ ಮಕ್ಕಳು ಇದ್ದರೆ ಇನ್ನೂ ಒಳ್ಳೇಯದು) , ಇದು ಮೈದಾನದಲ್ಲಿ ಆಡುವ ಆಟವಾಗಿರುತ್ತದೆ. ಒಬ್ಬ ವ್ಯಕ್ತಿ ಓಡುತ್ತಿರುತ್ತಾನೆ, ಇನ್ನೊಬ್ಬ ವ್ಯಕ್ತಿ "ಇಟ್" ಆಗಿರುತ್ತಾನೆ. ಉಳಿದ ಪ್ರತಿಯೊಬ್ಬರು ತಮ್ಮ ಬಡ್ಡಿಯನ್ನು (ಜೊತೆಗಾರನನ್ನು) ಹುಡಿಕಿಕೊಳ್ಳಬೇಕು, ಕೈಗಳನ್ನು ಹಿಡಿದುಕೊಳ್ಳುವುದು, ಮತ್ತು ಆದನಂತರ ಆಟವಾಡುವ ಸ್ಥಳದಲ್ಲಿ ಚೆದರಿ ಹೋಗುವುದು. "ಇಟ್" ಆಗಿರುವವನು ಓಡುವವನನ್ನು ಟ್ಯಾಗ್ ಮಾಡುವುದಕ್ಕೆ ಪ್ರಯತ್ನಿಸುತ್ತಾನೆ. ಓಡುವವವನು ಟ್ಯಾಗ್ ಆಗುವುದಕ್ಕೆ ಮುಂಚಿತವಾಗಿಯೇ ಯಾರಾದರೊಬ್ಬನ ಜೊತೆಯಲ್ಲಿ ಸೇರಿಕೊಳ್ಳಬೇಕು. ಒಂದುವೇಳೆ ಓಡುವವವನು ಜೊತೆಗಾರನನ್ನು ಸಿಕ್ಕಿಸಿಕೊಂಡರೆ, ಇದುವರೆಗೂ ಕೈಹಿಡಿದುಕೊಂಡು ಕೈ ಬಿಟ್ಟಿರುವ ಇನ್ನೊಬ್ಬನು ಓಡಬೇಕು. ಅವನು ಇನ್ನೊಬ್ಬನನ್ನು ತನ್ನ ಬಡ್ಡಿಯಾಗಿ ಕೈಹಿಡಿಡುಕೊಳ್ಳಬೇಕು, ಇಲ್ಲದೇ, ಅವನು ಓಡಿಸುವವನಿಂದ ಇಟ್ ಆಗುತ್ತಾನೆ. "ಇಟ್" ಆದವನು ಓಡುತ್ತಾ ಇರಬೇಕು.

ಪ್ರಾಥಮಿಕ ಮಕ್ಕಳಿಗಾಗಿ: ಫ್ರೆಂಡ್ಶಿಪ್ ವೆಬ್

ನೆಲದ ಮೇಲೆ ಮಕ್ಕಳೆಲ್ಲರನ್ನು ವೃತ್ತಾಕಾರದಲ್ಲಿ ನಿಲ್ಲಿಸಿರಿ. ನೂಲುಹುರಿಯಿಂದ ಮಾಡಿರುವ ಒಂದು ಚೆಂಡನ್ನು ಉಪಯೋಗಿಸಿ, "ನಾನು ಯಾವಾಗ ಸಂತೋಷವಾಗಿರುತ್ತೇನೋ ಗೊತ್ತಾ?" ಎಂದು ಮಗುವನ್ನು ಕೇಳಿರಿ, ಆ ಮಗುವು ಉತ್ತರ ಕೊಡುತ್ತಿರುವಾಗಲೇ, ಆ ನೂಲುಹುರಿಯಿಂದ ಮಾಡಿರುವ ಚೆಂಡನ್ನು ಮಗುವಿಗೆ ಕೊಡಿರಿ, ಅವರು ಅದನ್ನು ಸರಿಯಾಗಿ ಇಟ್ಟುಕೊಂಡಿದ್ದಾರೆ ಇಲ್ಲವೋ ಎಂದು ಚೆನ್ನಾಗಿ ನೋಡಿಕೊಳ್ಳಿರಿ. ಹಾಗೆಯೇ ಆ ಮಗುವು ಕೂಡ ತನ್ನ ಪಕ್ಕದಲ್ಲಿ ಕೂಡಿರುವ ಮಗುವನ್ನು "ನಾನು ಯಾವಾಗ ಸಂತೋಷವಾಗಿರುತ್ತೇನೋ ಗೊತ್ತಾ?" ಎಂದು ಕೇಳುವುದಕ್ಕೆ ಹೇಳಿರಿ, ಉತ್ತರ ಕೊಡುತ್ತಿರುವಾಗಲೇ ಆ ಚೆಂಡನ್ನು ಆ ಮಗುವಿಗೆ ಕೊಡಬೇಕು. ಹೀಗೆ ಆ ವೃತ್ತಾಕಾರದಲ್ಲಿ ಕೂಡಿರುವ ಪ್ರತಿಯೊಬ್ಬರಿಗೆ ಮಾಡುವಂತೆ ಹೇಳಿರಿ. ಒಂದುವೇಳೆ ಈ ಆಟವನ್ನೇ ಆಡಬೇಕಂದರೆ, ಅವರಿಗೆ ಇನ್ನೂ ವಿನೋದಾತ್ಮಕವಾಗಿರಲು, ಮುಂಚಿತವಾಗಿ ಕೇಳಿರುವ ಪ್ರಶ್ನೆಯನ್ನು ಕೇಳುವುದರ ಬದಲಾಗಿ, "ನನಗೆ ತುಂಬಾ ಯಾವಾಗ ನೋವಾಗುತ್ತೆ ಗೊತ್ತಾ?" ಎನ್ನುವ ಪ್ರಶ್ನೆಯನ್ನು ಕೇಳಿರಿ ಮತ್ತು ಚೆಂಡನ್ನು ಕೊಡಿರಿ. ಈ ರೌಂಡ್ ಎಲ್ಲಾ ಮುಗಿದನಂತರ ಮಕ್ಕಳೆಲ್ಲರನ್ನು ಎಬ್ಬಿಸಿ, ಒಬ್ಬರೊಬ್ಬರ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು ಹೇಳಿರಿ. ಈಗ ನಿಮಗೆ ಫ್ರೆಂಡ್ಶಿಪ್ ವೆಬ್ ಇದೆ.

## ಚರ್ಚೆ (ಪಾಠ 4)

(ಹಿರಿಯ ವಿದ್ಯಾರ್ಥಿಗಳಿಗಾಗಿ)

1. ನಿಮ್ಮ ಶಾಲೆಯಲ್ಲಿ ಹೊಸ ವಿದ್ಯಾರ್ಥಿಗೆ ನೀವು ಹೇಗೆ ನೆರೆಯವರಾಗುವಿರಿ? ಭಿಕ್ಷಕರಿಗಾ? ಇಲ್ಲಂದರೆ ಕಿರುಕುಳಮಾಡುವ ನಿಮ್ಮ ತಮ್ಮಂದಿರಿಗಾ/ ತಂಗಿಯರಿಗಾ?
   ವಿದ್ಯಾರ್ಥಿಗಳಿಗೆ ಇಷ್ಟವಾಗದಿದ್ದರೂ, ಇತರರಿಗೆ ಸಹಾಯ ಮಾಡುವುದಕ್ಕೆ ಅನೇಕ ವಿಧಾನಗಳ ಕುರಿತಾಗಿ ವಿದ್ಯಾರ್ಥಿಗಳನ್ನು ಮಾತನಾಡಿಸಿರಿ, ಅಥವಾ ಬಹಿರಂಗವಾಗಿ ಯಾರಿಗಾದರೂ ಹೊಸ ಮಗುವಿಗೆ ಅವರು ಸಹಾಯ ಮಾಡುತ್ತಿರುವಾಗ ಸಿಕ್ಕಿಕೊಂಡರೆ ಅವರು ಯಾವರೀತಿ ಎದುರ್ಗೊಳ್ಳುತ್ತಾರೆ. ನಮ್ಮ ಸಣ್ಣ ಪುಟ್ಟ ಮಕ್ಕಳಿಗೆ ಸಹಾಯ ಮಾಡುವುದು ತುಂಬಾ ಕಷ್ಟವೆನ್ನುವುದರ ಕುರಿತಾಗಿ ಮಾತನಾಡಿರಿ.





2. ಚೆನ್ನಾಗಿ ಗೊತ್ತಿರುವ ಒಬ್ಬ ವ್ಯಕ್ತಿ ತನ್ನನ್ನು ತಾನು ಯಾವರೀತಿ ಸಮರ್ಥಿಸಿಕೊಂಡಿದ್ದಾನೆನ್ನುವುದರ ಕುರಿತಾಗಿ ಒಂದು ಉದಾಹರಣೆಯನ್ನು ಹೇಳಿರಿ. ಒಂದುವೇಳೆ ಅವರು ಆ ಪರಿಸ್ಥಿತಿಯಲ್ಲಿ ದೇವರನ್ನು ಮತ್ತು ನೆರೆಯವರನ್ನು ಪ್ರೀತಿ ಮಾಡುತ್ತಿದ್ದಾರೆ, ಅವರು ಯಾವರೀತಿ ನಡೆದುಕೊಳ್ಳುತ್ತಾರೆ?
   ರಾಜಕಾರಣಿಗಳು, ಸಂಗೀತಗಾರರು, ಕ್ರೀಡಾಕಾರರು ಮತ್ತು ನಟರು ಅನೇಕಬಾರಿ ತಮ್ಮ ಕೆಟ್ಟ ನಡತೆಯ ಕುರಿತಾಗಿ ವಾರ್ತೆಗಳಲ್ಲಿ ಬರುತ್ತಿರುತ್ತಾರೆ. ಅಂಥವರುಗಳಲ್ಲಿ ಒಬ್ಬರ ಕುರಿತಾಗಿ ಮತ್ತು ಅವರು ಏನು ಮಾಡಿದ್ದಾರೋ ಮಕ್ಕಳಿಗೆ ತಿಳಿಸಿರಿ. ಮಕ್ಕಳು ಎರಡು ಕಡೆ ಮಾತನಾಡುವುದಾರೆ, ದೇವರ ಪ್ರೀತಿ ತೋರಿಸುವುದಕ್ಕೆ ಅವರು ಏನು ಮಾಡಬಹುದಾಗಿತ್ತೋ ಎನ್ನುವುದರ ಕುರಿತಾದ ಸಂಭಾಷಣೆಗೆ ನಡೆಸಿರಿ. ಆದರೆ ಮಕ್ಕಳು ಹೇಳುವ ಮೊದಲ ಉತ್ತರವು ಎಷ್ಟು ಒಳ್ಳೆಯದಾದರೂ, ಅದನ್ನು ಸ್ವೀಕರಿಸಬೇಡಿರಿ, ಅವರನ್ನು ಅದೇ ರೀತಿಯಾಗಿ ಮಾತನಾಡಿಸುತ್ತಾ ಇರ್ರಿ.
3. ಯಾರೇಯಾಗಲಿ ನಿಯಮಗಳನ್ನು ಚೆನ್ನಾಗಿ ಪಾಲಿಸುತ್ತಾ, ಅದನ್ನು ಅನುಸರಿಸುವುದಕ್ಕೆ ತುಂಬಾ ಪ್ರಾಮುಖ್ಯವಾದ ಪ್ರಾಥಮಿಕ ನಿಯಮಗಳನ್ನು ಪಾಲಿಸದೇ ಇರುವ ಇತ್ತೀಚಿನ ಪರಿಸ್ಥಿತಿಯನ್ನು ವಿವರಿಸಿ.

ನೀವು ಶಾಲೆಯ ನಿಯಮಗಳು, ಪೋಲೀಸ್ ಕಾನೂನುಗಳು, ಚರ್ಚ್ ನಿಯಮಗಳು ಅಥವಾ ಅರ್ಥ ಕೊಡದ ನಿಯಮಗಳು ಹೊಂದಿಕೊಂಡಿರುವ ಯಾವ ಸ್ಥಳದ ಕುರಿತಾಗಿ ನೀವು ಮಾತನಾಡಬಹುದು. ಉದಾಹರಣೆಗೆ: ಶಾಲೆಯ ಹಾಲ್.ಗಳಲ್ಲಿ ಓಡಾಡಿ ಸಮಸ್ಯೆಯಲ್ಲಿ ಬಿದ್ದುಕೊಂಡಿರುವುದು, ಇದನ್ನು ಮಾಡುತ್ತಾ ತರಗತಿ ತುಂಬಾ ತಡವಾಗಿ ಹೋಗಬಾರದು. ಅಥವಾ ಮಾತನಾಡಿದ್ದಕ್ಕಾಗಿ ಸಮಸ್ಯೆ ಮಾಡಿಕೊಳ್ಳುವುದು, ರಬ್ಬರ್ (ಎರೇಜರ್) ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುವಾಗ ತೊಂದರೆ ಆಗುವುದು, ಅಥವಾ ತರಗತಿಗೆ ಸರಿಯಾದ ಸಮಯಕ್ಕೆ ಹೋಗಬೇಕೆಂದು ಗೋಡೆಯನ್ನು ದಾಟುವಾಗ ನೀನು ನಿನ್ನ ಸ್ವೆಟರ್.ನ್ನು ಹರಿದುಕೊಳ್ಳುವುದು, ಆದರೆ ಆ ಸ್ವೆಟರ್.ಗಾಗಿ ಮತ್ತೇ ಮನೆಯಲ್ಲಿ ಸಮಸ್ಯೆಗೆ ಗುರಿಯಾಗುವುದು.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 4)






## ಲೂಕಾಸ್ ರವರ ಪ್ರಯೋಗ (ಪಾಠ 4)

ದೃಷ್ಟಿಕೋನದಿಂದ ನೋಡುವುದಕ್ಕೆ ಈ ಪ್ರಯೋಗವು ಸಹಾಯಕಾರಿಯಾಗುತ್ತದೆ ಮತ್ತು ನಾವು ನೋಡುವ ವಿಷಯಗಳನ್ನು ಹೇಗೆ ನಮ್ಮ ದೃಷ್ಟಿಕೋನ ಮಾರ್ಪಡಿಸುತ್ತದೋ ತೋರಿಸುತ್ತದೆ. ಈ ಎರಡು ಸಾಲುಗಳನ್ನು ನೋಡಿರಿ, ಮತ್ತು 1 ಎಷ್ಟು ದೊಡ್ಡದಾಗಿ ಕಾಣಿಸುತ್ತದೆಯಲ್ಲವೋ. ಎರಡನೇ ಆಲೋಚನೆ ಏನಂದರೆ ಓರೆಯಾಗಿರುವ ಗೆರೆಗಳು ಹೇಗೆ ಸಮಾಂತರಗಳಾಗಿರುತ್ತವೆ, ಆದರೆ ಅವು ಆ ರೀತಿ ಕಾಣಿಸಿಕೊಳ್ಳುವುದಿಲ್ಲ. ಮೂರನೇ ಉದಾಹರಣೆ ಏನಂದರೆ ಮಗು ಮತ್ತು ಇಲಿ ಇರುತ್ತದೆ. ಮಗು ಮತ್ತು ಇಲಿ ಮಧ್ಯೆದಲ್ಲಿ ಒಂದು ಚುಕ್ಕೆಯನ್ನು ಇಡಿರಿ. ಆ ಚುಕ್ಕೆಯನ್ನು ನಿಮ್ಮ ಮೂಗಿನಿಂದ ಮುಟ್ಟಿದರೆ, ಆ ಇಲಿ ಆ ಮಗುವಿನ ಬಳಿಗೆ ಹೋಗುತ್ತಿರುವಂತೆ ಕಾಣಿಸಿಕೊಳ್ಳುವಿರಿ.



ವೀಡಿಯೋನಲ್ಲಿ ತೋರಿಸಿದಂತೆ ನಿಮ್ಮ ಮಕ್ಕಳು ಆ ಮೂರು ಉದಾಹರಣೆಗಳನ್ನು ಮಾಡಲಿ. (ಹೆಚ್ಚಿನ ವಿವರಣೆ ಗಳಿಗಾಗಿ ಯೂ ಟ್ಯೂಬ್ ಸಂದರ್ಶಿಸಿರಿ).

https://www.facebook.com/childrenareimportant/videos/1291919184177795/



# --[ಕೇಸ್ 5 ]--

## ಸೂಚನೆಗಳು! (ಕ್ಲೂಸ್) (ಪಾಠ 5)

### ಸೂಚನೆ 1# ಅಂಶ (ಪಾಠ 5)

ಗಲ್ಲು ಮರದ ಕೇಸ್

### ಸೂಚನೆ #2 ನಾಟಕ (ಪಾಠ 5)

ಕಥೆ ಹೇಳುವವರು: ಈ ಕಥೆಯು ಕಲ್ಪನೆಯಾಗಿರುತ್ತದೆ, ಆದರೆ ತಪ್ಪು ಮಾದದಿರುವವರನ್ನು ಸಂರಕ್ಷಿಸಲು ಕೆಲವೊಂದು ಹೆಸರುಗಳನ್ನು ಮತ್ತು ಸ್ಥಳಗಳನ್ನು ಮಾರ್ಪಾಟು ಮಾಡಲಾಗಿದೆ.



ಪೊಲೀಸ್: ಮೇಡಮ್ ಒಂದು ನಿಮಿಷ ನಿಮ್ಮೊಂದಿಗೆ ಮಾತನಾಡಬಹುದೇ?

ಮೇಡಮ್ : ಏನು ವಿಷಯ ಹೇಳಿ ಆಫೀಸರ್?

ಪೊಲೀಸ್ ; ನಿಮ್ಮನ್ನು ಕೆಲವು ಪ್ರಶ್ನೆಗಳನ್ನು ಕೇಳಬೇಕು.

ಮೇಡಮ್ : ನಿಮ್ಮಂತ ಸುಂದರವಾದ ಆಫೀಸರ್ಗಾಗಿ ಏನಾದ್ರೂ ಸಮಾದಾನ ಕೊಡುತ್ತೇನೆ.

ಪೊಲೀಸ್: ಹೌದೇ, ಮ್, ನೆನ್ನೆಯ ರಾತ್ರಿ ಎರಡನೇ ಪ್ರಕಟಣೆಗೆ ಮುಂಚೆ ನೀವು ಏನಾದರು ನೋಡಿರುವಿರಾ ಎಂದು ನಾನು ಯೋಚಿಸುತ್ತಿದ್ದೆ?

ಮೇಡಮ್: ಆ ಪಕ್ಕದ ಸಂದಿಯಲ್ಲಿರುವ ಜೆರೆಶ್ ಮತ್ತು ಅವಳ ಗಂಡನ ಕುರಿತಾಗಿ ಮಾತನಾಡುತ್ತಿದ್ದೀರ?

ಪೊಲೀಸ್: ಹೌದು, ಅವರ ಕುರಿತಾಗಿಯೇ ನಾನು ಮಾತನಾಡುತ್ತಿದ್ದೇನೆ.

ಮೇಡಮ್: ಅದು ನೋದುವದಕ್ಕೆ ಸ್ವಲ್ಪ ವಿಚಿತ್ರವಾಗಿದೆ, ಯಾಕಂದರೆ ಕಳೆದ ವಾರವೆಲ್ಲ ಅವರ ಮನೆಯ ಮುಂಭಾಗದಲ್ಲಿ ಕಟ್ಟಡವನ್ನು ಕಟ್ಟುತ್ತಿದ್ದರು.

ಪೊಲೀಸ್ : ಮ್… ಹೇಳಿ. [ಒಂದು ಪುಸ್ತಕವನ್ನು ತೆಗೆದುಕೊಂಡು ಆಕೆ ಹೇಳುವುದೆಲ್ಲವನ್ನು ಬರೆದುಕೊಳ್ಳುತ್ತಿದ್ದನು.]

ಮೇಡಮ್: ಅದು ನೋಡುವುದಕ್ಕೆ ಆತ್ಮಹತ್ಯೆಯಂತೆ ಕಾಣಿಸುತ್ತದೆ, ಆದರೆ ನನ್ನನ್ನು ಕೇಳಿದರೆ ಅದು ವಿಲಕ್ಷಣವಾಗಿದೆ. ಈ ಎಲ್ಲವನ್ನು ನೋಡಿದರೆ ಏನೋ ಗೊಂದಲ ನಡೆದಿದೆ ಎಂದು ಅನಿಸುತ್ತದೆ.

ಪೊಲೀಸ್: ಅಂದರೆ, ಇದು ಆತ್ಮಹತ್ಯೆ ಎಂದು ನೀವು ನೆನೆಯುತ್ತಿಲ್ಲ, ಹೌದೇ?

ಮೇಡಮ್: [ಹಿಟ್ಟು ಕಲಿಸುವ ಬಟ್ಟಲನ್ನು ಕೆಳಗೆ ಬೀಳಿಸುವಳು, ಅದರಲ್ಲಿರುವ ಹಿಟ್ಟೆಲ್ಲಾ ನೆಲದ ಮೇಲೆ ಚಲ್ಲಿಹೋಗುವುದು] ಓ, ಹನೀ, ಏನಾಯಿತು?

ಪೊಲೀಸ್ : ಒಟ್ಟಾರೆ ಅದು ಹಾಗೆ ಆಗಿರಬಹುದೆಂದು ಅಂದುಕೊಳ್ಳುತ್ತೇನೆ. ಅವನು ದುಷ್ಟ ಮನುಷ್ಯನಾಗಿದ್ದನು, ಇನ್ನುಮುಂದೆ ಅದು ನನ್ನ ಸಮಸ್ಯೆಯಾಗಿರುವದಿಲ್ಲವೆಂದು ನೆನೆಯುತ್ತೇನೆ, ಆದರೆ ಅವನು ಬೇರೆಯಾಗಿಗಾಗಿಯೋ ಕೇಡನ್ನು ಮಾಡಲು ಇಚ್ಚೈಸಿದನೆಂದು ನಾನು

ನಿಶ್ಚಯವಾಗಿ ಹೇಳುತ್ತೇನೆ, ಯಾಕಂದರೆ ಅವನ ಪಟ್ಟಣದಲ್ಲಿರುವ ಎಲ್ಲರಿಗೆ ಅವನು ಎಷ್ಟು ದೊಡ್ಡ ವ್ಯಕ್ತಿಯೆಂದು ಹೊಗಳಿಕೆ ಮಾಡಿಕೊಳ್ಳುತ್ತಿದ್ದನು... ಮತ್ತೆ ನನ್ನ ನೆರೆಯವನು ಆ ಗಲ್ಲು ಮರದ ಮೇಲೆ ಹೇಗೆ ನೇತುಹಾಕಲ್ಪತ್ತಿದ್ದನೋ ನೀವೇ ನೋಡಿರಿ!

## 3 ಸೂಚನೆ #3 ವಸ್ತು (ಪಾಠ 5)

ಸೂಚನೆಯಾಗಿ ಈ ಭೌತಿಕ ವಸ್ತುವನ್ನು ನಿಮ್ಮ ತರಗತಿಗೆ ತೆಗೆದುಕೊಂಡು ಬನ್ನಿರಿ : ಕಾಂಫೆಟ್ಟಿ (ಬಣ್ಣ ಬಣ್ಣದ ಕಾಗದದ ಸಣ್ಣ ತುಂಡುಗಳು).


## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 5)

ಜೆರೆಕ್ಸ್ ಎಂದು ಕರೆಯಲ್ಪಡುತ್ತಿದ್ದ ಅರಸನಾದ ಅಹಷ್ವೇರೋಷನ (ಕ್ರಿ.ಪು. 486 - 465) ಸಮಾಧಿಯ ಚಿತ್ರ. ಇರಾನ್ ದೇಶದಲ್ಲಿ, ನಕ್ಶ್-ಈ ರುಸ್ತಂ ಎನ್ನುವ ಈ ಐತಿಹಾಸಿಕ ಪ್ರಾಂತದಲ್ಲಿ ಪರ್ಷಿಯಾ ದೇಶವನ್ನು ಆಳ್ವಿಕೆ ಮಾಡಿದ ಮಹಾನ್ ಅರಸರ ಸಮಾಧಿಗಳೊಂದಿಗೆ ಅವನ ಸಮಾಧಿ ಇದೇ. (ಇದು ಅಮೀರ್ ಹುಸ್ಸೈನ್ ಜೊಲ್ಘರೆರವರು ತೆಗೆದ ಚಿತ್ರವಾಗಿದೆ) (ರಹಸ್ಯ: ಜೆರೆಕ್ಸ್ ಎಂಬ ಅರಸನು ಎಸ್ತೇರ ಗ್ರಂಥದಲ್ಲಿ ಕಾಣುವ ಅರಸನೇ ಆಗಿದ್ದಾನೆ.)




## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 5)

ರಹಸ್ಯ : ಅರಸನ ಹೆಸರಿನಲ್ಲಿ ಲಿಖಿತವಾದ ಪತ್ರಗಳು (ರಾಜ ಶಾಸನಗಳು) ಮತ್ತು ಅವುಗಳಲ್ಲಿ ರಾಜ ಮುದ್ರೆ. ಎಸ್ತೇರಳು.3:12 ಮತ್ತು 8:8



ಕೇಸ್ ಪರಿಷ್ಕರಿಸಲಾಗಿದೆ ಕೇಸ್ ಪರಿಷ್ಕರಿಸಲಾಗಿದೆ

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 5)

## ಬೈಬಲ್ ಕಥೆ (ಪಾಠ 5)

**ಎಸ್ತೇರಳು**

**ಬೈಬಲಿನಿಂದ : ಎಸ್ತೇರಳು.2-7**

ಎಸ್ತೇರಳು ಅರಸನಾದ ಜೆರೆಕ್ಸ್ ಹತ್ತಿರ ನಂಬಿಕೆಯುಳ್ಳ ದಾಸನಾಗಿ ಕೆಲಸ ಮಾಡುತ್ತಿದ್ದ ಮೊರ್ದೆಕೈಯಿನ ಚಿಕ್ಕಪ್ಪನ ಮಗಳಾಗಿದ್ದಳು. ಈ ಅರಸನು ತನಗಾಗಿ ಒಬ್ಬ ಸುಂದರವಾದ ರಾಣಿಗಾಗಿ ಹುದುಕುತ್ತಿದ್ದನು. ಎಸ್ತೇರಳು ಅರಸನ ಮುಂದೆ ಹೋಗುವದಕ್ಕಿಂತ ಮೊದಲು 12 ತಿಂಗಳು ಸೌಂದರ್ಯದ ಪ್ರಯೋಗಗಳಿಗೆ ಹೋಗುವದಕ್ಕೆ ಮೊರ್ದೆಕೈ ಎಲ್ಲವನ್ನು ಸಿದ್ಧಗೊಳಿಸಿದನು. ಆಕೆ ಬಹು ಸೌಂದರ್ಯವತಿಯಾಗಿದ್ದಳು, ಅರಸನು ಆಕೆಯನ್ನು ನೋಡಿದ ಕೂಡಲೇ ಆಕೆಯನ್ನು ಪ್ರಿತಿಸಿದನು ಮತ್ತು ಆಕೆಯನ್ನು ಮದುವೆ ಮಾಡಿಕೊಂಡನು. ಅರಸನಾದ ಜೆರೆಕ್ಸ್ ಹತ್ತಿರ ಹಾಮಾನನು ಉನ್ನತ ಅಧಿಕಾರಿಯಾಗಿದ್ದನು; ಅವನು ಯೆಹೂದ್ಯರನ್ನು ದ್ವೇಷಿಸುತ್ತಿದ್ದನು ಮತ್ತು ಎಲ್ಲರು ಅವನಿಗೆ ನಮಸ್ಕರಿಸಬೇಕೆಂದು ತನ್ನನ್ನು ಕುರಿತಾಗಿ ತಾನೇ ಅರಮನೆಯ ಸಭಾಂಗಣದಲ್ಲಿರುವವರ ಬಳಿ ಜಂಬ ಕೊಚ್ಚಿಕೊಳ್ಳುತ್ತಿದ್ದನು. ಮೊರ್ದೆಕೈ ಬಿಟ್ಟು ಇನ್ನೆಲ್ಲರೂ ಅವನಿಗೆ ನಮಸ್ಕರಿಸುತ್ತಿದ್ದರು; ಯಾಕಂದರೆ ಮೊರ್ದೆಕೈ ನಿಜವಾದ ದೇವರಿಗೆ ಮಾತ್ರವೇ ನಮಸ್ಕರಿಸುತ್ತಿದ್ದನು. ಹಾಮಾನನಿಗೆ ಮೊರ್ದೆಕೈ ಮೇಲೆ ಇದ್ದ ದ್ವೇಷ ಯೆಹೂದ್ಯರನ್ನು ಕೊಲ್ಲಲು ಪ್ರಣಾಳಿಕೆ ಹಾಕಲು ಪ್ರೋತ್ಸಾಹಿಸಿತು. ಒಂದು ಜನದ ಗುಂಪು ಅವನ ಶಾಸನಗಳನ್ನು ಪಾಲಿಸುತ್ತಿಲ್ಲವೆಂದು ಅವನು ಅರಸಲಿಗೆ ಹೇಳಿದನು. ಅವರ ವಿಷಯದಲ್ಲಿ ಹಾಮಾನನು ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಬಹುದೆಂದು ಅರಸನಾದ ಜೆರೆಕ್ಸ್ ಅವನಿಗೆ ಹೇಳಿದನು. ಅದರಿಂದ, ಎಲ್ಲಾ ಯೆಹೂದ್ಯರನ್ನು ಕೊಲ್ಲಬೇಕೆಂದು ಹಾಮಾನನು ಒಂದು ಶಾಸನವನ್ನು ಮಾಡಿದನು. ನಂತರ ಮೊರ್ದೆಕೈಯನ್ನು ನೇತುಹಾಕಿಸುವದಕ್ಕೆ ತನ ಮನೆಯ ಮುಂಭಾಗದಲ್ಲಿ ದೊಡ್ಡ ಗಲ್ಲು ಮರವನ್ನು ಕಟ್ಟಿಸಿದನು.



ಎಸ್ತೇರಳಿಗೆ ಹಾಮಾನನ ಕುತಂತ್ರವು ತಿಳಿದುಬಂತು ಮತ್ತು ಅವಳು ಏನಾದರು ಮಾಡಬೇಕೆಂದು ತಿಳಿದಿದ್ದಳು. ಅವಳು ಅರಸನನ್ನು ಮತ್ತು ಹಾಮಾನನ್ನು ಔತಣಕ್ಕೆ ಕರಿಸಿದಳು, ಆಗ ಅರಸನು ಆಕೆ ಏನು ಕೇಳಿದರು ಕೊಡುತ್ತೇನೆಂದು, ಅವನ ರಾಜ್ಯದಲ್ಲಿ ಅರ್ಧ ಭಾಗ ಬೇಕೆಂದರೆ ಅದನ್ನು ಕೊಡುತ್ತೇನೆಂದು ಹೇಳಿದನು. ಆಗ ಹಾಮಾನನು ತನ್ನ ಜನರನ್ನು ಹಿಂಸಿಸುತ್ತಿದ್ದಾನೆಂದು ಮತ್ತು ಅವರನ್ನು ರಕ್ಷಿಸಿದರೆ ಸಾಕು ಎಂದು ಎಸ್ತೇರಳು ಅರಸನಿಗೆ ಹೇಳಿದಳು. ಅರಸನು ಬಹಳ ಸಿಟ್ಟುಗೊಂಡು ಕೊಠಡಿಯನ್ನು ಬಿಟ್ಟು ಹೊರಗೆ ಹೋದನು. ಅವನು ಹಿಂತಿರುಗಿ ಬಂದಾಗ, ಹಾಮಾನನು ಎಸ್ತೇರಳನ್ನು ಭಂಗಪದಿಸುತ್ತಿದ್ದಾನೆಂದು ನೆನೆದನು. ರೌದ್ರಾವೇಶವಾದ ಅರಸನು, ಹಾಮಾನನು ಮೊರ್ದೆಕೈಯನ್ನು ನೇತುಹಾಕಲು ತನ ಮನೆಯ ಮುಂಭಾಗದಲ್ಲಿ ಕಟ್ಟಿಸಿದ ಅದೇ ಗಲ್ಲು ಮರಕ್ಕೆ ಹಾಮಾನನನ್ನು ನೇತುಹಾಕಿಸಿದನು!

## ಅನ್ವಯ (ಪಾಠ 5)

ಕೆಲವೊಮ್ಮೆ ನಾನು ಧೈರ್ಯವಾಗಿರಬೇಕೆಂದು ಮತ್ತು ಆತನಿಗಾಗಿ ಕೆಲವೊಂದು ಅಪಾಯಗಳನ್ನು ಎದುರಿಸಬೇಕೆಂದು ದೇವರು ನನನ್ನು ಕೇಳುತ್ತಿದ್ದಾನೆ.

## ಕಂಠಪಾಠ ವಾಕ್ಯ (ಪಾಠ 5)

ನಾನು ನಿನಗೆ ಆಜ್ಞಾಪಿಸಿದ್ದೇನಲ್ಲಾ; ಸ್ಥಿರಚಿತ್ತನಾಗಿರು, ಧೈರ್ಯದಿಂದಿರು. ಅಂಜಬೇಡ, ಕಳವಳಗೊಳ್ಳಬೇಡ. ನೀನು ಹೋಗುವಲ್ಲೆಲ್ಲಾ ನಿನ್ನ ದೇವರಾದ ಯೆಹೋವನು ನಿನ್ನ ಸಂಗಡ ಇರುತ್ತಾನೆ ಎಂದು ಹೇಳಿದನು." ಯೆಹೊಶುವ.1:9.

## ಮನೆಗೆಲಸ (ಪಾಠ 5)

ನಾನು ಬೇರೆಯವರನ್ನು ರಕ್ಷಿಸಲು ದೇವರು ನನ್ನನ್ನು ಆಯ್ಕೆಮಾಡಿಕೊಂಡಿರಬಹುದು, ಮತ್ತು "ಇಂತಹ ಸಮಯದಲ್ಲಿ" ನನ್ನನ್ನು ಇಲ್ಲಿ ನೇಮಿಸಿದ್ದಾನೆ. ನೀವು ಕ್ರೈಸ್ತರೆಂದು ನಿಮ್ಮ ನೆರೆಯವರಿಗೆ ಹೇಳಿರಿ ಮತ್ತು ಮುಂದಿನ ಭಾನುವಾರ ನಿಮ್ಮ ಜೊತೆ ಅವರು ಸಭೆಗೆ ಬರಲು ಇಷ್ಟಪಡುತ್ತಾರೋ ಇಲ್ಲವೋ ಎಂದು ತಿಲಿದುಕೊಳ್ಳಿರಿ.

### ದೇವರ ಡಿ.ಎನ್.ಎ (ಪಾಠ 5)

ಈ ಪಾಠದಿಂದ ನಾವು ದೇವರ ಕುರಿತಾಗಿ ಏನನ್ನು ಕಲಿತುಕೊಂಡಿದ್ದೇವೆ? ದೇವರು ತನ್ನ ಜನರನ್ನು ರಕ್ಷಿಸಲು, ಕೆಲವೊಮ್ಮೆ ನಿರೀಕ್ಷೆ ಇಲ್ಲದ ಒಬ್ಬ ವ್ಯಕ್ತಿಯನ್ನು ಉಪಯೋಗಿಸಿಕೊಳ್ಳುತ್ತಾನೆ.






# ವಿನೋದ ಸಮಯ! (ಪಾಠ 5)

### ಆಟ (ಪಾಠ 5)

ಹಾಮಾನ, ಮೊರ್ದೆಕೈ, ಎಸ್ತೇರ್

ಈ ಆಟವು ರಾಕ್, ಪೇಪರ್, ಸಿಸರ್ಸ್ ಆಟವನ್ನು ಹೋಲಿ ಇರುತ್ತದೆ. ಎಸ್ತೇರಳು ಹಾಮಾನನನ್ನು ಹೊಡೆಯುತ್ತಾಳೆ, ಹಾಮಾನನು ಮೊರ್ದೆಕೈಯ ಮೇಲೆ ದಾಳಿ ಮಾಡುತ್ತಾನೆ ಮತ್ತು ಮೊರ್ದೆಕೈ ಎಸ್ತೇರಳನ್ನು ಕಾಪಾಡುತ್ತಾನೆ.

ಮಕ್ಕಳನ್ನು ಎರಡು ತಂಡಗಳಾಗಿ ವಿಭಜಿಸಿ ಮತ್ತು ಅವರ ನಡುವೆ 4 ಅಡಿ ಸ್ಥಳವನ್ನು ಬಿಡಿರಿ. ಪ್ರತಿಯೊಂದು ತಂಡದವರು ಸ್ವಲ್ಪ ದೂರ ಹೋಗಿ ಅವರು ಯಾವ ಹೆಸರನ್ನು ಕೂಗಬೇಕೆಂದು ನಿಶ್ಚಯಿಸಿಕೊಳ್ಳುತ್ತಾರೆ: ಹಾಮಾನ, ಮೊರ್ದೆಕೈ ಅಥವಾ ಎಸ್ತೇರಳು. ಅವರು ಒಟ್ಟಾರೆ ನಿಶ್ಚಯಿಸಿದ ಹೆಸರು ಅಲ್ಲದೆ, ಮತ್ತೊಂದು ಹೆಸರನ್ನು ಎರಡನೆಯ ಆಯ್ಕೆಯಾಗಿ ಯೋಚಿಸಿಕೊಂಡಿರುತ್ತಾರೆ. ನಂತರ ಅವರ 4 ಅಡಿ ಸ್ಥಳದ ಕಡೆಗೆ ಬಂದು ನಿಲ್ಲುತ್ತಾರೆ. ಮೂರೂ ಸಂಖ್ಯೆಗಳನ್ನು ಕೂಗಿದ ನಂತರ, ಎರಡು ತಂಡದವರು ಅವರು ಮೊದಲು ನಿಶ್ಚಯಿಸಿದ ಹೆಸರನ್ನು ಕೂಗಿ ಹೇಳುತ್ತಾರೆ. ಒಂದು ತಂಡದವರು "ಎಸ್ತೇರ್!" ಎಂದು ಕೂಗಲು ಮತ್ತು ಮತ್ತೊಂದು ತಂಡದವರು "ಹಾಮಾನನು" ಎಂದು ಕೂಗಿದರೆ, ಎಸ್ತೇರ್ ತಂಡದವರು ಹಾಮಾನನ ತಂಡದವರನ್ನು ಅವರ ಸುರಕ್ಷಿತ ಸ್ಥಳದವರೆಗೂ ಬೆನ್ನಟ್ಟಿ ಓಡಿಸುತ್ತಾರೆ (ಈ ಸ್ಥಳವನ್ನು ನೀವು ಕಾನುಗಳನ್ನು ಉಪಯೋಗಿಸಿ ಅಥವಾ ಮರಗಳನ್ನು ಉಪಯೋಗಿಸಿ ನಿಶ್ಚಯಿಸಬಹುದು). ಯಾರನ್ನಾದರೂ ಔಟ್ ಮಾಡಿದರೆ ಅವರು ಅವರ ವಿರೋಧ ತಂಡಕ್ಕೆ ಸೇರುತ್ತಾರೆ. ಒಂದು ವೇಳೆ ಎರಡು ತಂಡದವರು ಒಂದೇ ಹೆಸರನ್ನು ಕೂಗಿದರೆ, ಅವರು ಮತೊಮ್ಮೆ ಎರಡನೆಯ ಆಯ್ಕೆಯಾಗಿ ನಿಶ್ಚಯಿಸಿದ ಹೆಸರನ್ನು ಹೇಳಬೇಕು.

### ಚರ್ಚೆ (ಪಾಠ 5)

(ಹಿರಿಯ ವಿದ್ಯಾರ್ಥಿಗಳಿಗಾಗಿ)

1. ದೇವರು ನಿಮಗೆ ಕೊಟ್ಟಿರುವ ಗುಣಲಕ್ಷಣಗಳೊಂದಿಗೆ ಆತನ ಸೇವಿಸುವುದಕ್ಕೆ ನೀವೇನು ಮಾಡುತ್ತೀರಿ? ಅವರು ತಮ್ಮನ್ನು ತಾವು ಮಾರ್ಪಡಿಸುಕೊಳ್ಳಲು ಬಹಿರಂಗವಾಗಿರುವ ಪ್ರಯೋಜನಗಳ ಕುರಿತಾಗಿ ಮಾತನಾಡಲಿ, ಉದಾಹರಣೆಗೆ, ಮೂಗು, ಗಡ್ಡ, ಕಣ್ಣುಗಳು, ಬಾಯಿ, ಇನ್ನೂ ಇತ್ಯಾದಿ. ಆದರೆ ಭೌತಿಕ ಲಕ್ಷಣಗಳ ಕುರಿತಾಗಿ ಅವರು ಮಾತನಾಡುತ್ತಿರುವಾಗ, ಒಬ್ಬರೊಬ್ಬರನ್ನು ಅಣಕಿಸುಕೊಳ್ಳುವುದಕ್ಕೆ ಬಿಡಬೇಡಿರಿ. ಸ್ವಲ್ಪ ಸಮಯವಾದನಂತರ, ಆ ಸಂಭಾಷಣೆಯನ್ನು ಸೃಜನಾತ್ಮಕತೆ ಅಥವಾ ಜಾಣತನದ ಕಡೆಗೆ ನಡೆಸಿರಿ, ಅಥವಾ ಕುಟುಂಬದಲ್ಲಿರುವ ಒಳಗಿನ ಬಲ ಮತ್ತು ರೋಗಗಳ ಕುರಿತಾಗಿ ಮಾತನಾಡಿಸಲು ಪ್ರಯತ್ನಿಸಿರಿ. ಈ ಎಲ್ಲಾ ವಿಷಯಗಳು ದೇವರ ತಯಾರಿಕೆಯ ಸಂಯೋಗವಾಗಿರುತ್ತವೆ. ನಮಗೆ ಇಷ್ಟವಿಲ್ಲದಿದ್ದರೂ, ದೇವರು ನಮಗೆ ಕೊಟ್ಟಿರುವವುಗಳನ್ನು ಅಂಗೀಕರಿಸಬೇಕು. ದೇವರು ತನ್ನ ಕೆಲಸವನ್ನು ಅಥವಾ ಪ್ರಣಾಳಿಕೆಯನ್ನು ಮಾಡಿ ಮುಗಿಸುವುದಕ್ಕೆ ನಿಮಗೆ ಚರ್ಮದ ಬಣ್ಣವನ್ನು ಕೊಟ್ಟಿರಬಹುದು ಅಥವಾ ಸ್ವರವನ್ನು ಕೊಟ್ಟಿರಬಹುದು.




2. ನೀವು ವಿಧೇಯತೆಯನ್ನು ತೋರಿಸುವುದಕ್ಕೆ ನಿಮಗೆ ಕಷ್ಟವಾದ ಆಜ್ಞೆ ಏನಾಗಿದ್ದಿತ್ತು?


ವ್ಯಕ್ತಿಗತವಾದ ಯಶಸ್ಸಿನ ಕುರಿತಾಗಿ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುವುದಕ್ಕೆ ಅವಕಾಶವನ್ನು ಕೊಡಿರಿ. ಇದರಿಂದ, ಒಂದಾನೊಂದು ರೀತಿಯಲ್ಲಿ ಅಥವಾ ವಿಧಾನದಲ್ಲಿ ಪ್ರತಿಯೊಬ್ಬರು ವಿಧೇಯತೆಯನ್ನು ತೋರಿಸುತ್ತಿದ್ದಾರೆಂದು ಮಕ್ಕಳೆಲ್ಲರು ತಿಳಿದುಕೊಳ್ಳುವರು. ಬಡಾಯಿ ಮಾಡುವುದನ್ನು ಅಥವಾ ಉಬ್ಬಿಕೊಳ್ಳುವುದನ್ನು ಪ್ರೋತ್ಸಹಿಸಬೇಡಿರಿ. ಉದಾಹರಣೆಗೆ: ಕತ್ತಲಲ್ಲಿ ಅಂಗಡಿಗೆ ಹೋಗುವುದು, ಜಗಳ ಮಾಡುವವರ ಮನೆಯ ಕಡೆಯಿಂದ ಶಾಲೆಗೆ ಹೋಗುವುದು, ಅಥವಾ ಇಷ್ಟವಾಗದಿರುವ ಹೋಂ ವರ್ಕ್.ನ್ನು ಮತ್ತೇ ಮತ್ತೇ ಮಾಡುವುದು.


3. ಚಿಕ್ಕಮ್ಮ ಮತ್ತು ಚಿಕ್ಕಪ್ಪನಂಥವರು ನಿಮ್ಮ ಕುಟುಂಬದಲ್ಲಿರುವವರು ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುವುದರಲ್ಲಿ ಯಾವ ಯಾವ ಪದ್ಧತಿಗಳನ್ನು ಪಾಲಿಸುತ್ತಾರೆ?

ವಿದ್ಯಾರ್ಥಿಗಳು ತಮ್ಮ ಅಜ್ಜಿ, ಅಜ್ಜಂದಿಯರು, ಚಿಕ್ಕಮ್ಮ ಮತ್ತು ಚಿಕ್ಕಪ್ಪವರು, ಅತ್ತೆ ಮತ್ತು ಮಾಮವರು, ಅಣ್ಣ ತಮ್ಮಂದಿಯರ ಕುರಿತಾಗಿ ಮಾತನಾಡಲು ಹೇಳಿರಿ. ಕುಟುಂಬ ಸದಸ್ಯರ ಕುರಿತಾಗಿ ಕೆಟ್ಟ ವಿಷಯಗಳನ್ನು ಹೇಳದಂತೆ ತಡೆಗಟ್ಟಿರಿ. ಅವರು ಹೇಳುವ ಉತ್ತರಗಳು ಬೇರೆ ಬೇರೆಯಾಗಿರಬಹುದು, ಆದರೆ ಎಲ್ಲವನ್ನು ಅಂಗೀಕರಿಸಿರಿ, "ನನಗೆ ಗೊತ್ತಿರುವ ವ್ಯಕ್ತಿಯಿಂದ ಏನಾದರೊಂದು ಕೆಲಸ ಮಾಡಿಸಿಕೊಳ್ಳಲು ಸಹಾಯ ಮಾಡುವುದಕ್ಕೆ ನನಗೆ ಏನಾದರು ತಿಂಡಿ ತಿನಿಸುಗಳು ಕೊಡುತ್ತಾರೆ."

## ವಿದ್ಯಾರ್ಥಿಗಳ ಪುಟಗಳಿಗೆ ಉತ್ತರಗಳು (ಪಾಠ 5)



## ಲೂಕಾಸ್ ರವರ ಪ್ರಯೋಗ (ಪಾಠ 5)

ಎಗುರುವ ರಾಕೆಟ್.ನನ್ನು ತಯಾರಿಸಲು ಟೇಪ್ ತುಂಡನ್ನು ಮತ್ತು ಎರಡು ಸ್ಟ್ರಾಗಳನ್ನು (ಚಿಕ್ಕ ಪ್ಲಾಸ್ಟಿಕ್ ಪೈಪ್.ಗಳು) ಉಪಯೋಗಿಸಲು ವಿದ್ಯಾರ್ಥಿಗಳಿಗೆ ಹೇಳಿರಿ. ಅದರಲ್ಲಿರುವ ಒಂದು ಪೈಪ್.ನಲ್ಲಿ ಗಾಳಿ ಊದುವುದರಿಂದ ಅದು ಕೆಲಸವಾಗುತ್ತದೆ. ಹೆಚ್ಚಿನ, ವಿಭಿನ್ನವಾದ ಅಥವಾ ಸರಿಯಾದ ಸ್ಟ್ರಾ ರಾಕೆಟ್. ಗಳನ್ನು ನೋಡುವುದಕ್ಕೆ ಸ್ಪರ್ದೆಯನ್ನಿಟ್ಟುಕೊಳ್ಳಿರಿ.

https://www.facebook.com/childrenareimportant/videos/1291929934176720/

# --[ ಕೇಸ್ 6 ]--

## ಸೂಚನೆಗಳು! (ಪಾಠ 6)

### ಸೂಚನೆ #1 ಅಂಶ (ಪಾಠ 6)

ಬದಲಾಗಿರುವ ಆರೋಗ್ಯದ ಆಧಾರದ ಕೇಸ್

### ಸೂಚನೆ #2 ನಾಟಕ (ಪಾಠ 6)

ಕಥೆ ಹೇಳುವವರು: ಈ ಕಥೆಯ ಕಲ್ಪನಾ ಕಥೆಯಾಗಿರುತ್ತದೆ, ಆದರೆ ಅಪರಾಧಿಯನ್ನು ರಕ್ಷಿಸಲು ಕೆಲವೊಂದು ಹೆಸರುಗಳು ಮತ್ತು ಸ್ಥಳಗಳು ಮಾರ್ಪಾಟು ಮಾಡಲಾಗಿದೆ.

ಕಸ ಗೂಡಿಸುವ ಮನುಷ್ಯ : [ಫೋನ್.ನಲ್ಲಿ ಮಾತನಾಡುತ್ತಾ] ಹಲೋ, ಕಸವನ್ನು ಎತ್ತಿಕೊಂಡು ಹೋಗುವವರಾ? ನಾನು ಒಂದು ದೂರು ಹೇಳಬೇಕಾಗಿದೆ.

ಕಸ ಎತ್ತುವವನು : [ಏನಪ್ಪಾ ಇದು ಎಂದು ಗುನುಗುತ್ತಾ] ಹೌದು, ಏನು ಹೇಳಿ?

ಕಸ ಗೂಡಿಸುವ ಮನುಷ್ಯ : ಮತ್ತೊಂದುಬಾರಿ ನಿಮ್ಮನ್ನು ಬೇಜಾರು ಮಾಡ್ತಿದ್ದೀನಿ, ಅದಕ್ಕೆ ಕ್ಷಮಿಸಿ, ಆದರೆ ಇದು ಕೇವಲ ಹುಲ್ಲು ಮಾತ್ರ. ಇದರ ಕುರಿತಾಗಿ ನೀವು ಏನಾದರೊಂದು ಮಾಡಲೇಬೇಕು.

ಕಸ ಎತ್ತುವವನು : ಏನಾದರೊಂದು ಮಾಡಬೇಕಂದರೆ? ಏನು ಮಾಡಬೇಕು?

ಕಸ ಗೂಡಿಸುವ ಮನುಷ್ಯ : ಇಲ್ಲಿ ಉಪಯೋಗಿಸಿರುವ ಬ್ಯಾಂಡ್-ಏಡ್.ಗಳು ಮತ್ತು ಬ್ಯಾಂಡೇಜ್.ಗಳು ಈ ಸ್ಥಳದಲ್ಲೆಲ್ಲಾ ಬಿದ್ದಿವೆ.

ಕಸ ಎತ್ತುವವನು : ಒಳ್ಳೇಯದು, ಪ್ಲಾಸ್ಟಿಕ್ ಗ್ಲೋಸ್.ಗಳನ್ನು ಧರಿಸಿಕೊಂಡು, ಅವುಗಳನ್ನು ಎತ್ತಿರಿ.

ಕಸ ಗೂಡಿಸುವ ಮನುಷ್ಯ : ಇಲ್ಲ, ನೀನು ಅರ್ಥ ಮಾಡಿಕೊಳ್ಳುತ್ತಿಲ್ಲ, ಈ ಸ್ಥಳದಲ್ಲಿ ತುಂಬಾ ಹೆಚ್ಚಾಗಿ ಬಿದ್ದಿವೆ, ಸುಮಾರು ಒಂದು ಡಜನ್ ಇರುತ್ತವೆ, ಯಾರೋ ರೋಗಗ್ರಸ್ಥರಾಗಿರುವವರು ತಮ್ಮ ಬ್ಯಾಂಡೇಜ್.ಗಳನ್ನು ಇಲ್ಲಿ ಬೀಸಾಡಿ ಹೋಗಿದ್ದಾರೆ, ಅಸಹ್ಯವಾಗಿ ಕಾಣಿಸಿಕೊಳ್ಳುತ್ತಿದೆ.

ಕಸ ಎತ್ತುವವನು : ಸರಿ, ಎಲ್ಲಿದಿಯಾ?

ಕಸ ಗೂಡಿಸುವ ಮನುಷ್ಯ : ಯೆರೂಷಲೇಮಿನ ಹೈವೇ ರಹದಾರಿಯಲ್ಲಿರುವ ಗ್ರಾಮದಲ್ಲಿ ಪಶ್ಚಿಮ ಭಾಗದಲ್ಲಿದ್ದೇನೆ.

ಕಸ ಎತ್ತುವವನು : ಸರಿ, ಆಫೀಸರ್ ಜೋ ಕೆಲಸದಲ್ಲಿರುತ್ತಾನೆ, ಆ ಪಟ್ಟಣದೊಳಗಿನಿಂದ ಅವನು ಬರುತ್ತಿರುವಾಗ, ನಿಮ್ಮ ಬಳಿ ಬಂದು ನಿಲ್ಲುವುದಕ್ಕೆ ಹೇಳುತ್ತೇನೆ.

ಕಸ ಗೂಡಿಸುವ ಮನುಷ್ಯ : ಓ... ಇಲ್ಲ ಆಫೀಸರ್ ಜೋ... ನನಗೆ ಅವನು ಸಹಾಯ ಮಾಡುವುದಿಲ್ಲ.

ಕಸ ಎತ್ತುವವನು : ಷಿಫ್ಟ್ ಮಾರ್ಪಡುವುದಕ್ಕೆ ಇನ್ನೂ ಎರಡು ಘಂಟೆ ಹೊತ್ತು ಬೇಕಾಗಿರುತ್ತದೆ, ಅದುವರೆಗೂ ಆ ಆಫೀಸರ್ ಮಾತ್ರ ನಿಮಗೆ ಲಭ್ಯದಲ್ಲಿದ್ದಾರೆ.

ಕಸ ಗೂಡಿಸುವ ಮನುಷ್ಯ : ಓ...ಸರಿ.. ನಾನೇ ಇದನ್ನೆಲ್ಲಾ ಗೂಡಿಸಿ, ಎತ್ತಿ ಹಾಕುತ್ತೇನೆ.

### 3 ಸೂಚನೆ # 3ವಸ್ತು (ಪಾಠ 6)

ಒಂದು ಸೂಚನೆಯಾಗಿ ಈ ಭೌತಿಕ ವಸ್ತುವನ್ನು ತರಗತಿಗೆ ತೆಗೆದುಕೊಂಡು ಬನ್ನಿರಿ: ಬಿಳಿಯ ಬಟ್ಟೆ


### 4 ಸೂಚನೆ # 4ಪುರಾತನ ವಸ್ತು ಶಾಸ್ತ್ರ (ಪಾಠ 6)




ಇಲ್ಲಿ ನೀವು ಈ ದಿನದ ಯೆರೂಷಲೇಮಿನ ದೇವಾಲಯದ ಚಿತ್ರಣವನ್ನು ನೋಡಬಹುದು.
(ರಹಸ್ಯ : ಯೇಸುಕ್ರಿಸ್ತನಿಗೆ ವಿಧೇಯರಾಗಿ ತಮ್ಮ ಸ್ವಸ್ಥತೆಯನ್ನು ತೋರಿಸುವುದಕ್ಕೆ ಕುಷ್ಠರೋಗಿಗಳು ಅಲ್ಲಿಗೇ ಹೋಗಬೇಕಾಗಿತ್ತು)

### 5 ಸೂಚನೆ # 5ಬೈಬಲ್ ಸನ್ನಿವೇಶ (ಪಾಠ 6)

ರಹಸ್ಯ : 10 ಮಂದಿ ಕುಷ್ಟ ರೋಗಿಗಳಿಗೆ ಹತ್ತು ವಿಧವಾದ ಅಡುಗೆಗಳು, ಅವರು ಗೋಡೆಯ ಹೊರಗೆ ಇರುತ್ತಾರೆ, ಯಾಕಂದರೆ ಪಟ್ಟಣದ ಆಚೆ ಭಾಗದಲ್ಲಿ ಕುಷ್ಟ ರೋಗಿಗಳು ಇರಬೇಕು.



**ಕೇಸ್ ಪರಿಷ್ಕರಿಸಲಾಗಿದೆ ಕೇಸ್ ಪರಿಷ್ಕರಿಸಲಾಗಿದೆ**

## ಕೇಸ್ ಪರಿಷ್ಕರಿಸಲಾಗಿದೆ! (ಪಾಠ 6)

### ಬೈಬಲ್ ಕಥೆ (ಪಾಠ 6)

**10 ಮಂದಿ ಕುಷ್ಠ ರೋಗಿಗಳು**

**ಬೈಬಲ್ ವಾಕ್ಯಭಾಗ : ಲೂಕ.17:11-19**

ಯೇಸು 30 ಗಂಟೆಗಳ ಹೊತ್ತು ಪ್ರಯಾಣ ಮಾಡುವ ದೂರದ ಆಚೆಯಲ್ಲಿರುವ ಯೆರೂಷಲೇಮಿಗೆ ಪ್ರಯಾಣ ಮಾಡುವಾಗ ಸಮಾರ್ಯಾ ಗಲಿಲಾಯ ಸೀಮೆಗಳ ನಡುವೆ ಹಾದು ಹೋದನು. ತನ್ನ ಊರಿನಿಂದ ಅದು ಅಷ್ಟು ದೂರವೇನೂ ಇದ್ದಿಲ್ಲ. ಆತನು ಗ್ರಾಮದಲ್ಲಿ ಪ್ರವೇಶಿಸಿದ ಕೂಡಲೇ, 10 ಮಂದಿ ಕುಷ್ಠ ರೋಗಿಗಳು, "ಯೇಸು, ಬೋಧಕನೆ, ನಮ್ಮನ್ನು ಕರುಣಿಸು!" ಎಂದು ಆತನನ್ನು ಕೂಗಿದರು. ಕುಷ್ಠ ರೋಗವು ತುಂಬಾ ಕ್ರೂರವಾದ ರೋಗ, ಅದು ಬೆರಳುಗಳನ್ನೂ, ಕಾಲ್ಬೆರಳುಗಳನ್ನು, ಮೂಗು ಮತ್ತು ಕಿವಿಗಳನ್ನು ನಾಶ ಮಾಡುತ್ತದೆ; ನೀನು ಸ್ವಚ್ಚವಾಗಿಲ್ಲವೆಂದು ಕರೆಯುವಂತೆ ನಿಮ್ಮನ್ನು ಮಾಡುತ್ತದೆ. ಯೇಸು ಅವರನ್ನು ನೋಡಿದಾಗ, "ನೀವು ಹೋಗಿ ಯಾಜಕರಿಗೆ ಮೈ ತೋರಿಸಿಕೊಳ್ಳಿರಿ" ಎಂದು ಹೇಳಿದನು. ಮೋಶೆ ಧರ್ಮಶಾಸ್ತ್ರದ ಪ್ರಕಾರ, ಅವರು ಒಂದುವೇಳೆ ಗುಣ ಹೊಂದಿಕೊಂಡರೆ, ಅವರು ತಿರುಗಿ ಸಮಾಜದಲ್ಲಿ ಸೇರಿಕೊಳ್ಳಬಹುದು ಮತ್ತು ಅವರು ದೇವಾಲಯಕ್ಕೆ ಹೋಗಿ, ಆರಾಧನೆ ಮಾಡಬಹುದು. ಆದರೆ ಅವರಿಗೆ ಗುಣವಾಗದ ಕಾರಣದಿಂದ, ಯೇಸು ಹೇಳಿದ ಮಾತು ಅವರಿಗೆ ವಿಚಿತ್ರವಾಗಿ ಕೇಳಿಸಿಕೊಂಡಿತ್ತು.



ಅವರೆಲ್ಲರು ಯೆರೂಷಲೇಮಿಗೆ ಹೋಗಲು ಆರಂಭಿಸಿ, ಹೋಗುತ್ತಿರುವಾಗಲೇ ಶುದ್ಧರಾದರು/ ಗುಣವಾದರು! ಅವರಲ್ಲಿ ಒಬ್ಬನು, ತನ್ನ ದೇಹವು ಶುದ್ಧವಾಗಿರುವುದನ್ನು ನೋಡಿ, ತಕ್ಷಣವೇ ಯೇಸುವಿನ ಕಡೆಗೆ ಹಿಂತಿರುಗಿದನು. ಮಹಾ ಶಬ್ದದಿಂದ ದೇವರನ್ನು ಕೊಂಡಾಡಿಕೊಂಡು ಬರುತ್ತಾ, ಯೇಸುವಿನ ಬಳಿಗೆ ಬಂದು, ಆತನ ಪಾದಗಳಿಗೆ ಅಡ್ಡ ಬಿದ್ದು ಆತನಿಗೆ ಉಪಕಾರ ಸ್ತುತಿ ಮಾಡಿದನು. ಯೇಸು ಅವನನ್ನು ನೋಡಿ ಆಶ್ಚರ್ಯಗೊಂಡು, ಅವನನ್ನು ನೋಡಿ, "ಹತ್ತು ಮಂದಿ ಶುದ್ಧರಾದರಲ್ಲವೇ, ಮಿಕ್ಕ ಒಂಭತ್ತು ಮಂದಿ ಎಲ್ಲಿ? ದೇವರನ್ನು ಸ್ತುತಿಸುವುದಕ್ಕೆ ಈ ಅನ್ಯ ದೇಶದೇವನೇ ಹೊರತು ಇನ್ನಾರೂ ಹಿಂತಿರುಗಿ ಬರಲಿಲ್ಲವೇ?" ಎಂದು ಅವನಿಗೆ ಕೇಳಿದನು. ಗುಣವನ್ನು ಹೊಂದಿಕೊಂಡು ಹಿಂದಿರುಗಿ ಬಂದು ಕೃತಜ್ಞತೆಯಿಂದ ಇರುವ ಆ ಮನುಷ್ಯನಿಗೆ ಯೇಸು, "ಎದ್ದು ಹೋಗು, ನಿನ್ನ ನಂಬಿಕೆಯು ನಿನ್ನನ್ನು ಸ್ವಸ್ಥ ಮಾಡಿಯದೆ" ಎಂದು ಹೇಳಿದನು.

## ಅನ್ವಯ (ಪಾಠ 6)

ಕುಷ್ಠ ರೋಗಿಗಳು ಹೇಳಿದಂತೆ, ನನಗಾಗಿ ಕಾರ್ಯವನ್ನು ಮಾಡಿದ ದೇವರಿಗೆ "ವಂದನೆಗಳು" ಎಂದು ನಾನು ಹೇಳಬೇಕು.

## ಕಂಠಪಾಠ ವಾಕ್ (ಪಾಠ 6)

"ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿ ಮಾಡಿರಿ; ಇದೇ ನಿಮ್ಮ ವಿಷಯವಾಗಿ ಕ್ರಿಸ್ತ ಯೇಸುವಿನಲ್ಲಿ ತೋರಿ ಬಂದ ದೇವರ ಚಿತ್ತ." 1 ಥೆಸ.5:18.

## ಮನೆಗೆಲಸ (ಪಾಠ ೬)

ದೇವರಿಗೆ ನೀವು ಇನ್ನೂ ಕೃತಜ್ಞತೆ ವಂದನೆಗಳು ಹೇಳದಿರುವ ಮೂರು ಕಾರ್ಯಗಳನ್ನು ಪಟ್ಟಿ ಮಾಡಿಕೊಳ್ಳಿರಿ. ಸಹಜವಾಗಿ ನಾವೆಲ್ಲರು ಆಹಾರಕ್ಕಾಗಿ, ಬಟ್ಟೆಗಳಿಗಾಗಿ ಮತ್ತು ಕುಟುಂಬಕ್ಕಾಗಿ ವಂದನೆಗಳು ಹೇಳುತ್ತಿರುತ್ತೇವೆ. ಕೃತಜ್ಞತಾಸ್ತುತಿಗಳನ್ನು ಹೇಳುವುದಕ್ಕೆ ವಿದ್ಯಾರ್ಥಿಗಳು ಹೊಸ ಆಲೋಚನೆಗಳು ಮಾಡುವಂತೆ ಹೇಳಿರಿ; ಅವು ಹೇಗಿರಬೇಕೆಂದರೆ: ಕಳೆದುಕೊಂಡಿರುವ ವಸ್ತುವನ್ನು ನಿಮ್ಮೊಂದಿಗೆ ಹುಡುಕುವುದಕ್ಕೆ ಸಹಾಯ ಮಾಡುವುದು, ಶಾಲೆಗೆ ಹೋಗುವವರೆಗೂ ಮಳೆ ಬರದೇ ಇರುವುದಕ್ಕಾಗಿ, ಈ ದಿನದಂದು ನೀವು ಓಡಿಸುತ್ತಿರುವ ಗಾಡಿ ಒಂದುಸಲ ಕೂಡ ಕೆಳಗೆ ಬೀಳದಂತೆ ಕಾಪಾಡಿದ್ದಕ್ಕಾಗಿ, ಈ ದಿನದಂದು ನಿಮ್ಮ ಸಹೋದರಿ ಅಥವಾ ಸಹೋದರನಿಗೆ ಒಳ್ಳೆಯ ವಿಷಯಗಳನ್ನು ಹೇಳುವುದಕ್ಕೆ ಸಾಮರ್ಥ್ಯವನ್ನು ಕೊಟ್ಟಿದ್ದಕ್ಕಾಗಿ, ಇನ್ನೂ ಇತ್ಯಾದಿ ಹೇಳಬಹುದು.

## ದೇವರ ಡಿ.ಏನ್.ಎ (ಪಾಠ 6)

ಈ ಪಾಠದಿಂದ ನಾವು ದೇವರ ಕುರಿತಾಗಿ ಏನನ್ನು ಕಲಿತುಕೊಂಡಿದ್ದೇವೆ? ದೇವರಿಗೆ ತನ್ನ ಜನರಿಂದ ವಿಧೇಯತೆಯನ್ನು ಮತ್ತು ಕೃತಜ್ಞತೆಯನ್ನು ಎದುರು ನೋಡುತ್ತಿದ್ದಾನೆ.

ದೇವರ ಡಿ.ಎನ್.ಎ.



# ವಿನೋದ ಸಮಯ) !ಪಾಠ(೬

## ಆಟ (ಪಾಠ ೬)

ಪೊರಕೆಯನ್ನು ಹಿಡಿದುಕೊಳ್ಳಿರಿ.

ಆಟ ಆಡುವ ಮಕ್ಕಳೆಲ್ಲರೂ ವೃತ್ತಾಕಾರದಲ್ಲಿ ನಿಲ್ಲಬೇಕು. ಒಬ್ಬ ವಿದ್ಯಾರ್ಥಿ ಮಾತ್ರ ಅವರ ಮಧ್ಯೆದಲ್ಲಿ ನಿಲ್ಲಬೇಕು. ವೃತ್ತಾಕಾರದಲ್ಲಿ ನಿಂತುಕೊಂಡಿರುವ ಪ್ರತಿಯೊಬ್ಬರಿಗೆ ಒಂದು ಸಂಖ್ಯೆಯನ್ನು ಕೊಡಲ್ಪಟ್ಟಿರುತ್ತದೆ. ಮಧ್ಯೆದಲ್ಲಿರುವ ಆಟಗಾರನು ಪೊರಕೆಯನ್ನು ಒಂದೇ ಬೆರಳಿನಿಂದ ಹಿಡಿದುಕೊಂಡಿರುತ್ತಾನೆ. ಇದ್ದಕ್ಕಿಂದ್ದಂತೆ, ಆ ಬೆರಳಿನಿಂದ ಆ ಪೊರಕೆಯನ್ನು ಮೇಲಕ್ಕೆ ಎತ್ತಿ ಹಿಡಿದು, ಅದೇ ಸಮಯದಲ್ಲಿ, ಒಂದು ಸಂಖ್ಯೆಯನ್ನು ಕರೆಯುತ್ತಾನೆ. ಆಗ ಆ ಪೊರಕೆಯು ನೆಲದ ಮೇಲೆ ಬೀಳುವುದಕ್ಕೆ ಮುಂಚಿತವಾಗಿ, ಕರೆದ ಆ ಸಂಖ್ಯೆಯವನು ಬಂದು ಆ ಪೊರಕೆಯನ್ನು ಹಿಡಿದುಕೊಳ್ಳಬೇಕು. ಒಂದು ಅವನು ಅದನ್ನು ಹಿಡಿದುಕೊಂಡರೆ, ಆಗ ಅವನು ಮಧ್ಯದಲ್ಲಿ ನಿಲ್ಲುವ ಅವಕಾಶ ಬರುತ್ತದೆ, ಇಲ್ಲಂದರೆ ಹಿಂದಿರುಗಿ ವೃತ್ತದಲ್ಲಿ ನಿಲ್ಲಬೇಕು.

## ಚರ್ಚೆ (ಪಾಠ 6)

(ಹಿರಿಯ ವಿದ್ಯಾರ್ಥಿಗಳಿಗಾಗಿ)

1. ಈ ದಿನಗಳಲ್ಲಿ ನಾವು ಯಾಕೆ ಹೆಚ್ಚಾಗಿ ಸ್ವಸ್ಥತೆಗಳನ್ನು ನೋಡುತ್ತಿಲ್ಲ?

ಸ್ವಸ್ಥೆಗಳ ಕುರಿತಾಗಿ ಮಕ್ಕಳು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವಂತೆ ಮಾಡಿರಿ; ನಿಮ್ಮ ಸಭೆಯಲ್ಲಿ ಅಥವಾ ನಗರದಲ್ಲಿ ದೇವರ ಮಾಡಿದ ಕಾರ್ಯಗಳನ್ನು ಹಂಚಿಕೊಳ್ಳಿರಿ. ಸ್ವಸ್ಥತೆಗಳ ಕುರಿತಾಗಿ ನಿಮ್ಮ ಸಂಸ್ಥೆಯ ವಿಶ್ವಾಸಿಗಳ ಅಭಿಪ್ರಾಯಗಳ ಕುರಿತಾಗಿ ಚರ್ಚಿಸಿರಿ. ಸ್ವಸ್ಥತೆಗಳು ನಡೆಯದೇ ಇರುವುದಕ್ಕೆ ಉಂಟಾದ ಕಾರಣಗಳ ಕುರಿತಾಗಿ ಮಾತನಾಡಿರಿ; ಪ್ರಜೆಗಳಲ್ಲಿ ಅಪನಂಬಿಕೆ, ಸ್ವಸ್ಥೆಯ ವರವನ್ನು ಹೊಂದಿಕೊಂಡಿರುವ ಶಿಷ್ಯರು ಅತೀ ಕಡಿಮೆ, ನಿಮ್ಮ ಪ್ರಾಂತ್ಯದಲ್ಲಿ ಹೆಚ್ಚಿನ ಒತ್ತಡ, ಕೇಳುವವರು ಅತೀ ಕಡಿಮೆ, ಅಥವಾ ಉಜ್ಜೀವನ ಇಲ್ಲದಿರುವುದು.

2. ನಾನು ಎದುರುನೋಡುತ್ತಿರುವ ಸ್ವಸ್ಥತೆಯನ್ನು, ಹೊಂದಿಕೊಳ್ಳದಿರುವುದಕ್ಕೆ ಕಾರಣಗಳೇನು?





ಅಪನಂಬಿಕೆ, ಅಥವಾ ದೇವರು ನಿಮಗಾಗಿ ವಿಭಿನ್ನವಾದ ಪ್ರಣಾಳಿಕೆಯನ್ನು ಹೊಂದಿಕೊಂಡಿರುತ್ತಾನೆ ಮತ್ತು ನಿಮ್ಮ ಭವಿಷ್ಯತ್ತನ್ನು ಅರಿತಿರುತ್ತಾನೆ, ಅಥವಾ ನಿಮ್ಮ ಉದ್ದೇಶಗಳು ಸರಿಯಾಗಿರುವುದಿಲ್ಲ. ನಿಮಗೆ ಗುಣವಾಗುವುದು ನಿಮಗೆ ಒಳ್ಳೇಯದಾಗಿರುವುದಿಲ್ಲ, ಅಥವಾ ನಮ್ಮ ಜೀವನಗಳಲ್ಲಿ ಪಾಪವಿರಬಹುದು, ಅಥವಾ ಸರಿಯಾದ ಸಮಯವಾಗದಿರಬಹುದು ಅಥವಾ ನಿಮ್ಮ ಕಾಯಿಲೆಯಲ್ಲಿ ಅಥವಾ ಅನಾರೋಗ್ಯದಲ್ಲಿ ದೇವರಿಗೆ ಮಹಿಮೆ ಬರುತ್ತಿರಬಹುದು.

3. 10 ಮಂದಿ ಕುಷ್ಠ ರೋಗಿಗಳು ತಮ್ಮ ಸ್ವಸ್ಥತೆಗೆ ಅರ್ಹರೋ?

ಅರ್ಹತೆ ಅಥವಾ ಹಕ್ಕು ಎನ್ನುವುದು ಇವತ್ತು ತುಂಬಾ ಹೆಚ್ಚಾಗಿ ವ್ಯಾಪಕವಾಗಿದೆ, ಅನೇಕಮಂದಿ ತಾವು ಪಡೆದುಕೊಂಡಿರುವುದನ್ನು ಸ್ವಂತ ಮಾಡಿಕೊಂಡಿದ್ದಾರೆ. ಆದ್ದರಿಂದ ಅವರಲ್ಲಿ ಕೃತಜ್ಞತೆಯಿಲ್ಲ. ಅರ್ಹತೆ ಅಥವಾ ಹಕ್ಕನ್ನು ಪಡೆದುಕೊಳ್ಳುವುದಕ್ಕೆ ನಾವಾರು? ಉಪಾಧ್ಯಾಯರಾಗಿ ನಿಮ್ಮ ಗುರಿಯೇನಂದರೆ ವಿದ್ಯಾರ್ಥಿಗಳು ಯಾವ ವಿಷಯದಲ್ಲಾದರೂ ತಮಗೆ ಯಾವ ಹಕ್ಕುಗಳಿಲ್ಲವೆಂದು ಅವರು ಗುರುತಿಸುವಂತೆ ಮಾಡಬೇಕು. ನಾವೇನಾಗಿದ್ದೆವೋ ಅದಕ್ಕಾಗಿಯೂ ಮತ್ತು ನಾವು ಏನನ್ನು ಪಡೆದುಕೊಂಡಿದ್ದೇವೋ ಅವುಗಳಿಗಾಗಿ ಕೃತಜ್ಞತೆಯಿಂದ ಇರಬೇಕು. ಯಾಕಂದರೆ ಈ ಭೂಮಿಯ ಮೇಲೆ ನಮ್ಮ ಕರ್ತವ್ಯವನ್ನು ನೆರವೇರಿಸುವುದಕ್ಕೆ ನಮಗೆ ಬೇಕಾದ ಎಲ್ಲವುಗಳನ್ನು ದೇವರು ಕೊಟ್ಟಿದ್ದಾರೆ.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 6)






## ಲೂಕಾಸ್ ರವರ ಪ್ರಯೋಗ (ಪಾಠ 6)

ಒಂದು ಗಟ್ಟಿಯಾದ ಕಾಗದದ ಅಟ್ಟೆಯನ್ನು ತೆಗೆದುಕೊಂಡು ಕಮಾನ್ ರೀತಿ ಮಾಡಬೇಕೆಂದು ವಿದ್ಯಾರ್ಥಿಗಳಿಗೆ ಹೇಳಿರಿ, ಅದನ್ನು ಒಂದು ಮೇಜಿನ ಮೇಲೆ ಇಟ್ಟು, ಆ ಕಾಗದ ಕಮಾನ್ ಒಳಗೆ ಗಾಳಿ ಬೀಸಬೇಕು. ಆಗ, ಸಹಜವಾಗಿರುವ ಗಾಳಿ ಮೆಲ್ಲಗೆ ಬೀಸುವುದಕ್ಕಿಂತಲು ವೇಗವಾಗಿ ಬೀಸುವ ಗಾಳಿಯು ಕಡಿಮೆ ಗಾಳಿಯ ಒತ್ತಡವಿರುವುದನ್ನು ನೋಡಿವಿರಿ. ಒಂದು ವಿಮಾನದ ರೆಕ್ಕೆಯ ಮೇಲ್ಭಾಗದಲ್ಲಿ ವೇಗವಾದ ಗಾಳಿಯೇ ಅದನ್ನು ಗಾಳಿಯ ಒಳಗಡೆಗೆ ತೆಗೆದುಕೊಂಡು ಹೋಗುವುದು. (ಹೆಚ್ಚಿನ ವಿವರಣೆಗಳಿಗಾಗಿ ಯೂ ಟ್ಯೂಬ್ ನೋಡಿರಿ.)

https://www.facebook.com/childrenareimportant/videos/1291958180840562/

# --[ ಕೇಸ್ 7 ]--



## ಸೂಚನೆಗಳು! (ಕ್ಲೂಸ್) (ಪಾಠ 7)

### 1 ಸೂಚನೆ #1 ಅಂಶ (ಪಾಠ 7)

**ಪಪ್ಪೀಗಳು ಕಾಣಿಸಿಕೊಳ್ಳುವ ಕೇಸ್**

### 2 ಸೂಚನೆ #2 ನಾಟಕ (ಪಾಠ 7)

ಕಥೆ ಹೇಳುವವರು: ಈ ಕಥೆಯು ಕಲ್ಪನೆಯಾಗಿರುತ್ತದೆ, ಆದರೆ ತಪ್ಪು ಮಾದದಿರುವವರನ್ನು ಸಂರಕ್ಷಿಸಲು ಕೆಲವೊಂದು ಹೆಸರುಗಳನ್ನು ಮತ್ತು ಸ್ಥಳಗಳನ್ನು ಮಾರ್ಪಾಟು ಮಾಡಲಾಗಿದೆ.



ಪಾಡ್ : ದೊಡ್ಡ-ದೊಡ್ಡ-ದೊಡ್ಡ-ದೊಡ್ಡ-ದೊಡ್ಡ-ದೊಡ್ಡ-ಅಜ್ಜ?

ದೊಡ್ಡ ಅಜ್ಜ: ಹೌದು, ಹುಡುಗ?

ಪಾಡ್ : ಪರಿಶೋಧನೆಯ ಮನೆಗೆಲಸ ವಿಷಯದಲ್ಲಿ ನೀವು ನಮ್ಮ ಶಾಲೆಯೊಂದಿಗೆ ಸಹಾಯ ಮಾಡುತ್ತೀರಾ?

ದೊಡ್ಡ ಅಜ್ಜ : ತಪ್ಪದೇ ಸಹಾಯ ಮಾಡುತ್ತೇನೆ, ನಾನು ಕೆಲಸ ಮಾಡುತ್ತಿರುವಾಗ ನನ್ನ ಪಕ್ಕದಲ್ಲಿ ಕೇವಲ ನಡೆಯುತ್ತಾಯಿರು, ಈ ದಿನದಲ್ಲಿ ಕೊನೆಗೆ ಸಸಿ ಹಚ್ಚಿರುವ ಈ ಸಾಲನ್ನು ನಾನು ಪಡೆಯಬೇಕು, ಆದ್ದರಿಂದ ನಾನು ನಾಳೆಯ ಹಿಂಭಾಗದಲ್ಲಿ ಇರುವುದಿಲ್ಲ. ಹಣೆಯ ಮೇಲೆ ಬೆವರು ತೆಗೆದುಕೊಳ್ಳುತ್ತಾ.

ಪಾಡ್ : ಓ..ಒಳ್ಳೇಯದು! ನಾನು ಉತ್ತಮ ಪರಿಶೋಧಕನಾಗುತ್ತೇನೆ. ತುಂಬಾ ವೃದ್ಧ ವ್ಯಕ್ತಿಯ ತನ್ನ ಸವಿ ನೆನಪುಗಳನ್ನು ನಾನು ಪರಿಶೋಧನೆ ಮಾಡುತ್ತಿದ್ದೇನೆ. ಇದು ಕೇವಲ ವರಧಿಗೆ ಮಾತ್ರವೆಂದು ನನಗೆ ಗೊತ್ತು.

ದೊಡ್ಡ ಅಜ್ಜ : ಅದಕ್ಕಾಗಿ ನನ್ನನ್ನು ಆಯ್ಕೆ ಮಾಡಿಕೊಂಡಿದ್ದೀಯ, ನಿನ್ನ ಕೆಲಸ ಮುಗಿಯಿತೋ?

ಪಾಡ್ : ನಾನು ತಪ್ಪದೇ ಮಾಡಿದ್ದೇನೆ. ಅದಕ್ಕಾಗಿ, ಈ ಎಲ್ಲಾ ಪರ್ವತಗಳು ಇಲ್ಲಿ ಯಾವರೀತಿ ಬಂದವೆಂದು ನನಗೆ ಹೇಳುತ್ತೀರಾ?

ದೊಡ್ಡ ಅಜ್ಜ : ನಾಚಿಕೆ ಪಡುತ್ತಾ, ನನಗೆ ವಯಸ್ಸಾಗಿರಬಹುದು, ಆದರೆ ನಾನು ಹೊಲಸುಗಿಂತ ವಯಸ್ಸಾಗಿದ್ದವನಲ್ಲ.

ಪಾಡ್ : ಓಕೇ, ನದಿಯ ಕುರಿತಾಗಿ ಹೇಳಿರಿ?

ದೊಡ್ಡ ಅಜ್ಜ : ನೀರಿನ ಬುಗ್ಗೆಗಳಿಂದ ಬರುತ್ತವೆಂದು ನಾನು ನೋಡಿದ್ದೇನೆ, ಆದರೆ ನಾನು ತುಂಬಾ ಚಿಕ್ಕವನಾಗಿದ್ದೆ ಮತ್ತು ಅದರ ಹಿಂಭಾಗದಲ್ಲಿ ನಾನು ಇದ್ದಿಲ್ಲ.

ಪಾಡ್ : ಆದರೆ, ನೀವು ಜ್ಞಾಪಕ ಮಾಡಿಕೊಳ್ಳುವ ಅತೀ ಪ್ರಾರಂಭದ ವಿಷಯವೇನು?

ದೊಡ್ಡ ಅಜ್ಜ : ಪ್ರಾಣಿಗಳು. ನನ್ನ ಹೆಂಡತಿ ಮತ್ತು ನಾನು ಪ್ರತಿದಿನ ಬೆಳಗ್ಗೆ ಎದ್ದು, ಅವು ಆಟವಾಡಿಕೊಳ್ಳುತ್ತಿರುವುದನ್ನು ನೋಡುತ್ತಾ ಟಿಫನ್ ಮಾಡುತ್ತಿದ್ದೆವು. ಅದು ಎಷ್ಟು ಚೆಂದವಾಗಿದೆಯಲ್ಲ ಎಂದು ನಾನು ಹೇಳುತ್ತಿದ್ದೆ, ಅಗ ಅವಳು ಇಲ್ಲಿರುವ ಕಪ್ಪು ಬಣ್ಣದ್ದಾ ಅಥವಾ ಅಲ್ಲಿರುವ ಕೆಂಪು ಬಣ್ಣದ್ದಾ ಎಂದು ಕೇಳುತ್ತಿದ್ದಳು. ಸ್ವಲ್ಪ ಸಮಯವಾದನಂತರ ಅದನ್ನು ಗುರುತಿಸಿ, ಸಂತೋಷಪಡುತ್ತಾ ನಮ್ಮ ಟಿಫನ್ ನಾವು ಮಾಡುತ್ತಿದ್ದೆವು. ಕೇವಲ ಪ್ರಾಣಿಗಳನ್ನು ಮಾತ್ರ ನೋಡಿರಿ, ಅವು ಕೆಲವೊಂದು ಚಿಕ್ಕ ಚಿಕ್ಕ ಹುಚ್ಚು ಕ್ರಿಯೆಗಳು ಮಾಡುತ್ತಾ ಇರುತ್ತವೆ.

ಪಾಡ್ : ಹೌದಾ? ಆಗಿದ್ದರೆ ಅದು ಇನ್ನೂ ಚೆನ್ನಾಗಿರುತ್ತದೆಯಲ್ಲಾ....

ದೊಡ್ಡ ಅಜ್ಜ : ಹೌದು, ಹಾಗೆ ಇರುತ್ತದೆ. ಆ ದಿನ ನಾವು ನೋಡಿದಂತೆ, ನೀನಾಗಲೀ ಅಥವಾ ನಿಮ್ಮ ಮಕ್ಕಳಲ್ಲಿ ಒಬ್ಬರಾಗಲಿ ಒಂದಾನೊಂದು ದಿನ ನೋಡಬಹುದು.

ಪಾಡ್ : ಅದು ತುಂಬಾ ಆಶ್ಚರ್ಯಕರವಾಗಿ ಇರುತ್ತದೆ.


## 3 ಸೂಚನೆ #3 ವಸ್ತು (ಪಾಠ 7)

ಸೂಚನೆಯಾಗಿ ಈ ಭೌತಿಕ ವಸ್ತುವನ್ನು ನಿಮ್ಮ ತರಗತಿಗೆ ತೆಗೆದುಕೊಂಡು ಬನ್ನಿರಿ : ಹೂವು




## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 7)

ಈ ದಿನದ ಬಾಗ್ದಾದ್.ನಲ್ಲಿರುವ ಟಿಗ್ರಿಸ್ ನದಿಯ ಚಿತ್ರ. (ರಹಸ್ಯ : ಆದಿಕಾಂಡ 2ನೇ ಅಧ್ಯಾಯದಲ್ಲಿ ಈ ಪ್ರಾಂತ್ಯದ ಕುರಿತಾಗಿ ಬರೆಯಲ್ಪಟ್ಟಿದೆ.)



## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 7)

ರಹಸ್ಯ: ನಮಗೆ ಕಾಣಿಸಿಕೊಳ್ಳುವ ಸೃಷ್ಟಿಯೆಲ್ಲ ಆಧಾರವಾಗಿರುತ್ತದೆ.

**ಕೇಸ್ ಪರಿಷ್ಕರಿಸಲಾಗಿದೆ ಕೇಸ್ ಪರಿಷ್ಕರಿಸಲಾಗಿದೆ**

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 7)

## ಬೈಬಲ್ ಕಥೆ (ಪಾಠ 7)

**ಸೃಷ್ಟಿ**

**ಬೈಬಲ್ ವಾಕ್ಯಭಾಗದಿಂದ : ಆದಿ 1**

ಏಳನೆಯ ದಿನದಂದು ದೇವರು ಕೆಲಸದಿಂದ ವಿಶ್ರಮಿಸಿದರು, ಅವರು ಸೃಷ್ಟಿಯೆಲ್ಲಾ ಚೆನ್ನಾಗಿ, ಸುಂದರವಾಗಿದೆಯೆಂದು ನೋಡಿ, ತನ್ನ ಕೆಲಸದಿಂದ ಬಿಡುವು ತೆಗೆದುಕೊಂಡು ವಿಶ್ರಾಂತಿ ಪಡೆದರು. ಆದರೆ ಪ್ರಾರಂಭದಿಂದ ನಾವು ನೋಡುವುದಾದರೆ, ಮೊದಲನೇ ದಿನ, "ಬೆಳಕಾಗಲಿ.." ಎಂದು ದೇವರು ಹೇಳಲು, ಬೆಳಕಾಯಿತು. ಎರಡನೇ ದಿನದಂದು, "ಆಕಾಶವು ಉಂಟಾಗಲಿ" ಎಂದು ದೇವರು ಹೇಳಲು, ಆಕಾಶವು ಉಂಟಾಯಿತು. ಮೂರನೇ ದಿನದಂದು, ದೇವರು ತುಂಬಾ ಕೆಲಸದಲ್ಲಿದ್ದರು, ಭೂಮಿಯನ್ನು ಮಾಡಿದರು ಮತ್ತು ಅದರ ಮೇಲೆ ಎಲ್ಲಾ ಗಿಡ ಮರಗಳನ್ನು ಉಂಟು ಮಾಡಿದನು. ಅವುಗಳಲ್ಲಿ ಪ್ರತಿಯೊಂದು ಹೂವನ್ನು, ಮರವನ್ನು ಮತ್ತು ಹುಲ್ಲುಗಳನ್ನುಂಟು ಮಾಡಿದನು. ನಾಲ್ಕನೇ ದಿನದಂದು, ಹಗಲಿರುಳುಗಳನ್ನು, ಸಮಯಗಳನ್ನು, ದಿನ ಸಂವತ್ಸರಗಳನ್ನು ತೋರಿಸುವುದಕ್ಕೆ ದೇವರು ಸೂರ್ಯನನ್ನು ಚಂದ್ರರನ್ನುಂಟು ಮಾಡಿದನು. ರಾತ್ರಿಯಲ್ಲಿ ಮಿಂಚುವಂತೆ ಲಕ್ಷಾಂತರ ನಕ್ಷತ್ರಗಳನ್ನು ತಯಾರು ಮಾಡಿದನು. ಐದನೇ ದಿನದಂದು, ಗಾಳಿಯಲ್ಲಿ ಆಕಾಶದ ಪಕ್ಷಿಗಳನ್ನು, ಸಮುದ್ರದಲ್ಲಿ ಜಲಚರ ಪ್ರಾಣಿಗಳನ್ನು ಉಂಟುಮಾಡಿದನು, ಮತ್ತು ದೇವರು ಅವುಗಳಿಗೆ ಫಲಿಸಿ, ವೃದ್ಧಿ ಹೊಂದಿರೆಂದು ಹೇಳಿದರು.



ಆರನೇ ದಿನದಂದು, ದೇವರು ಪಶು ಕ್ರಿಮಿಗಳನ್ನು ಮತ್ತು ಕಾಡು ಮೃಗಗಳನ್ನು ಹುಟ್ಟಿಸಿದನು. ಆದನಂತರ ದೇವರು ಮನುಷ್ಯನನ್ನು ತಯಾರಿಸಿದನು. ಮಣ್ಣಿನಿಂದ ಉಂಟುಮಾಡಿದ ಆ ಚಿಕ್ಕ ದೇಹದೊಳಗೆ ತನ್ನ ಜೀವಶ್ವಾಸವನ್ನು ಊದಿದನು! ದೇವರು ಅವನಿಗೆ ಎಲ್ಲಾ ಗಿಡ ಮರಗಳ ಮೇಲೆ, ಹಾರಾಡುವ ಪಕ್ಷಿಗಳ ಮೇಲೆಯೂ, ಪಶುಗಳ ಮೇಲೆಯೂ ದೊರೆತನ ಮಾಡುವುದಕ್ಕೆ ಅಧಿಕಾರವನ್ನು ಕೊಟ್ಟನು. ದೇವರು ಪ್ರತ್ಯೇಕವಾದ ತೋಟವನ್ನು ಮಾಡಿ, ಅದರಲ್ಲಿ ಆದಾಮನನ್ನು ಇಟ್ಟನು. ಅದಾಮನು ಗಾಢನಿದ್ರೆಯಲ್ಲಿರುವಾಗ, ಇವನು ಒಬ್ಬಂಟಿಗನಾಗಿ ಇರುವುದು ಒಳ್ಳೆಯದಲ್ಲವೆಂದು ನಿರ್ಣಯಿಸಿಕೊಂಡನು, ಆದ್ದರಿಂದ ಅವನ ಪಕ್ಕೆಯ ಎಲುಬುಗಳಲ್ಲಿ ಒಂದನ್ನು ತೆಗೆದುಕೊಂಡು ಅದರಿಂದ ಸ್ತ್ರೀಯಾಗಿರುವ ಹವ್ವಳನ್ನು ಮಾಡಿದನು. ಆದಮೇಲೆ, ದೇವರು ಅವರಿಗೆ ನೀವು ಬಹು ಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ ಎಂದು ಆಜ್ಞೆ ಮಾಡಿದನು ಮತ್ತು ಏಳನೇಯ ದಿನದಂದು ವಿಶ್ರಾಂತಿ ತೆಗೆದುಕೊಂಡನು.

## ಅನ್ವಯ (ಪಾಠ 7)

ಆದಾಮನಂತೆ, ನಾನು ಕೂಡ ನನ್ನ ಸುತ್ತಮುತ್ತಲಿರುವ ಈ ಸೃಷ್ಟಿಯನ್ನು ಚೆನ್ನಾಗಿ ನೋಡಿಕೊಳ್ಳುವ ಬಾಧ್ಯತೆಯಿದೆ.

## ಕಂಠಪಾಠ ವಾಕ್ಯ (ಪಾಠ 7)

"ದೇವರು ಅವರನ್ನು ಆಶೀರ್ವದಿಸಿ - ನೀವು ಬಹು ಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನಮಾಡಿರಿ ಅಂದನು" - ಆದಿ.1:28.

## ಮನೆಗೆಲಸ (ಪಾಠ 7)

ನಿಮ್ಮ ತೋಟದಲ್ಲಿ ಒಂದು ಗಿಡಕ್ಕೆ ನೀರನ್ನು ಹಾಕಿರಿ ಮತ್ತು ಅದರ ಸುತ್ತಮುತ್ತಲಿರುವ ಹುಲ್ಲನ್ನು ತೆಗೆಯಿರಿ, ಇದರಿಂದ ಅದು ಚೆನ್ನಾಗಿ ಬೆಳೆಯುವುದು.

## ದೇವರ ಡಿ.ಎನ್.ಎ (ಪಾಠ 7)

ಈ ಪಾಠದಿಂದ ದೇವರ ಕುರಿತಾಗಿ ನಾವು ಏನನ್ನು ಕಲಿತುಕೊಳ್ಳುತ್ತಿದ್ದೇವೆ? ದೇವರೇ ಎಲ್ಲಾ ಸೃಷ್ಟಿಯನ್ನು ಉಂಟುಮಾಡಿದರು.





# ವಿನೋದ ಸಮಯ (ಪಾಠ 7)

## ಆಟ (ಪಾಠ 7)

ಸೃಷ್ಟಿ ಆಟ

ನಿಮ್ಮ ಕಾಗದದ ಮೇಲೆ ಸೂರ್ಯ ಮತ್ತು ಚಂದ್ರ ಎನ್ನುವ ಪದಗಳನ್ನು ಬರೆಯಿರಿ; ಪ್ರತಿಯೊಬ್ಬರ ಅನುಕೂಲಕ್ಕೋಸ್ಕರ ಅವುಗಳ ಚಿತ್ರಗಳನ್ನು ಬಿಡಿಸಿರಿ. ನೆಲದ ಮೇಲೆಯಾಗಲಿ ಅಥವಾ ಗೋಡೆಯ ಮೇಲೆಯಾಗಲಿ ಅದನ್ನು ಅಂಟಿಸಿರಿ. ಪಕ್ಷಿಗಳು, ಮೀನು, ಮರಗಳು, ಕೆರೆಗಳು, ಇನ್ನೂ ಮುಂತಾದವುಗಳು, ಅಂದರೆ ಆದಿಕಾಂಡದಲ್ಲಿ ಪಟ್ಟಿ ಮಾಡಿರುವ ಪ್ರತಿಯೊಂದಕ್ಕಾಗಿ ಗುರುತುಗಳನ್ನು ಬರೆಯಿರಿ. ಆಟವಾಡುವುದಕ್ಕೆ, ಆ ಪಟ್ಟಿಯಲ್ಲಿರುವ ಯಾವುದಾದರೊಂದನ್ನು ಉಪಾದ್ಯಾಯರು ಕರೆಯುತ್ತಾರೆ, ಆಗ ಮಕ್ಕಳು ಆ ಗುರುತಿನ ಕಡೆಗೆ ಹೋಗಿ, ಕೂಗಿರುವದನ್ನು ಚಿತ್ರಿಸಬೇಕು. ಹಿಂದೆ ಬಿದ್ದ ವಿದ್ಯಾರ್ಥಿ "ಔಟ್" ಆಗುತ್ತಾನೆ ಮತ್ತು ಅಲ್ಲಿ ಪಕ್ಕಕ್ಕೆ ಕೂಡುತ್ತಾನೆ. ದೇವರು ಸೃಷ್ಟಿ ಮಾಡಿದವುಗಳ ಚಿತ್ರಗಳ ಕಡೆಗೆ ಮಕ್ಕಳು ಹೋಗುತ್ತಿರುವಾಗ, ಚಿಕ್ಕಮಕ್ಕಳು ಪ್ರಾಣಿಗಳಂತೆ ಮಾಡುವುದಕ್ಕೆ ತುಂಬಾ ಇಷ್ಟಪಡುತ್ತಾರೆ.

## ಚರ್ಚೆ (ಪಾಠ 7)

(ಹಿರಿಯ ವಿದ್ಯಾರ್ಥಿಗಳಿಗಾಗಿ)

1. ಕ್ಲೋನಿಂಗ್ ಕುರಿತಾಗಿ ನಿಮ್ಮ ಆಲೋಚನೆ ಏನು? ವಿಜ್ಞಾನದೊಂದಿಗೆ ನಾವು ಮನುಷ್ಯರನ್ನು ಉಂಟು ಮಾಡಬಹುದೇ?

ಸೃಷ್ಟಿಯಲ್ಲಿ ದೇವರ ಕೆಲಸದ ಕುರಿತಾಗಿ ನಿಮ್ಮ ವಿದ್ಯಾರ್ಥಿಗಳನ್ನು ಮಾತನಾಡಿಸಿರಿ ಮತ್ತು ಆತನು ಶೂನ್ಯದಿಂದ ಮನುಷ್ಯರನ್ನು ಮಾಡಿದ್ದಾನೆ. ನಾವು ಯಾವುದೇ ಮಾಡಬೇಕೆಂದರು, ಅಥವಾ ತಯಾರಿಸಬೇಕೆಂದರು ತಪ್ಪದೆ ದೇವರ ವಿಜ್ಞಾನವನ್ನು ಉಪಯೋಗಿಸಬೇಕೆನ್ನುವುದು ಸತ್ಯ. ಅದೇ ಡಿಏನ್.ಎ ಯಿಂದ ಮಾಡಿರುವ ಒಬ್ಬರ ಬೆಳೆಗಳ ಕುರಿತಾಗಿಯೂ ಮತ್ತು ಎಷ್ಟು ದೇಶಗಳು ಕ್ಲೋನಿಂಗ್ ವ್ಯವಸ್ಥೆಯನ್ನು ಅನುಮತಿ ನೀಡುತ್ತಾರೆ ಅಥವಾ ಎಷ್ಟು ದೇಶಗಳು ಅನುಮತಿ ನೀಡುತ್ತಿಲ್ಲ ಎನ್ನುವದರ ಕುರಿತಾಗಿ ಮಾತನಾಡಿರಿ.

2. ನಾವು ಹಳೇ ಒಡಂಬಡಿಕೆ ಕೆಳಗೆ ಇಲ್ಲದಿರುವಾಗ, ನಾನು ಯಾಕೆ ವಾರಕ್ಕೆ ಒಂದು ದಿನ ವಿಶ್ರಾಂತಿ ತೆಗೆದುಕೊಳ್ಳಬೇಕು?




ಈ ಪ್ರಶ್ನೆಗೆ ನೀವು ಉತ್ತರ ಕೊಡುವುದಕ್ಕೆ ಮುಂಚಿತವಾಗಿ ಸಬ್ಬಾತನ್ನು ನಿಮ್ಮ ಸಂಸ್ಥೆಯವರು ಯಾವಾಗ ಆಚರಿಸುತ್ತಾರೋ ಮತ್ತು ಹೇಗೆ ಆಚರಿಸುವರೋ ಎಂದು ನಿಮ್ಮ ಪಾಸ್ಟರ್ ಬಳಿ ತಿಳಿದುಕೊಳ್ಳಿರಿ. ಸಬ್ಬಾತನ್ನು ಮಾಡುವುದಕ್ಕೆ ನಿಮ್ಮ ಸಂಸ್ಥೆಯವರು ಒತ್ತಡ ಮಾಡದಿದ್ದರೂ, ನಮ್ಮ ದೇಹಗಳಿಗೆ ಬೇಕಾದ ವಿಶ್ರಾಂತಿ ಸಿಗದಿದ್ದರೆ, ಅವು ಬಲಹೀನವಾಗುತ್ತವೆಯೆಂದು ನಿಮ್ಮ ಮಕ್ಕಳೊಂದಿಗೆ ಹಂಚಿಕೊಳ್ಳಿರಿ. ಕೃಪೆಯಲ್ಲಿ ನಾವು ಇದ್ದರೂ, ಪ್ರತೀ ವಾರ ನಮಗೆ ವಿಶ್ರಾಂತಿ ಬೇಕೇ ಬೇಕು, ನಮಗೆ ವಿಶ್ರಾಂತಿ ಬೇಕೆಂದು ದೇವರಿಗೆ ಗೊತ್ತಿದೆ.


3. ಈ ವಿನಾಶದಿಂದ ಪ್ರಾಣಿಗಳನ್ನು ಕಾಪಾಡುವುದು, ಭೂ ಉರಿಯು ಮತ್ತು ತಿರಿಗಿ ತಯಾರಿಕೆಯಾ ಕುರಿತಾಗಿ ಏನೆಂದು ಹೇಳಬಹುದು? ಇವುಗಳಲ್ಲಿ ಕ್ರೈಸ್ತರು ಪ್ರವೇಶಿಸಬಹುದೋ?


ದೇವರು ಮಾಡಿದ ಸೃಷ್ಟಿಯ ಮೇಲೆ ಆತನು ನಮಗೆ ಅಧಿಕಾರವನ್ನು ಕೊಟ್ಟಿದ್ದಾನೆ, ಅದನ್ನು ನಾವೇ ಕಾಪಾಡಿಕೊಳ್ಳಬೇಕು ಎಂದು ಒಂದು ಕಡೆಯ ವಾದವಿದೆ. ಪ್ರಯೋಗಾತ್ಮಕವಾಗಿ ಮಾತನಾಡುತ್ತಿದ್ದೇನೆ, ಪ್ರಾಣಿಗಳನ್ನು ರಕ್ಷಿಸಿಕೊಳ್ಳುವುದರ ಕುರಿತಾಗಿ ಮತ್ತು ಮಾಲಿನ್ಯ ವಿಷಯದ ಕುರಿತಾಗಿ ನಾವು ತಪ್ಪದೇ ಜಾಗೃತಿ ತೆಗೆದುಕೊಳ್ಳಬೇಕು. ಯುದ್ಧಗಳಲ್ಲಿ , ಇನ್ನೂ ಅನೇಕವಾದ ವಿಷಯಗಳಲ್ಲಿ ಜನರು ಸಾಯುತ್ತಿದ್ದಾರೆ. ಮನುಷ್ಯ ಜಾತಿಯ ವಿರುದ್ಧವಾಗಿ ಎಷ್ಟೋ ಕೇಡು ನಡೆಯುತ್ತಾಯಿದೆ. ಆದ್ದರಿಂದ, ನಾವು ಮನುಷ್ಯರನ್ನು ರಕ್ಷಿಸುವುದಕ್ಕೆ ಪ್ರಯತ್ನಪಡುತ್ತಿರುವಾಗ, ನಾವು ಯಾಕೆ ಪ್ರಾಣಿಗಳನ್ನು ರಕ್ಷಿಸುವುದಕ್ಕೆ ಸಂಪನ್ಮೂಲಗಳನ್ನು ಉಪಯೋಗಿಸಬಾರದು ಎಂದು ಇನ್ನೊಂದು ಕಡೆ ವಾದವುಂಟು. ಆದ್ದರಿಂದ ಈ

ಚರ್ಚೆಗೆ ಉತ್ತರವೇ ಇಲ್ಲ; ಆದಕಾರಣ, ಮಕ್ಕಳು ತಮ್ಮ ಕುರಿತಾಗಿ ತಾವು ಆಲೋಚನೆ ಮಾಡಿಕೊಳ್ಳುವಂತೆ ಮಾಡುವುದೇ ಉಪಾದ್ಯಾಯರಾಗಿರುವ ನಿಮ್ಮ ಗುರಿ.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 7)



## ಲೂಕರವರ ಪ್ರಯೋಗ (ಪಾಠ 7)

ಲೇಬಲ್ ಹಾಕಿರುವ ಐದು ವಸ್ತುಗಳನ್ನು ಮತ್ತು ಲೇಬಲ್ ಹಾಕದಿರುವ ಐದು ವಸ್ತುಗಳನ್ನು ವಿದ್ಯಾರ್ಥಿಗಳು ಕಂಡುಕೊಳ್ಳಲಿ. ಸಹಜವಾಗಿ ಜನರು ವಸ್ತುಗಳ ಮೇಲೆ ಲೇಬಲ್.ಗಳನ್ನೂ ಹಾಕಿರುತ್ತಾರೆ, ಆದರೆ ದೇವರು ಲೇಬಲ್.ಗಳನ್ನು ಹಾಕಿರುವುದಿಲ್ಲ ಎನ್ನುವುದನ್ನು ಗಮನಿಸಿರಿ. (ಯೂ ಟ್ಯೂಬ್ .ನಲ್ಲಿ ಇನ್ನೂ ವಿವರಗಳು ನೋಡಬಹುದು).

https://www.facebook.com/childrenareimportant/videos/1292083794161334/

# --[ ಕೇಸ್ 8 ]--

## ಸೂಚನೆಗಳು! (ಕ್ಲೂಸ್) (ಪಾಠ 8)

### ಸೂಚನೆ #1 ಅಂಶ (ಪಾಠ 8)

ನೊಂದವರನ್ನು ಸರಿಪಡಿಸುವ ಕೇಸ್

### ಸೂಚನೆ #2 ನಾಟಕ (ಪಾಠ 8)

ಕಥೆ ಹೇಳುವವರು: ಈ ಕಥೆಯು ಕಲ್ಪನೆಯಾಗಿರುತ್ತದೆ, ಆದರೆ ತಪ್ಪು ಮಾದದಿರುವವರನ್ನು ಸಂರಕ್ಷಿಸಲು ಕೆಲವೊಂದು ಹೆಸರುಗಳನ್ನು ಮತ್ತು ಸ್ಥಳಗಳನ್ನು ಮಾರ್ಪಾಟು ಮಾಡಲಾಗಿದೆ.

ಡಾಕ್ಟರ್ : ಹಲೋ ಗಾರ್ಡ್, ನಾನು ಜಾನ್.ನನ್ನು ಪರೀಕ್ಷಿಸಲು ಹಿಂತಿರುಗಿ ಬಂದಿದ್ದೇನೆ.

ಕಾವಲುಗಾರ : ಓ.. ಅವಶ್ಯಕತೆಯಿಲ್ಲ.

ಡಾಕ್ಟರ್ : ನೀವು ಏನು ಮಾತನಾಡುತ್ತಿದ್ದೀರಾ? ನಾನು ಅವನಿಗೆ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಖಂಡಿತವಾಗಿ ಹೇಳಿದ್ದೇನೆ, ಆದರೆ ಅವನು ರಾತ್ರಿಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುವುದಿಲ್ಲವೆಂದು ಅನಿಸುತ್ತಿದೆ. ಆದ್ದರಿಂದ, ನಾನು ಅವನನ್ನು ಪರೀಕ್ಷಿಸಬೇಕೆಂದು ಬಂದಿದ್ದೇನೆ.

ಕಾವಲುಗಾರ : ಒಳ್ಳೇಯದು, "ಬರುವುದರಿಂದ" "ಹೋಗುವ" ಸಮಯದ ಕೆಲಸವು ಮಾರ್ಪಡಿಸಲಾಗಿದೆ.

ಡಾಕ್ಟರ್ : ಅದು ನಿಜವಾಗಿಯೂ ವಿಚಿತ್ರವಾಗಿದೆ. ಯೋಹಾನನು ಸತ್ತುಹೋಗಿದ್ದಾನೋ ಅಥವಾ ಅವನಿಗೆ ಏನಾದರೂ ಒಳ್ಳೇಯದು ಆಯಿತೋ?

ಕಾವಲುಗಾರ : ನನಗೆ ಗೊತ್ತಿಲ್ಲ. ನಿನ್ನೆಯಿಂದ ನನ್ನ ಕಾಗದದಲ್ಲಿ ಆ ಸಮಾಚಾರವು ಇಲ್ಲ, ಬರುವುದಕ್ಕೂ ಹೋಗುವುದಕ್ಕೂ ನಿನಗೆ ಕೊಟ್ಟಿರುವ ಕೆಲಸವೂ ಮಾರ್ಪಾಟು ಮಾಡಲಾಗಿದೆ.

ಡಾಕ್ಟರ್ : ಇದು ವಿಚಿತ್ರವಾಗಿದೆ, ದೊಡ್ಡವರು ಇದನ್ನು ಹಿಂದಕ್ಕೆ ತೆಗೆದುಕೊಂಡು ಬರುವುದಕ್ಕಾಗುವುದಿಲ್ಲವೋ? ನಾನು ಅವರೊಂದಿಗೆ ಮಾತನಾಡುತ್ತೇನೆ.

ಕಾವಲುಗಾರ : ಅವರು ಇದನ್ನು ಹಿಂದಕ್ಕೆ ಬರುವಂತೆ ಮಾಡಿದ್ದಾರೆ, ಆದರೆ ಅವರು ಸಹಾಯಕರಾಗಿರುವುದಿಲ್ಲವೆಂದು ನನಗೆ ಅನಿಸುತ್ತಿದೆ.

ಡಾಕ್ಟರ್ : ಯಾಕೆ? ಸಹಾಯಕ್ಕಾಗಿ ಅವರು ಹೋಗಿರಬಹುದೆಂದು ನಾನು ಅಂದುಕೊಳ್ಳುತ್ತಿದ್ದೇನೆ.

ಕಾವಲುಗಾರ : ಅವರು ಮಾಡಿದ್ದಾರೆ, ಆದರೆ ಅದಾದನಂತರ ಬಾಸ್ ಅಲ್ಲಿಗೆ ಹೋಗಿ, ಅವನಿಗೆ ಬರಬೇಡವೆಂದು ಹೇಳಿದನು. ಏನು ನಡೆದಿದೆಯೆಂದು ನನಗೆ ಗೊತ್ತಿಲ್ಲ, ಆದರೆ ನಿನ್ನೆ ಬಾಸ್ ಹೋದನಂತರ, ಆತನು ನಿನ್ನ ಆದೇಶಗಳನ್ನು ಮಾರ್ಪಡಿಸಿದನು.

ಡಾಕ್ಟರ್ : ಒಳ್ಳೇದು, ಈಗ ನಿಮ್ಮ ಬಾಸ್.ನೊಂದಿಗೆ ನಾನು ಮಾತನಾಡಬಹುದೇ?

ಕಾವಲುಗಾರ : ಇಲ್ಲ, ಅವರು ನಿಮಗೆ "ಹೋಗು" ಎಂದು ಹೇಳಿದಾಗ, ನೀವು ತಿರುಗಿ ಬರಬಾರದು, ಹೌದಾ?

ಡಾಕ್ಟರ್ : ಇಲ್ಲ ನಾನು ಬರುವುದಿಲ್ಲ, ನಿಮ್ಮ ಸಮಯಕ್ಕಾಗಿ ನಿಮಗೆ ವಂದನೆಗಳು.

## 3 ಸೂಚನೆ #3 ವಸ್ತು (ಪಾಠ 8)

ಸೂಚನೆಯಾಗಿ ಈ ಭೌತಿಕ ವಸ್ತುವನ್ನು ನಿಮ್ಮ ತರಗತಿಗೆ ತೆಗೆದುಕೊಂಡು ಬನ್ನಿರಿ : ಔಷಧ


## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 8)

ರೋಮಾ ಸೈನಿಕರ ನಾಟಕ ಪ್ರದರ್ಶನದ ಚಿತ್ರ. ಕೆಂಪು ಗರಿಗಳ ಟೋಪಿಯನ್ನು ಇಟ್ಟುಕೊಂಡಿರುವವರು "ಶತಾಧಿಪತಿಯಾಗಿರಬಹುದು", 100 ಮಂದಿ ಕಾಲಿನ ಬಲ ಇರುವವರ ಮೇಲೆ ಅಧಿಕಾರಿಗಳು. (ರಹಸ್ಯ : ಯೇಸುವಿನೊಂದಿಗೆ ಮಾತನಾಡಿದ ಶತಾಧಿಪತಿಯ ಸೈನಿಕನು ಈ ರೀತಿಯ ವಸ್ತ್ರಧಾರಣೆ ಮಾಡಿಕೊಂಡಿರಬಹುದು.)




## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 8)

ರಹಸ್ಯ : ಖಾಲಿ ಹಾಸಿಗೆ, ತಟ್ಟೆ, ಬಟ್ಟಲು ಮತ್ತು ರೋಗಿಯನ್ನು ಸೂಚಿಸುವ ಥರ್ಮೋಮೀಟರ್, ಜನರು ನಿಂತುಕೊಂಡಿರುವ ಮೆಟ್ಟಿಲುಗಳಿಗೂ  ಮತ್ತು ಮನೆಗೂ ಮಧ್ಯೆ ಇರುವ ದೂರವಿರಬೇಕು. ಯಾಕಂದರೆ ಯೇಸು ಕ್ರಿಸ್ತ ಅವನನ್ನು ದೂರದಲ್ಲಿರುವಾಗಲೇ ಗುಣಪಡಿಸಿದರು.



# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 8)

## ಬೈಬಲ್ ಕಥೆ (ಪಾಠ 8)

ಶತಾಧಿಪತಿಯ ವಿಶ್ವಾಸ

**ಬೈಬಲ್ ವಾಕ್ಯಭಾಗದಿಂದ : ಲೂಕ. 7:1-10**



ಆಳುಗಳ ಗುಂಪು ಯೇಸುವಿನ ಬಳಿಗೆ ಹೋದರು, ಒಬ್ಬ ಆಳು ತಮ್ಮ ಯಜಮಾನನ ಮನೆಯಲ್ಲಿ ರೋಗಿಯಾಗಿದ್ದಾನೆಂದು ತಕ್ಷಣವೇ ತಿಳಿಸಿದರು. ಅವರ ಬಾಸ್ ರೋಮಾ ಶತಾಧಿಪತಿಯ ಸೈನಿಕನು. ಇವನು 100 ಮಂದಿ ಸೈನಿಕರಿಗೆ ಶತಾಧಿಪತಿಯಾಗಿದ್ದನು ಮತ್ತು ತನಗೆ ತುಂಬಾ ಇಷ್ಟವಾಗಿರುವ ಆಳಿಗೆ ರೋಗವು ಸಂಭವಿಸಿದೆ ಮತ್ತು ಅವನು ಸಾವು ಬದುಕುನಲ್ಲಿದ್ದಾನೆ. ಯೇಸು ಶತಾಧಿಪತಿಯ ಮನೆಗೆ ತೆರಳಿದಾಗ, ಅಲ್ಲಿ ಯೇಸು ಇನ್ನೊಂದು ಗುಂಪಿನವರನ್ನು ಎದುರ್ಗೊಂಡರು. ಶತಾಧಿಪತಿಯು ಆ ಗುಂಪಿನವರೊಂದಿಗೆ ಈ ಸಂದೇಶವನ್ನು ಕಳುಹಿಸಿಕೊಟ್ಟಿದ್ದರು, "ನನ್ನ ಮನವಿಗೆ ನೀವು ಸ್ಪಂದಿಸುವಷ್ಟು ದೊಡ್ಡವನು ನಾನಲ್ಲ, ನನ್ನ ಮನೆಯಲ್ಲಿ ನೀವು ಹೆಜ್ಜೆ ಇಡುವುದಕ್ಕೆ ನಾನು ಯೋಗ್ಯನಲ್ಲ. ಆದ್ದರಿಂದಲೇ ನಾನು ನಿಮ್ಮ ಬಳಿಗೆ ಬಂದಿಲ್ಲ. ಆದರೆ ನೀವು ಒಂದು ಮಾತನ್ನು ಹೇಳುವುದಾದರೆ, ನನ್ನ ಆಳು ಗುಣ ಹೊಂದುವನು. ನಾನು ಅಧಿಕಾರದ ಕೆಳಗೆ ಇರುವವನು ಮತ್ತು ಇತರರ ಮೇಲೆಯೂ ನನಗೆ ಅಧಿಕಾರವಿದೆ. ನಾನು ಒಬ್ಬ ಸೈನಿಕನಿಗೆ ಹೋಗು ಅಂದರೆ ಹೋಗುವನು, ಬಾ ಅಂದರೆ ಬರುವನು. ನಾನು ಹೇಳಿದರೂ ಅವರು ಮಾಡುತ್ತಾರೆ" ಯೇಸುವಿಗೆ ಅಧಿಕಾರವಿದೆಯೆಂದು, ಅವರು ಹೇಳುವ ಪ್ರತಿಯೊಂದು ಮಾತು ಕ್ರಿಯಾ ರೂಪದಲ್ಲಿ ಉಂಟಾಗುವುದು ಎಂದು ಶತಾಧಿಪತಿ ಅರ್ಥಮಾಡಿಕೊಂಡಿದ್ದರು. ಈ ಸಂದೇಶವನ್ನು ಕೇಳಿದ ಯೇಸು ಆಶ್ಚರ್ಯಪಟ್ಟು, "ನಾನು ಇಂಥ ದೊಡ್ಡ ನಂಬಿಕೆಯನ್ನು ಇಸ್ರಾಯೇಲ್ ಜನರಲ್ಲಿಯೂ ಕಾಣಲಿಲ್ಲವೆಂದು" ಹೇಳಿದನು. ಆ ಸಂಜೆಯಲ್ಲಿ ಶತಾಧಿಪತಿಯ ಆಳುಗಳು ಮನೆಗೆ ಹಿಂದುರಿಗಿ ಹೋದಾಗ, ರೋಗಿಯಾಗಿರುವ ಮತ್ತು ಸಾಯುವ ಪರಿಸ್ಥಿತಿಯಲ್ಲಿರುವ ಆಳು ಗುಣವಾಗಿರುವದನ್ನು ಕಂಡರು.

## ಸೂಚನೆ #8 ಅನ್ವಯ (ಪಾಠ 8)

ಶತಾಧಿಪತಿಯಂತೆ, ನನ್ನ ಬಳಿಯಿರದ ಜನಗಳ ವಿಷಯವಾಗಿ ಅನೇಕ ಕಾರ್ಯಗಳು ನನ್ನ ವಿಶ್ವಾಸವು ಮಾಡಬಹುದು.

## ಕಂಠಪಾಠ ವಾಕ್ಯ (ಪಾಠ 8)

"ಯೇಸು ಈ ಮಾತನ್ನು ಕೇಳಿ ಅವನ ವಿಷಯದಲ್ಲಿ ಆಶ್ಚರ್ಯಪಟ್ಟು ತನ್ನ ಹಿಂದೆ ಬರುತ್ತಿರುವ ಗುಂಪನ್ನು ಹಿಂತಿರುಗಿ ನೋಡಿ - ನಾನು ಇಂಥ ದೊಡ್ಡ ನಂಬಿಕೆಯನ್ನು ಇಸ್ರಾಯೇಲ್ ಜನರಲ್ಲಿಯೂ ಕಾಣಲಿಲ್ಲವೆಂದು ನಿಮಗೆ ಹೇಳುತ್ತೇನೆ ಅಂದನು." - ಲೂಕ.7:9.

## ಮನೆಗೆಲಸ (ಪಾಠ 8)

ಸ್ನೇಹಿತನಿಗೆ ಅಥವಾ ಬಂಧುಗಳಿಗೆ ಒಂದು ಸಂದೇಶವನ್ನು ಬರೆಯಿರಿ ಮತ್ತು ಅವರು ಹೇಗೆ ಮಾಡುತ್ತಿದ್ದಾರೆಂದು ಕೇಳಿರಿ ಮತ್ತು ಅವರಿಗಾಗಿ ಪ್ರಾರ್ಥನೆ ಮಾಡಿರಿ.

## ದೇವರ ಡಿ.ಎನ್.ಎ. (ಪಾಠ 8)

ಈ ಪಾಠದಿಂದ ನಾವು ದೇವರ ಕುರಿತಾಗಿ ಏನನ್ನು ಕಲಿತುಕೊಂಡಿದ್ದೇವೆ? ದೇವರೇ ಅಂತಿಮ ಅಧಿಕಾರಿ.

# ವಿನೋದ ಸಮಯ (ಪಾಠ 8)

## ಆಟ (ಪಾಠ 8)

ಅವರೆಕಾಯಿ ಚೀಲದ ಆಟಗಳು

ಈ ಆಟಗಳಲ್ಲಿ ಉಪಯೋಗಿಸುವುದಕ್ಕೆ ಉಪಾಧ್ಯಾಯರು ಕೆಲವೊಂದು ಅವರೆಕಾಯಿ ಚೀಲಗಳನ್ನು ತಯಾರಿಸಬಹುದು. ಅವುಗಳನ್ನು ಮಾಡುವುದಕ್ಕೆ, ಎರಡು ಚಿಕ್ಕ ಪ್ಲಾಸ್ಟಿಕ್ ಚೀಲಗಳನ್ನು ತೆಗೆದುಕೊಂಡು (ಒಂದರಲ್ಲಿ ಒಂದನ್ನು ಹಾಕಬೇಕು), ಒಂದು ಬಟ್ಟಲು ಒಣಗಿದ ಅವರೆಕಾಯಿ ಬೀಜಗಳನ್ನಾಗಲಿ ಅಥವಾ ಅಕ್ಕಿಯನ್ನಾಗಲಿ ಚೀಲದಲ್ಲಿ ಹಾಕಿರಿ ಮತ್ತು ಆ ಬೀಜಗಳು ಅಥವಾ ಅಕ್ಕಿ ಹೊರಬರದಂತೆ ಆ ಪ್ಲಾಸ್ಟಿಕ್ ಚೀಲಗಳನ್ನು ಗಂಟುಗಳಾಗಿ ಕಟ್ಟಿ ಹಾಕಿರಿ.

- ವಿದ್ಯಾರ್ಥಿಗಳು ಕಟ್ಟಿ ಹಾಕಿರುವ ಚೀಲಗಳನ್ನು ಚೆನ್ನಾಗಿ ಮೇಲಕ್ಕೆ ಎಸೆದು, ಅದನ್ನು ಮತ್ತೇ ಹಿಡಿದುಕೊಳ್ಳಬೇಕು.
- ವಿದ್ಯಾರ್ಥಿಗಳು ಆ ಕಾಳುಗಳ ಅಥವಾ ಅಕ್ಕಿಯ ಚೀಲವನ್ನು ಇನ್ನೊಬ್ಬ ವಿದ್ಯಾರ್ಥಿ ಹಿಡಿದುಕೊಳ್ಳಲು ಎಸೆಯಬೇಕು, ಇನ್ನೂ ಸ್ವಲ್ಪ ಜಿಗಿದು ಮೇಲಕ್ಕೆ ಎಸೆದು, ಹಿಡಿದುಕೊಳ್ಳಿರಿ, ಆದಾದನಂತರ ಆ ಚೀಲವನ್ನು ಇನ್ನೊಬ್ಬ ವಿದ್ಯಾರ್ಥಿ ಹಿಡಿದುಕೊಳ್ಳುವಂತೆ ಚೆನ್ನಾಗಿ ಎಸೆಯಿರಿ.

ಹಿರಿಯ ವಿದ್ಯಾರ್ಥಿಗಳಿಗಾಗಿ ಇನ್ನೂ ಹೆಚ್ಚಿನ ಆಲೋಚನೆಗಳು

- ಚೀಲವನ್ನು ಮೇಲಕ್ಕೆ ಎಸೆದಾಗ, ಅದು ಕೆಳಕ್ಕೆ ಬೀಳುವದರೊಳಗೆ ವಿದ್ಯಾರ್ಥಿಗಳು ಗಟ್ಟಿಯಾಗಿ ಚಪ್ಪಾಳೆಯನ್ನು ತಟ್ಟುತ್ತಾ, ಅದನ್ನು ಹಿಡಿದುಕೊಳ್ಳಬಹುದು.
- ವಿದ್ಯಾರ್ಥಿಗಳನ್ನು ಆ ಚೀಲವನ್ನು ಒಂದು ಕೈಯಿಂದ ಮೇಲಕ್ಕೆ ಎಸೆದು, ಇನ್ನೊಂದು ಕೈಯನ್ನು ಹಿಂದಕ್ಕೆ ಇಟ್ಟುಕೊಂಡು, ಒಂದೇ ಕೈಯಿಂದ ಆ ಚೀಲವನ್ನು ಹಿಡಿದುಕೊಳ್ಳುವ ಸಾಹಸ ಮಾಡಬಹುದು.

## ಚರ್ಚೆ (ಪಾಠ 8)

(ಹಿರಿಯ ವಿದ್ಯಾರ್ಥಿಗಳಿಗಾಗಿ)

1. ಸ್ವಸ್ಥತೆಯಲ್ಲಿ ನಂಬಿಕೆಯ ಪಾತ್ರವೇನು?

ನಿಮಗೆ ಕಣ್ಣಿಗೆ ಕಾಣದಿದ್ದರೂ, ನೀವು ನಂಬುವುದು ಇದೆಯೆಂದು ನೋಡುವುದೇ ನಂಬಿಕೆ. ಸ್ವಸ್ಥತೆಯಲ್ಲಿ ನಂಬಿಕೆಯ ಪಾತ್ರವನ್ನು ಈ ಉದಾಹರಣೆಗಳಿಂದ ನಾವು ತಿಳಿದುಕೊಳ್ಳಬಹುದು : ನೀನು ಕೇವಲ ಯೇಸುವನ್ನು ಮುಟ್ಟಿದರೆ ಸಾಕು, ನೀನು ಗುಣ ಹೊಂದುವಿಯೆಂದು ಆಕೆ ತಿಳಿದುಕೊಂಡಾಗ ಆಕೆ ಆ ರೀತಿ ಮಾಡಿ ಗುಣವನ್ನು ಪಡೆದಳು. "ನಿನ್ನ ನಂಬಿಕೆಯೇ ನಿನ್ನ ಗುಣಪಡಿಸಿತು" ಎಂದು ಯೇಸು ಆಕೆಗೆ ಹೇಳಿದನು. ಮಾರ್ಕ 2ನೇಯ ಅಧ್ಯಾಯದಲ್ಲಿ ಒಬ್ಬ ಮನುಷ್ಯನ ಸ್ನೇಹಿತರು, ತನಗೆ ವಾಸಿಯಾಗುವುದಕ್ಕೋಸ್ಕರ, ಮೇಲ್ಛಾವಣಿಯಿಂದ ಇಳಿಸಿದರು, ಯೇಸುವು ಆ ರೋಗಿಯ ನಂಬಿಕೆಯನ್ನು ನೋಡಿ, ಆ ಮನುಷ್ಯನನ್ನು ಗುಣಪಡಿಸಿದರೆಂದು ಬೈಬಲ್ ಹೇಳುತ್ತಿದೆ. ಯೇಸು ಕ್ರಿಸ್ತ ದೂರದಲ್ಲಿದ್ದರೂ ಗುಣಪಡಿಸಬಲ್ಲನು ಎಂದು ನಂಬಿರುವ ಶತಾಧಿಪತಿಯು, ಇಡೀ ದೇಶದಲ್ಲೇ ದೊಡ್ಡ ನಂಬಿಕೆಯಿರುವ ವ್ಯಕ್ತಿಯೆಂದು ಲೂಕ 7ನೇ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ. ಮತ್ತಾಯ 15ರಲ್ಲಿ ಒಬ್ಬ ಸ್ತ್ರೀ ತನ್ನ ನಂಬಿಕೆಯನ್ನು ವ್ಯಕ್ತಗೊಳಿಸುವದರಿಂದ ಯೇಸುವಿನ ಮನಸ್ಸನ್ನೇ ಮಾರ್ಪಡಿಸಿದಳು ಮತ್ತು ಆಕೆ ಎದುರುನೋಡುತ್ತಿರುವ ಸ್ವಸ್ಥತೆಯನ್ನು ಪಡೆದುಕೊಂಡಳು. ಆದ್ದರಿಂದ, ಸ್ವಸ್ಥತೆಯನ್ನು ಪಡೆದುಕೊಳ್ಳುವುದರಲ್ಲಿ ನಂಬಿಕೆಯು ತುಂಬಾ ಪ್ರಾಮುಖ್ಯವಾದದ್ದು. ಆದ್ದರಿಂದ ನೀವು ಎದುರುನೋಡುತ್ತಿರುವ ಸ್ವಸ್ಥತೆಯನ್ನು ನೀವು ಪಡೆದುಕೊಳ್ಳಲಿಲ್ಲವೆಂದರೆ, ಬಹುಶಃ ನಿಮಗೆ ನಂಬಿಕೆ

ಕಡಿಮೆ ಇದ್ದಿರಬಹುದು. ನಾವು ಯಾಕೆ ಸ್ವಸ್ಥತೆಯನ್ನು ಪಡೆದುಕೊಳ್ಳುತ್ತಿಲ್ಲವೆನ್ನುವುದು ಅನೇಕಸಲ ನಮಗೆ ಸರಿಯಾಗಿ ಗೊತ್ತಾಗದಿರಬಹುದು, ಆದರೆ ನಂಬಿಕೆ ಎನ್ನುವುದು ತುಂಬಾ ಪ್ರಾಮುಖ್ಯವೆಂದು ನಾವು ತಿಳಿದುಕೊಂಡಿರಬೇಕು.

2. ನಿಮ್ಮ ನಂಬಿಕೆಯ ಮಟ್ಟವನ್ನು ಸ್ಕೂಲ್ ಗ್ರೇಡ್.ನಲ್ಲಿ ಕೊಟ್ಟರೆ, ನಿಮ್ಮ ಗ್ರೇಡ್ ಏನಾಗಿರಬಹುದು?





ವಿವಿಧವಾದ ಗ್ರೇಡ್.ಗಳ ಕುರಿತಾಗಿ ಚರ್ಚೆ ಮಾಡಿರಿ; ಉತ್ತೀರ್ಣವಾಗುವುದಂದರೇನು ಮತ್ತು ಅನುತ್ತೀರ್ಣವಾಗುವುದಂದರೇನು? ಎನ್ನುವದರ ಕುರಿತಾಗಿ ಮಾತನಾಡಿರಿ (ಗ್ರೇಡಿಂಗ್ ಕುರಿತಾಗಿ ನಿಮ್ಮ ದೇಶದ ಪದ್ಧತಿಯನ್ನೇ ಅನುಸರಿಸಿರಿ, ಕೆಲವೊಂದು ಜನರು 10 ಅಂಕಿಗಳು ಇಟ್ಟುಕೊಳ್ಳುತ್ತಾರೆ, ಕೆಲವೊಂದು ಜನರು ಆಂಗ್ಲ ಅಕ್ಷರಗಳು ಎ, ಬಿ, ಸಿ, ಡಿ... ಎಂದು ಇಟ್ಟುಕೊಳ್ಳುತ್ತಾರೆ) ನಂಬಿಕೆಯಲ್ಲಿ ಕೇವಲ ಉತ್ತೀರ್ಣವಾದರೆ ಹೇಗಿರುತ್ತದೆ, ಮತ್ತು ನಂಬಿಕೆಯಲ್ಲಿ 10ಕ್ಕೆ 10 ಅಂಕಿಗಳು ಅಥವಾ ಎ ಬಂದರೆ ಹೇಗಿರುತ್ತದೆ? ಉದಾಹರಣೆಗೆ : ನಂಬಿಕೆ ಇಲ್ಲದಿರುವುದು ಅನುತ್ತೀರ್ಣ (ಫೇಲ್), ನಂಬಿಕೆಯಲ್ಲಿದ್ದು ವಿಧೇಯತೆ ತೋರಿಸುವುದು ಉತ್ತೀರ್ಣ (ಪಾಸ್). ನೀವು ವಿಧೇಯತೆಯನ್ನು ತೋರಿಸುತ್ತಾ, ನೀವು ದೂರು ಹೇಳುತ್ತಿದ್ದರೆ, ನಿಮಗೆ 10ಕ್ಕೆ 8 ಅಂಕಿಗಳು ಅಥವಾ ಬಿ ಗ್ರೇಡ್.ಯಾಗಲಿ ಬಂದಿರಬೇಕು. ಯಾಕಂದರೆ ಅದು ನೀವು ದೂರುಗಳಿಂದ ಮಾತ್ರವೇ.

3. ಕ್ರೈಸ್ತರಾಗದಿರುವವರು ಎಂಥಹ ನಂಬಿಕೆಯನ್ನು ಹೊಂದಿರುತ್ತಾರೆ?

ನಿಮಗೆ ಕಣ್ಣಿಗೆ ಕಾಣದಿದ್ದರೂ, ನೀವು ನಂಬುವುದು ಇದೆಯೆಂದು ನೋಡುವುದೇ ನಂಬಿಕೆ. ಆದ್ದರಿಂದ ಕ್ರೈಸ್ತರಾಗದಿರುವವರಿಗೆ ಕೂಡ ನಂಬಿಕೆ ಇದೆ. ನಾವು ಕುರ್ಚೆಯಲ್ಲಿ ಕೂತುಕೊಂಡಾಗ, ನಮ್ಮ ಕೆಳಗಿರುವ ಕುರ್ಚೆ ಮುರಿಯುವುದಿಲ್ಲವೆಂದು ನಮಗೆ ನಂಬಿಕೆಯುಂಟು. ಅಭಿವೃದ್ಧಿಯಲ್ಲಿ ನಮ್ಮ ನಂಬಿಕೆಯು ಏನೆಂಬುವುದು ಕಾಣಿಸಿಕೊಳ್ಳುತ್ತದೆ, ಅಥವಾ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ರಾಜಕಾರಣಿಗೆ ನಿರೀಕ್ಷಿಸುವಂತೆ ಮಾಡುತ್ತದೆ. ನಿಜವಲ್ಲದ ದೇವರುಗಳಲ್ಲಿ ಜನರು ನಂಬಿಕೆಯನ್ನಿಟ್ಟಿದ್ದಾರೆ, ಮತ್ತು ಜನರಲ್ಲಿಡುವ ನಂಬಿಕೆ ಕೆಲವೊಂದುಸಲ ಅವರನ್ನು ವಿಫಲಗೊಳಿಸುತ್ತದೆ. ಪ್ರಪಂಚದಲ್ಲಿ ನಂಬಿಕೆಯು ಎಲ್ಲಾ ಕಡೆಯಲ್ಲಿದೆ, ಮತ್ತು ಪ್ರತಿಯೊಬ್ಬರಿಗೆ ಎಲ್ಲೋ ಒಂದರಲ್ಲಿ ನಂಬಿಕೆ ಎನ್ನುವುದು ಇದೆ.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 8)






## ಲೂಕರವರ ಪ್ರಯೋಗ (ಪಾಠ 8)

ನಿಮ್ಮ ವಿದ್ಯಾರ್ಥಿಗಳು ಬಲೂನ್.ಗಳನ್ನು ಊದುವಂತೆ ಹೇಳಿರಿ ಮತ್ತು ಆ ಬಲೂನ್.ಗಳನ್ನು ಸ್ಟಾಟಿಕ್ ವಿದ್ಯುತ್ತನ್ನು ಸೃಷ್ಟಿಸಲು ತಮ್ಮ ತಲೆಗಳ ಮೇಲೆ ತಿಕ್ಕಿಕೊಳ್ಳುವಂತೆ ಹೇಳಿರಿ. ಗೋಡೆಯ ಮೇಲೆ ಬಲೂನ್ ಇಡಿರಿ, ಯಾವ ಸಹಾಯವಿಲ್ಲದೆ ಆ ಗೋಡೆಯ ಮೇಲೆ ಬಲೂನ್ ಹೇಗಿರುತ್ತದೋ ನೋಡಿರಿ, ಯಾಕಂದರೆ ಸ್ಟಾಟಿಕ್ ವಿದ್ಯುತ್.ನಿಂದ ಏನು ನಡೆಯುತ್ತದೋ ನೋಡಿರಿ! (ಇನ್ನೂ ಹೆಚ್ಚಿನ ವಿವರಗಳಿಗೆ ಯೂ ಟ್ಯೂಬ್.ನ್ನು ನೋಡಿರಿ)

https://www.facebook.com/childrenareimportant/videos/1293034897399557/

# --[ ಕೇಸ್ ೯ ]--

## ಸೂಚನೆಗಳು! (ಕ್ಲೂಸ್) (ಪಾಠ ೯)

### 1 ಸೂಚನೆ #1 ಅಂಶ (ಪಾಠ ೯)

ಕುರುಡುತನದ ರಹಸ್ಯ ದಾಳಿಯ ಕೇಸ್

### 2 ಸೂಚನೆ #2 ನಾಟಕ (ಪಾಠ ೯)

ಕಥೆ ಹೇಳುವವರು: ಈ ಕಥೆಯು ಕಲ್ಪನೆಯಾಗಿರುತ್ತದೆ, ಆದರೆ ತಪ್ಪು ಮಾಡದಿರುವವರನ್ನು ಸಂರಕ್ಷಿಸಲು ಕೆಲವೊಂದು ಹೆಸರುಗಳನ್ನು ಮತ್ತು ಸ್ಥಳಗಳನ್ನು ಮಾರ್ಪಾಟು ಮಾಡಲಾಗಿದೆ.

ಪರೀಕ್ಷಾಧಿಕಾರಿ : [ಬಾಗಿಲನ್ನು ತಟ್ಟುತ್ತಾ] ಗುಡ್ ಮಾರ್ನಿಂಗ್ (ಶುಭೋದಯ), ನಾವು ಆರೋಗ್ಯ ಇಲಾಖೆಯಿಂದ ಬಂದಿದ್ದೇವೆ, ನಿಮ್ಮನ್ನು ಕೆಲವು ಪ್ರಶ್ನೆಗಳನ್ನು ಕೇಳಬೇಕು.

ಯೂದಾ : [ಬಾಗಿಲಿನ ಹಿಂದೆ ಇದ್ದು] ಹೌದು ಪರೀಕ್ಷಾಧಿಕಾರಿ?

ಪರೀಕ್ಷಾಧಿಕಾರಿ : ಆರೋಗ್ಯ ಜಾಗೃತಿ ನಡೆಸಿದ ವರದಿಯು ನಮ್ಮ ಹತ್ತಿರವಿದೆ. ಇಲ್ಲಿ ನೀವು ವೈದ್ಯಕೀಯ ಅಭ್ಯಾಸವನ್ನು ಮಾಡುತ್ತಿದ್ದೀಯ?

ಯೂದಾ : ಇಲ್ಲ ಸಾರ್.

ಪರೀಕ್ಷಾಧಿಕಾರಿ : ಪ್ರಯಾಣಿಕನೊಂದಿಗೆ ನಿಮಗಿರುವ ಸಂಬಂಧವನ್ನು ನೀವು ಹೇಗೆ ವಿವರಿಸುವಿರಿ?

ಯೂದಾ : ತನ್ನ ಗುಂಪಿನೊಂದಿಗೆ ಅವನು ನನ್ನ ಹತ್ತಿರಕ್ಕೆ ಬಂದಿದ್ದನು.

ಪರೀಕ್ಷಾಧಿಕಾರಿ : ಏನಾದರೂ ನೀವು ಪ್ರತ್ಯೇಕವಾದ ಆಹಾರ ಪದಾರ್ಥಗಳನ್ನು ನೀವು ಅವರಿಗೆ ಕೊಟ್ಟಿದ್ದೀರಾ?

ಯೂದಾ : ತನ್ನ ಗುಂಪಿನವರು ತುಂಬಾ ಹೆಚ್ಚಾಗಿ ತಿಂದರು, ಆದರೆ ಆ ಪ್ರಯಾಣಿಕನು ತಿಂದನೋ ಇಲ್ಲವೋ ಎಂದು ನಾನು ಅಷ್ಟು ಚೆನ್ನಾಗಿ ನೋಡಲಿಲ್ಲ. ಅವನು ಹೆಚ್ಚಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದನು.

ಪರೀಕ್ಷಾಧಿಕಾರಿ : ನೀವು ಅವನನ್ನು ಚೆನ್ನಾಗಿ ನೋಡಿದ್ದೀರಾ?

ಯೂದಾ : ಹೇಳಬೇಕಂದರೆ ನೋಡಿಲ್ಲ, ನಾನು ಅವರಿಗೆ ಸಹಾಯವನ್ನು ಮಾಡುತ್ತಿದ್ದೆ , ನಾನು ವೈದ್ಯನನ್ನು ಕರೆಯುತ್ತೇನೆಂದು ಅವನಿಗೆ ಹೇಳಿದೆ, ಆದರೆ ಅವನು ನನ್ನನ್ನು ಕರೆಯುವುದಕ್ಕೆ ಬಿಡಲಿಲ್ಲ. ಅವನು ಬೇರೆಯವರಿಗಾಗಿ ನೋಡುತ್ತಿದ್ದನು.

ಪರೀಕ್ಷಾಧಿಕಾರಿ : ಆದರೆ, ಅವರಿಗಾಗಿ ತನ್ನ ಗುಂಪಿನಲ್ಲಿರುವವರನ್ನು ಕಳುಹಿಸಿದ್ದನೋ?

ಯೂದಾ : ಇಲ್ಲ, ನಿಜವಾಗಿ ಹೇಳಬೇಕೆಂದರೆ, ಅವರು ಯಾರೊಂದಿಗೂ ಮಾತನಾಡಲಿಲ್ಲ. ಅವನು ಮೆಲ್ಲಕ್ಕೆ ನೋಡಿ, ಪ್ರಾರ್ಥನೆ ಮಾಡುತ್ತಾ, ಎದುರುನೋಡುತ್ತಿದ್ದನು.

ಪರೀಕ್ಷಾಧಿಕಾರಿ : ಆದನಂತರ ಏನು ನಡೆಯಿತು?

ಯೂದಾ : ಕೆಲವು ದಿನಗಳಾದ ಮೇಲೆ, ಬೇರೆ ಯಾರೋ ಒಬ್ಬರು ಬಂದು, ತನ್ನನ್ನು ಮುಟ್ಟಿ, ಆತನಿಗೆ ಕೆಲವು ಸಂಗತಿಗಳನ್ನು ಹೇಳಿದನು, ಅವನನ್ನು ಶುದ್ಧಿಪಡಿಸಿ, ಕಳುಹಿಸಿದನು.

ಪರೀಕ್ಷಾಧಿಕಾರಿ : ಅವರು ವೈದ್ಯರೋ? ಅವರು ಏನಾದರು ಔಷಧಕ್ಕಾಗಿ ಬರೆದುಕೊಟ್ಟಿದ್ದರೋ? ಏನಾದರೂ ಉಪಕರಣಗಳನ್ನು ಉಪಯೋಗಿಸಿದ್ದರೋ?

ಯೂದಾ : ಇಲ್ಲ, ಇಲ್ಲ, ಇಲ್ಲ .

ಪರೀಕ್ಷಾಧಿಕಾರಿ : ಅವರು ಸ್ನೇಹಿತರೋ?

ಯೂದಾ : ಅವರು ಶತ್ರುಗಳಾಗಿರಬಹುದು, ಆದರೆ ಅವರು ಸ್ನೇಹಿತರನ್ನಾಗಿ ನಟಿಸಿದ್ದರು. ನಾನು ನಿಜವಾಗಿ ಆ ಸಂಘಟನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದಕ್ಕಾಗುವುದಿಲ್ಲ.

ಪರೀಕ್ಷಾಧಿಕಾರಿ : ಸರಿ, ನಿಮ್ಮ ಸಹಕಾರಕ್ಕಾಗಿ ವಂದನೆಗಳು. ಇನ್ನೂ ನನ್ನ ಬಳಿ ಇರುವ ಅನೇಕವಾದ ಪ್ರಶ್ನೆಗಳಿಗೆ, ನಾನು ಎಲ್ಲಿ ಉತ್ತರಗಳನ್ನು ಪಡೆದುಕೊಳ್ಳಬಹುದು?

ಯೂದಾ : ನೆಟ್ಟಗಿರುವ ಬೀದಿಯ ಮೇಲಿರುವ ನನ್ನ ಮನೆಯಲ್ಲಿಯೇ ನಾನು ಇರುತ್ತೇನೆ.


## 3 ಸೂಚನೆ #3 ನಾಟಕ (ಪಾಠ 9)

ಸೂಚನೆಯಾಗಿ ಈ ಭೌತಿಕ ವಸ್ತುವನ್ನು ನಿಮ್ಮ ತರಗತಿಗೆ ತೆಗೆದುಕೊಂಡು ಬನ್ನಿರಿ : ಸನ್.ಗ್ಲಾಸಸ್




## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 9)

ಕೋಲಾಹಲದ ನಗರವಾಗಿರುವ ತಾರ್ಸದ ಚಿತ್ರಣ, ಇವತ್ತು ಸುಮಾರು 2,೦೦,೦೦೦ ಜನರು ಈ ಪಟ್ಟಣದಲ್ಲಿ ನಿವಾಸವಾಗಿದ್ದಾರೆ, ಇದು ಮಧ್ಯದರಾ ಸಮುದ್ರದಿಂದ ಕೆಲವು ಮೇಲುಗಳ ದೂರದಲ್ಲಿ ಇನ್ನೂ ಇದೆ. (ರಹಸ್ಯ : ತಾರ್ಸ ಎನ್ನುವ ನಗರದಿಂದಲೇ ಅಪೊಸ್ತಲನಾದ ಪೌಲನು ಬಂದಿದ್ದಾನೆ.)




## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 9)

ರಹಸ್ಯ : ಆ ಬೀದಿಯನ್ನು "ನೇರ" ಎಂದು ಕರೆಯುತ್ತಾರೆ, ಯಾಕಂದರೆ ಯೇಸು ಕ್ರಿಸ್ತ ಸೌಲನನ್ನು ಕಳುಹಿಸಿದ್ದಾನೆ, ಮತ್ತು ಸೌಲಿಗೆ ಬೆತ್ತದ ಏಟು, ಯಾಕಂದರೆ ಅವರು ಕರ್ತನಿಗೆ ವಿಧೇಯನಾದಾಗ ಕುರುಡನಾಗಿದ್ದನು.

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ ೨)

## ಬೈಬಲ್ ಕಥೆ (ಪಾಠ ೨)

**ಪೌಲನ ಮಾನಸಾಂತರ**

**ಬೈಬಲ್ ವಾಕ್ಯಭಾಗ : ಅಪೊ.9:1-19**



ಪೌಲನು ಯೇಸುವಿನ ಹಿಂಬಾಲಕನಾಗುವುದಕ್ಕೆ ಮುಂಚಿತ ಅವರು ಕೆಡುಕನಾಗಿದ್ದನು, ಕ್ರಿಸ್ತನನ್ನು ಹಿಂಬಾಲಿಸುವವರನ್ನು ಹಿಂಸೆಗೆ ಗುರಿ ಮಾಡುತ್ತಿದ್ದನು. ಅವರು ಪಾಪಿಗಳಲ್ಲಿ ಪ್ರಧಾನ ಪಾಪಿಯಾಗಿದ್ದೇನೆಂದು ಹೇಳಿಕೊಂಡಿದ್ದರು! ಕ್ರೈಸ್ತರಾಗಿರುವ ಪ್ರತಿಯೊಬ್ಬರನ್ನು ಅಂದರೆ ಯೇಸುವನ್ನು ಪ್ರೀತಿಸುವ ಪ್ರತಿಯೊಬ್ಬರನ್ನು ಸೆರೆಗೆ ಹಾಕಲು ಪೌಲನಿಗೆ ಅನುಮತಿ ಹೊಂದಿದ್ದನು. ಒಂದು ದಿನ ಕ್ರೈಸ್ತರನ್ನು ಸೆರೆಗೆ ಹಾಕಲು ದಮಸ್ಕ ಎನ್ನುವ ನಗರಕ್ಕೆ ತೆರಳಿದ್ದನು. ದಮಸ್ಕದ ಹತ್ತಿರಕ್ಕೆ ಬರಲು ಥಕ್ಕನೆ ಆಕಾಶದೊಳಗಿಂದ ಒಂದು ಬೆಳಕು ಅವನ ಸುತ್ತಲು ಮಿಂಚಿತು. ಪೌಲನು ನೆಲದ ಮೇಲೆ ಬಿದ್ದನು. "ಸೌಲನೇ, ಸೌಲನೇ, ನನ್ನನ್ನು ಯಾಕೆ ಹಿಂಸೆ ಪಡಿಸುತ್ತೀ?" ಎನ್ನುವ ಸ್ವರವನ್ನು ಪೌಲನು ಕೇಳಿಸಿಕೊಂಡಿದ್ದನು. ಆಗ ಪೌಲನು, ಕೇಳಿಸಿಕೊಂಡಿರುವ ಸ್ವರವು ಯಾರದೆಂದು ತಿಳಿಯ ಬಯಸಿದ್ದನು, ಅವರು ತಕ್ಷಣವೇ, "ನೀನು ಹಿಂಸೆಪಡಿಸುವ ಯೇಸುವೇ ನಾನು, ನೀನೆದ್ದು ಊರೊಳಕ್ಕೆ ಹೋಗು..." ಎನ್ನುವ ಉತ್ತರವನ್ನು ಕೇಳಿದನು.
ಪೌಲನು ಎದ್ದು ನಿಂತುಕೊಂಡಾಗ, ತನಗೆ ಕಣ್ಣುಗಳು ಕಾಣುತ್ತಿಲ್ಲವೆಂದು ಅರಿತನು! ಯೇಸು ಅವನನ್ನು ಕುರುಡುನನ್ನಾಗಿ ಮಾಡಿದನು! ಪೌಲನಿಗೆ ಕೆಲವರು ಸ್ನೇಹಿತರಿದ್ದರು, ಅವರೇ ಪೌಲನು ಊರಿನೊಳಗೆ ಬರುವುದಕ್ಕೆ ಸಹಾಯ ಮಾಡಿದರು. ಅವರು ಆ ಊರಿನಲ್ಲಿದ್ದ ಮೂರು ದಿನಗಳು ಏನೂ ತಿನ್ನದೇ, ಕುಡಿಯದೇ, ಉಪವಾಸವಿದ್ದು ತನ್ನ ಸಮಯವೆಲ್ಲಾ ಪ್ರಾರ್ಥನೆಯಲ್ಲಿ ಕಳೆದಿದ್ದರು.
ಪೌಲನು ಪ್ರಾರ್ಥನೆ ಮಾಡುತ್ತಿರುವಾಗ, ದೇವರು ತನ್ನ ಶಿಷ್ಯನಾಗಿರುವ ಅನನೀಯನ ಜೊತೆಗೆ ಮಾತನಾಡಿದನು. ಪೌಲನ ಕುರುಡುತನವನ್ನು ಗುಣಪಡಿಸಲು ಪ್ರಾರ್ಥನೆ ಮಾಡುವುದಕ್ಕೆ ದೇವರು ಅನನೀಯನನ್ನು ಕಳುಹಿಸಿದನು. ಅನನೀಯ ಬೆರಗಾದನು; ಯಾಕಂದರೆ ಪೌಲನು ಸೌಲನಾಗಿರುವಾಗ ಕ್ರೈಸ್ತರ ವಿಷಯದಲ್ಲಿ ಎಷ್ಟು ಕೆಡುಕನಾಗಿದ್ದನೋ ತನಗೆ ಚೆನ್ನಾಗಿ ಗೊತ್ತಿತ್ತು ಮತ್ತು ಆ ಸಂಘಟನೆಗಳ ಕುರಿತಾಗಿ ದೇವರಿಗೆ ತಿಳಿಸಿದನು. ಆಗ ದೇವರು, "ನೀನು ಹೋಗು; ಆ ಮನುಷ್ಯನು ಅನ್ಯಜನರಿಗೂ ಅರಸುಗಳಿಗೂ ಇಸ್ರಾಯೇಲ್ಯರಿಗೂ ನನ್ನ ಹೆಸರನ್ನು ತಿಳಿಸುವುದಕ್ಕಾಗಿ ನಾನು ಆರಿಸಿಕೊಂಡ ಸಾಧನವಾಗಿದ್ದಾನೆ" ಎಂದು ಅನನೀಯನಿಗೆ ಉತ್ತರ ಕೊಟ್ಟನು. ಆ ಮಾತುಗಳಿಗೆ ವಿಧೇಯನಾಗಿ, ಪೌಲನಿಗೆ ಪ್ರಾರ್ಥನೆ ಮಾಡುವುದಕ್ಕೆ ಅನನೀಯನು ಹೊರಟುಹೋದನು. ಅನನೀಯನು ಪೌಲನ ಮೇಲೆ ಕೈಗಳನ್ನಿಟ್ಟು ಪ್ರಾರ್ಥಿಸುತ್ತಿರುವಾಗ, ಪೌಲನು ಪವಿತ್ರಾತ್ಮದಿಂದ ತುಂಬಿಸಲ್ಪಟ್ಟನು, ಮತ್ತು ತನ್ನ ಕಣ್ಣುಗಳಿಗಿರುವ ಕುರುಡುತನವು ವಾಸಿಯಾಯಿತು. ಪೌಲನ ಹೃದಯವು ಮಾನಸಾಂತರ ಹೊಂದಿ, ತಕ್ಷಣವೇ ಹೋಗಿ ದೀಕ್ಷಸ್ನಾನವನ್ನು ಪಡೆದುಕೊಂಡನು.

## ಅನ್ವಯ (ಪಾಠ ೨)

ನಾನು ನನ್ನ ಶತ್ರುಗಳನ್ನೂ ಪ್ರೀತಿಸುತ್ತೇನೆ.

## ಕಂಠಪಾಠ ವಾಕ್ಯ (ಪಾಠ ೨)

ಆದರೆ ನಾನು ನಿಮಗೆ ಹೇಳುವುದೇನಂದರೆ - ನಿಮ್ಮ ವೈರಿಗಳನ್ನು (ಶತ್ರುಗಳನ್ನು) ಪ್ರೀತಿಸಿರಿ; ನಿಮ್ಮನ್ನು ಹಿಂಸೆ ಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ." - ಮತ್ತಾಯ.5:44.

### ಮನೆಗೆಲಸ (ಪಾಠ ೯)

ನಿಮ್ಮನ್ನು ನೋಯಿಸಿರುವವರಿಗೆ ಒಂದು ಉಡುಗೊರೆಯನ್ನು ಕೊಂಡುಕೊಂಡು, ಅವರಿಗೆ ಬಹುಮಾನವಾಗಿ ಕೊಡಿರಿ.

### ದೇವರ ಡಿ.ಎನ್.ಎ. (ಪಾಠ ೯)




ಈ ಪಾಠದಿಂದ ದೇವರ ಕುರಿತಾಗಿ ನಾವು ಏನನ್ನು ಕಲಿತುಕೊಂಡಿದ್ದೇವೆ? ದೇವರು ಜನರಿಗೆ ತನ್ನ ಅಸ್ತಿತ್ವವನ್ನು ತೋರಿಸಿಕೊಳ್ಳಬೇಕೆಂದು ಬಯಸುತ್ತಿದ್ದಾರೆ.



## ವಿನೋದ ಸಮಯ (ಪಾಠ ೯)

### ಆಟ (ಪಾಠ ೯)

ಸೌಲನಂಥಿರುವ ಒಬ್ಬ ಕುರುಡ

ಉಪಾಧ್ಯಾಯರು ಒಬ್ಬ ವಿದ್ಯಾರ್ಥಿಗೆ ಬಟ್ಟೆಯಿಂದ ಕಣ್ಣುಗಳು ಕಾಣದಂತೆ ಕಟ್ಟಬೇಕು. ಆ ವಿದ್ಯಾರ್ಥಿಯು ಇನ್ನೊಬ್ಬ ವಿದ್ಯಾರ್ಥಿಯನ್ನು ಮುಟ್ಟಬೇಕು. ಒಂದುವೇಳೆ ಮುಟ್ಟಿದರೆ, ಮುಟ್ಟಲ್ಪಟ್ಟ ವಿದ್ಯಾರ್ಥಿ ಶಬ್ದ ಮಾಡಬೇಕು. ಆಗ ಮುಟ್ಟಿದ ವಿದ್ಯಾರ್ಥಿ ತಾನು ಯಾರನ್ನು ಮುಟ್ಟಿದ್ದೇನೆಂದು ಕಿರಿಚಿದ ಸ್ವರವನ್ನು ಕೇಳುವುದರ ಮೂಲಕ ಕಂಡುಹಿಡಿಯಬೇಕು. ಇನ್ನೂ ಮುಟ್ಟಲ್ಪಡದೇ ಇರುವ ವಿದ್ಯಾರ್ಥಿಗಳು ಆ ಕೊಠಡಿಯಲ್ಲಿ ಮೆಲ್ಲಕೆ, ಶಬ್ದ ಮಾಡದಂತೆ ತಿರುಗುತ್ತಾ ಇರಬೇಕು.

ಪ್ರಾಥಮಿಕ ಮಕ್ಕಳು ಎರಡು ಗುಂಪುಗಳಾಗಬೇಕು, ಪ್ರತಿಯೊಂದು ಗುಂಪಿಗೆ ಒಂದು ಕಣ್ಣು ಮುಚ್ಚುವ ಬಟ್ಟೆಯನ್ನು ಕೊಡಬೇಕು. ಅವರಲ್ಲಿ ಒಬ್ಬ ವಿದ್ಯಾರ್ಥಿ ಆ ಬಟ್ಟೆಯಿಂದ ಕಣ್ಣು ಮುಚ್ಚಿಕೊಳ್ಳಬೇಕು, ಇತರರು ಸಹಾಯ ಮಾಡುತ್ತಾರೆ.. ತರಗತಿಯ ಮುಂದೆ ಉಪಾಧ್ಯಾಯರು ಇರಿಸಿರುವ ಸುಲಭವಾದ ಅಡಚಣೆಯೊಂದಿಗೆ ಆ ಮಗುವನ್ನು ಮುಂದಕ್ಕೆ ನಡೆಸಿರಿ.

### ಚರ್ಚೆ (ಪಾಠ ೯)

(ಹಿರಿಯ ವಿದ್ಯಾರ್ಥಿಗಳಿಗಾಗಿ)



1. ಯಾವಾಗ ಜನರು ತಮ್ಮನ್ನು ತೀರ್ಪು ಮಾಡಿಕೊಳ್ಳುತ್ತಾರೆ, ಅದು ಹೇಗೆ ಕಾಣಿಸಿಕೊಳ್ಳುತ್ತದೆ?

ಕೆಲವೊಂದುಸಲ ತೀರ್ಪು ಮಾಡುವುದು ಈ ರೀತಿ ಕಾಣಿಸಿಕೊಳ್ಳುವುದು : ಗುಣುಗುಟ್ಟು ಮಾಡುವುದು, ಕಿಸಿ ಕಿಸಿ ನಗುಗಳು, ಒಬ್ಬರು ಇರುವಾಗ ಅವರಿಂದ ದೂರ ಹೋಗುವುದು, ಅಥವಾ ಒಬ್ಬರೊಂದಿಗೆ ಮಾತನಾಡಲು ಇಷ್ಟಪಡದಿರುವುದು. ಉಪಾಧ್ಯಾಯರಾಗಿ ನಿಮ್ಮ ಗುರಿಯೇನಂದರೆ, ಪೌಲನು ಕ್ರೈಸ್ತರನ್ನು ಹಿಂಸಿಸುವ ಕೆಲಸದಲ್ಲಿದ್ದಾಗ, ಬೇರೆಯವರು ತನ್ನನ್ನು ಎಷ್ಟುಮಂದಿ ತೀರ್ಪು ಮಾಡಬೇಕೆಂದಿರಬಹುದು ಎನ್ನುವುದರ ಕುರಿತಾಗಿ ಮತ್ತು ಆತನ ಸೇವೆಯನ್ನು ಮಾಡುವುದಕ್ಕೆ ಕೆಲಸಕ್ಕೆ ಬಾರದವರನ್ನು ಯಾವರೀತಿ ಆತನು ತನ್ನ ಸೇವೆಗಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ ಎನ್ನುವುದರ ಕುರಿತಾಗಿಯೂ ಮಾತನಾಡಿಸುವುದೇ.

2. ಕ್ರೈಸ್ತರಾಗಿರುವ ನಮಗೆ ವೈರಿಗಳು (ಶತ್ರುಗಳು) ಇರಬಾರದು, ಆದ್ದರಿಂದ ನಾನು ಪ್ರೀತಿಸುವುದಕ್ಕೆ ನನ್ನ ಶತ್ರು (ವೈರಿ) ಯಾರು?


ಕ್ರೈಸ್ತರಾಗದವರ ಪದ್ಧತಿಯಲ್ಲಿಯೇ, ಕ್ರೈಸ್ತರು ವಿವಾದಗಳಲ್ಲಿರುತ್ತಾರೆನ್ನುವ ವಿಷಯದ ಕುರಿತಾಗಿ ನಿಮ್ಮ ವಿದ್ಯಾರ್ಥಿಗಳೊಂದಿಗೆ ಮಾತನಾಡಲು ಯತ್ನಿಸಿರಿ ಮತ್ತು ಕೆಲವೊಂದುಸಲ ನಾವು ಕೂಡ ಇರುತ್ತೇವೆ. ನಮಗೆ ನಾವೇ ಸುಳ್ಳು ಹೇಳಿಕೊಳ್ಳಬಾರದು, ನಮ್ಮೆಲ್ಲರಿಗೆ ಶತ್ರುಗಳು (ವೈರಿಗಳು) ಇದ್ದಾರೆಂದು ನಾವೆಲ್ಲರು ಒಪ್ಪಿಕೊಳ್ಳಲೇಬೇಕು. ಆ ಶತ್ರುಗಳು, ನಾವು ಅವರೊಂದಿಗಿರುವುದಕ್ಕೆ ಇಷ್ಟಪಡದಿರುವ


ಜನರಾಗಿರಬಹುದು, ನಮ್ಮನ್ನು ನೋಯಿಸಿರುವವರಾಗಿರಬಹುದು, ಅಥವಾ ನಮ್ಮಿಂದ ಏನಾದರೊಂದನ್ನು ಅಥವಾ ಯಾರಾದರೊಬ್ಬರನ್ನು ಕದ್ದುಕೊಂಡಿರುವವರಾಗಿರಬಹುದು. ಅಂಥಾ ಜನಗಳಿಗೆ ನಾವು ಪ್ರೀತಿಯನ್ನು ತೋರಿಸಬೇಕು.

3. ದೇವರು ನಿಮ್ಮೊಂದಿಗೆ ಮಾತನಾಡುವುದಕ್ಕೆ ಪ್ರಯತ್ನಿಸುತ್ತಿರುವಾಗ, ನೀವು ಕೇಳಿಸಿಕೊಳ್ಳದಿದ್ದರೆ, ನಿಮ್ಮ ಗಮನವನ್ನು ಸೆಳೆಯುವುದಕ್ಕೆ ಆತನು ಏನು ಮಾಡಬೇಕಾಗುತ್ತದೆ?

ನಮ್ಮ ಗಮನವನ್ನು ಸೆಳೆಯಲು ದೇವರು ಕೆಲವೊಂದುಸಲ ತೀವ್ರವಾದ ಕಾರ್ಯಗಳನ್ನು ಮಾಡಬೇಕಾಗಿರುತ್ತದೆ, ಅವುಗಳಲ್ಲಿ ಕೆಲವು ಹೀಗಿರಬಹುದು - ಪ್ರಿಯನನ್ನು ಕಳೆದುಕೊಳ್ಳುವುದು, ನಿಮ್ಮನ್ನು ಬೇರೆ ನಗರಕ್ಕೆ ಅಥವಾ ರಾಷ್ಟ್ರಕ್ಕೆ ನಡೆಸುವುದು, ಪರೀಕ್ಷೆಯಲ್ಲಿ ಅತೀ ಕಡಿಮೆ ಗ್ರೇಡ್ ಬರುವಂತೆ ಮಾಡುವುದು, ನಿಮ್ಮ ಸ್ನೇಹಿತನನ್ನು ಇನ್ನೊಂದು ತರಗತಿಗೆ ಕಳುಹಿಸುವುದು, ಅಥವಾ ಕಾಲುದಾರಿಯಲ್ಲಿ ಅಳುವವರನ್ನು ಹಿಡಿದುಕೊಳ್ಳುವುದು. ದೇವರು ನಮ್ಮ ಗಮನವನ್ನು ಸೆಳೆಯಲು ಯಾವುದೇ ಕಾರ್ಯವನ್ನಾಗಲಿ ಮಾಡಬಹುದು, ಯಾಕಂದರೆ ನಮ್ಮ ಭೌತಿಕ ಕ್ಷೇಮಕ್ಕಿಂತ ಅತ್ಮೀಯಕವಾದ ಕ್ಷೇಮವನ್ನೇ ಅವರು ಹೆಚ್ಚಾಗಿ ಬಯಸುತ್ತಾರೆ.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ ೯)



## ಲೂಕಸ್ ರವರ ಪ್ರಯೋಗ (ಪಾಠ ೯)

ಎರಡು ಪ್ಲಾಸ್ಟಿಕ್ ಕಪ್ಪುಗಳನ್ನು, ಎರಡು ಕಾಗದ ಕ್ಲಿಪ್.ಗಳನ್ನೂ ಮತ್ತು ಒಂದು ಸ್ಟ್ರಿಂಗ್ ತುಂಡನ್ನು ಉಪಯೋಗಿಸಿ "ಸೆಲ್ ಫೋನ್.ಗಳು" ತಯಾರಿಸಲು ವಿದ್ಯಾರ್ಥಿಗಳಿಗೆ ಹೇಳಿರಿ. ಎರಡು ಕಪ್ಪುಗಳ ಮಧ್ಯೆದಲ್ಲಿ ತುಂಬಾ ಉದ್ದವಾದ ಸ್ಟ್ರಿಂಗ್.ನ್ನು ಜೋಡಿಸಿರಿ. ಅದನ್ನು ಒಂದು ಕೊಠಡಿ ತೆಗೆದುಕೊಂಡು ಹೋಗಿ, ಆ ಕಪ್ಪುಗಳ ಮುಖಾಂತರ ಮಾತನಾಡಿರಿ. (ಇನ್ನೂ ಹೆಚ್ಚಿನ ವಿವರಗಳಿಗಾಗಿ ಯೂ ಟ್ಯೂಬ್.ನಲ್ಲಿ ನೋಡಿರಿ)
https://www.facebook.com/childrenareimportant/videos/1292377594131954/

# --[ ಕೇಸ್ 10 ]--

## ಸೂಚನೆಗಳು! (ಕ್ಲೂಸ್) (ಪಾಠ 10)

### 1 ಸೂಚನೆ #1 ಅಂಶ (ಪಾಠ 10)

ಗೊತ್ತಿಲ್ಲದ ಚಾಡಿಕೋರನ ಕೇಸ್

### 2 ಸೂಚನೆ #2 ನಾಟಕ (ಪಾಠ 10)

ಕಥೆ ಹೇಳುವವರು: ಈ ಕಥೆಯು ಕಲ್ಪನೆಯಾಗಿರುತ್ತದೆ, ಆದರೆ ತಪ್ಪು ಮಾದದಿರುವವರನ್ನು ಸಂರಕ್ಷಿಸಲು ಕೆಲವೊಂದು ಹೆಸರುಗಳನ್ನು ಮತ್ತು ಸ್ಥಳಗಳನ್ನು ಮಾರ್ಪಾಟು ಮಾಡಲಾಗಿದೆ.

ನಿರ್ವಾಹಕ : ತುರ್ತು ಸೇವೆಗಳು, ನಿಮ್ಮ ಅತ್ಯಗತ್ಯ ವಿಷಯವೇನು?

ಫೀನೆಹಾಸ : ನಂಬಲರ್ಹ ಮರಣ ಬೆದರಿಕೆಯು ನನಗೆ ಬಂತು.

ನಿರ್ವಾಹಕ : ಇದು ಯಾವಾಗ ನಡೆಯಿತು?

ಫೀನೆಹಾಸ : ಕಳೆದ ರಾತ್ರಿ. ನನ್ನ ಸಹೋದರನಿಂದ ನನ್ನ ತಂದೆಯ ಬಳಿಗೆ ಬಂದಿತ್ತು.

ನಿರ್ವಾಹಕ : ಹೌದಾ, ನನಗೆ ಅರ್ಥವಾಯಿತು. ನಿಮ್ಮ ಸಹೋದರನೆ ನಿನ್ನನ್ನು ಕೊಲ್ಲಬೇಕೆಂದು ಬೆದರಿಸಿರಬಹುದು?

ಫೀನೆಹಾಸ : ಇದ್ದರೇ ಇರಬಹುದು.

ನಿರ್ವಾಹಕ : ನಿಮ್ಮ ಸಹೋದರನೇಯಾಗಿರಬಹುದೆಂದು ನಾನು ಹೇಳುತ್ತಿಲ್ಲ?

ಫೀನೆಹಾಸ : ಅಂದರೆ ಬೇರೆ ರೀತಿಯಾಗಿ ನಾನು ಹೇಳುತ್ತಿದ್ದೇನೆ, ಅವನು ನನ್ನನ್ನು ಖಂಡಿತವಾಗಿ ಕೊಲ್ಲಬೇಕೆಂದು ಆಲೋಚನೆ ಮಾಡುವುದಿಲ್ಲ.

ನಿರ್ವಾಹಕ : ಸರಿ, ಈಗ ನಿಮ್ಮನ್ನು ನಿಮ್ಮ ಸಹೋದರನು ಕೊಲ್ಲುವುದಿಲ್ಲವೆಂದು ಹೇಳುತ್ತಿದ್ದೀರಿ?

ಫೀನೆಹಾಸ : ಹೌದು, ಅದೇ ಸರಿ.

ನಿರ್ವಾಹಕ : ಇಲ್ಲಿ ನೀವು ವರದಿ ಕೊಡುವುದಕ್ಕೆ ಅದು ಅಷ್ಟು ಅತ್ಯಗತ್ಯವಾದ ವಿಷಯವಲ್ಲವೆಂದು ನನಗೆ ಅನಿಸುತ್ತಿದೆ ಸಾರ್.

ಫೀನೆಹಾಸ : ಹೌದು, ದೇವರು ನನ್ನನ್ನು ತೆಗೆದುಕೊಳ್ಳುವನು ಮತ್ತು ಅದೇ ದಿನದಂದು ನನ್ನ ಸಹೋದರನು ಸಾಯುತ್ತಾನೆಂದು ಅವನು ಹೇಳುತ್ತಿದ್ದಾನೆ.

ನಿರ್ವಾಹಕ : ಅದೇ ದಿನದಂದು ದೇವರು ನಿಮ್ಮಿಬ್ಬರನ್ನು ಸಾಯಿಸುತ್ತಾರಾ?

ಫೀನೆಹಾಸ : ಅದೇ ಸರಿಯಾದದ್ದು.

ನಿರ್ವಾಹಕ : ಒಂದು ಕ್ಷಣ ನಿಲ್ಲಿ, ನಾನು ನಿನ್ನ ಸ್ವರವನ್ನು ಗುರುತಿಸಿದ್ದೇನೆ. ನೀವು ಯಾವಾಗಲೂ ತಿನ್ನುವ ಯಾಜಕರೋ?

ಫೀನೆಹಾಸ :  ಇಲ್ಲ, ನೀವು ನನ್ನ ಸಹೋದರನ ವಿಷಯವಾಗಿ ಆಲೋಚನೆ ಮಾಡುತ್ತಿದ್ದೀರಿ. ನನಗೆ ಪಕ್ಕೆಲುಬುಗಳೆಂದರೆ ಇಷ್ಟ.

ನಿರ್ವಾಹಕ : ನೋಡಿ, ಕಠಿಣತ್ವ ಕುರಿತಾಗಿ ನಾನು ಹೇಳುತ್ತಿಲ್ಲ, ಆದರೆ ಅವರು ತಪ್ಪು ಮಾಡಿದ್ದಾರೆಂದು ನಾನು ಎಲ್ಲಿ ಕೇಳಲಿಲ್ಲ. ಅದೆಲ್ಲ ಪಕ್ಕಿಕ್ಕಿಟ್ಟರೆ, ಕರ್ತನಿಗೆ ವಿರುದ್ಧವಾಗಿ ನೀವು ಪಾಪ ಮಾಡಿದರೆ, ನಿಮಗೆ ಯಾರು ಸಹಾಯ ಮಾಡುತ್ತಾರೆ?

ಫೀನೆಹಾಸ : ಹೂ... ಅದೇ ಕಟುತ್ವ. ಆದ್ದರಿಂದ, ನೀವು ಸಿಬ್ಬಂದಿಯನ್ನು ಕಳುಹಿಸುತ್ತೀರೋ?

ನಿರ್ವಾಹಕ ; ಅಯ್ಯೊ, ನನ್ನನ್ನು ಕ್ಷಮಿಸಿ, ನಿಮಗೆ ಸಹಾಯ ಮಾಡುವುದಕ್ಕೆ ಏನೂ ಇಲ್ಲ. ನಿಮಗೆ ಸಹಾಯ ಮಾಡುವುದಕ್ಕೆ ಬೇರೆ ಏನಾದರೂ ಮಾರ್ಗವಿದೆಯೆಂದು ನಿಮ್ಮ ತಂದೆಯೊಂದಿಗೆ ಮಾತನಾಡುವುದಕ್ಕೆ ಪ್ರಯತ್ನಮಾಡಿರಿ.

ಫೀನೆಹಾಸ : ಒಳ್ಳೇಯದು, ನಿಮಗೆ ವಂದನೆಗಳು.

## ಸೂಚನೆ #3 ವಸ್ತು (ಪಾಠ 10)

ಸೂಚನೆಯಾಗಿ ಈ ಭೌತಿಕ ವಸ್ತುವನ್ನು ನಿಮ್ಮ ತರಗತಿಗೆ ತೆಗೆದುಕೊಂಡು ಬನ್ನಿರಿ : ಕಿವಿ ಕಡ್ಡಿಗಳು


## ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 10)




ಏಲೀ ಈತಾಮಾರ್ ಸಾಲಿನಲ್ಲಿ ಇದ್ದವನು, ಆರೋನನ ಮಗ ಮತ್ತು ಶೀಲೋನಲ್ಲಿ ಹತ್ತು ಆಜ್ಞೆಗಳನ್ನು ಒಳಗೊಂಡಿರುವ ಒಡಂಬಡಿಕೆಯ ಮಂಜೂಷವಿದ್ದಾಗ ಇಸ್ರಾಯೇಲ್ ಪ್ರಧಾನ ಯಾಜಕನಾಗಿಯು ಮತ್ತು ನ್ಯಾಯಾಧಿಕಾರಿಯಾಗಿ ಸೇವೆ ಮಾಡಿದನು.  (ರಹಸ್ಯ : ಬೈಬಲ್ ಕಥೆಯಿಂದ ಏಲೀ ಇದ್ದಂತೆ, ಸಮೂವೇಲನ ಕಾಲದಲ್ಲಿ ಪ್ರಧಾನ ಯಾಜಕನ ವಸ್ತ್ರಧಾರಣೆ ಹೀಗಿತ್ತು, )

## ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 10)

ರಹಸ್ಯ : ಯೆಹೋವನ ಮಂದಿರದಲ್ಲಿ : ದೀಪ ಸ್ತಂಭ, ರೊಟ್ಟಿ ಮೇಜು, ಧೂಪದ ವೇದಿಕೆ, ತೆರೆ, ಮತ್ತು ಮಂಜೂಷ. ನೆಲದ ಮೇಲೆ ಸಮೂವೇಲನ ಮಲಗಿರುವದರಿಂದ ಅಲ್ಲಿ ಹೊದಿಕೆ ಮತ್ತು ತಲೆದಿಂಬುಗಳಿದ್ದವು. - 1 ಸಮೂ.3:3.



ಕೇಸ್ ಪರಿಷ್ಕರಿಸಲಾಗಿದೆ ಕೇಸ್ ಪರಿಷ್ಕರಿಸಲಾಗಿದೆ

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 10)

## ಬೈಬಲ್ ಕಥೆ (ಪಾಠ 10)

**ದೇವರಿಗೆ ಸಮೂವೇಲನು ವಿಧೇಯನಾಗಿದ್ದನು**

**ಬೈಬಲ್ ವಾಕ್ಯಭಾಗದಿಂದ : 1 ಸಮೂ.3:1-18**



ಸಮೂವೇಲನು ಒಬ್ಬ ಪ್ರತ್ಯೇಕವಾದ ಹುಡುಗನಾಗಿದ್ದನು; ದೇವರು ಇವರನ್ನು ತನ್ನ ಕೆಲಸಕ್ಕಾಗಿ ಆರಿಸಿಕೊಂಡಿದ್ದನು. ಎಲೀ ಯಾಜಕನಾಗಿದ್ದಾಗ ಗುಡಾರದಲ್ಲಿದ್ದು ಬೆಳೆದಿದ್ದನು. ಸಮೂವೇಲನು ಎಲೀಯವರಿಗೆ ನಂಬಿಗಸ್ತನಾಗಿದ್ದನು. ಸಮೂವೇಲನು ಕರ್ತನಿಗೆ ವಿಧೇಯತೆಯನ್ನು ತೋರಿಸುವುದರಲ್ಲಿ ಚೆನ್ನಾಗಿದ್ದನು. ಈ ಸಮಯಗಳಲ್ಲಿ, ದೇವರು ತನ್ನ ಜನರೊಂದಿಗೆ ಹೆಚ್ಚಾಗಿ ಮಾತನಾಡುತ್ತಿರಲಿಲ್ಲ ಮತ್ತು ಸಮೂವೇಲನು ಎಂದಿಗೂ ದೇವರ ಸ್ವರವನ್ನು ಕೇಳಿಸಿಕೊಂಡಿರಲಿಲ್ಲ. ಆದ್ದರಿಂದ, ಒಂದು ರಾತ್ರಿ ಸಮಯದಲ್ಲಿ, ದೇವರು ಸಮೂವೇಲನನ್ನು ಕರೆದರು, ಆಗ ಎಲೀಯವರೇ ಕರೆದಿರಬಹುದೆಂದು ಸಮೂವೇಲನು ತಿಳಿದು, ಎಲೀಯನ ಬಳಿಗೆ ಓಡಿ ಹೋದನು. ಸಮೂವೇಲನನ್ನು ನಾನು ಕರೆದಿಲ್ಲವೆಂದು ಎಲೀ ಉತ್ತರಿಸಿದನು. ಆಗ ಸಮೂವೇಲನು ತಿರುಗಿ ಹಾಸಿಗೆ ಮೇಲೆ ಮಲಗಿದನು. ಮತ್ತೇ ಸಮೂವೇಲನು ಮಲಗಿದಾಗ, ತನ್ನ ಹೆಸರನ್ನು ಮತ್ತೇ ಯಾರೋ ಕರೆಯುತ್ತಿದ್ದಾರೆಂದು ತಿಳಿದು, ಮತ್ತೊಮ್ಮೆ ಎಲೀಯನ ಬಳಿಗೆ ಹೋದನು. ಆಗ ನಾನು ಕರೆದಿಲ್ಲವೆಂದು ಎಲೀ ಉತ್ತರಕೊಟ್ಟನು. ಮತ್ತೇ ತಿರುಗಿ ಹೋಗಿ ಹಾಸಿಗೆಯ ಮೇಲೆ ಮಲಗಿದನು. ತಕ್ಷಣವೇ ಮತ್ತೊಮ್ಮೆ ತನ್ನನ್ನು ಕರೆಯುತ್ತಿರುವುದನ್ನು ಕೇಳಿ, ಮತ್ತೇ ಎಲೀಯನ ಬಳಿಗೆ ಬಂದನು. ಆದರೆ ಇವಾಗ ಎಲೀಯನು ಕೊಟ್ಟಿರುವ ಉತ್ತರವು ವ್ಯತ್ಯಾಸವಾಗಿತ್ತು. ದೇವರೇ ನಿನ್ನನ್ನು ಕರೆಯುತ್ತಿರಬಹುದು, ಇನ್ನೊಂದುಬಾರಿ ಆ ಸ್ವರವು ಕೇಳಿಸಿಕೊಂಡರೆ, "ಯೆಹೋವನೇ ಅಪ್ಪಣೆಯಾಗಲಿ, ನಿನ್ನ ದಾಸನು ಕಾದಿದ್ದಾನೆ..." ಎಂದು ದೇವರಿಗೆ ಉತ್ತರ ಕೊಡಬೇಕೆಂದು ಎಲೀ ಸಮೂವೇಲನಿಗೆ ತಿಳಿಸಿಕೊಟ್ಟನು. ಸಮೂವೇಲನು ತಿರುಗಿ ಹಾಸಿಗೆಯ ಮೇಲೆ ಮಲಗಿದಾಗ, ಮತ್ತೊಮ್ಮೆ ತನ್ನ ಹೆಸರಿಟ್ಟು ಕರೆಯುತ್ತಿರುವ ಸ್ವರವನ್ನು ಕೇಳಿಸಿಕೊಂಡನು. ತಕ್ಷಣವೇ ಹಾಸಿಗೆಯ ಮೇಲೆ ಕುಳಿತುಕೊಂಡು, "ಕರ್ತನೇ ಮಾತನಾಡು, ನಿನ್ನ ದಾಸನು ಕೇಳುತ್ತಿದ್ದಾನೆ" ಎಂದು ಹೇಳಿದನು. ಕೆಲವೊಂದು ವಿಷಯಗಳ ಕುರಿತಾಗಿ ದೇವರ ಸಮೂವೇಲನೊಂದಿಗೆ ಹಂಚಿಕೊಂಡನು. ಆವುಗಳಲ್ಲಿ ಒಂದಾನೊಂದು ವಿಷಯವೇನಂದರೆ, ಎಲೀಯ ಇಬ್ಬರ ಮಕ್ಕಳು ಹೇಗೆ ವಿನಾಶವಾಗುತ್ತಾರೆಂದು ದೇವರು ಸಮೂವೇಲನೊಂದಿಗೆ ಹಂಚಿಕೊಂಡನು. ದೇವರು ಸಮೂವೇಲನೊಂದಿಗೆ ಮಾತನಾಡಿದನು ಮತ್ತು ಈ ಸಮಯದಲ್ಲಿ ಸಮೂವೇಲನು ಕೇಳಿಸಿಕೊಳ್ಳುತ್ತಿದ್ದನು.

## ಅನ್ವಯ (ಪಾಠ 10)

ನಾನು ಕೇಳುವುದಕ್ಕೆ ದೇವರಿಗೆ ವಿಧೇಯತೆಯನ್ನು ತೋರಿಸಿದಾಗ, ಆತನು ನನ್ನೊಂದಿಗೆ ಮಾತನಾಡುವರು.

## ಕಂಠಪಾಠ ವಾಕ್ಯ (ಪಾಠ 10)

"...ಕುರಿಗಳು ಅವನ ಸ್ವರಕ್ಕೆ ಕಿವಿಗೊಡುತ್ತವೆ. ಅವನು ಸ್ವಂತ ಕುರಿಗಳನ್ನು ಹೆಸರು ಹೇಳಿ ಕರೆದು ಹೊರಗೆ ಬಿಡುತ್ತಾನೆ." - ಯೋಹಾನ.10:3,4.

## ಮನೆಗೆಲಸ (ಪಾಠ 10)

ಈ ವಾರದಲ್ಲಿ ಸಮೂವೇಲನ ಹಾಗೆ ದೇವರ ಸ್ವರವನ್ನು ಕೇಳಿಸಿಕೊಂಡ ಸೇವಕರನ್ನು ಪರಿಚಯ ಮಾಡಿಕೊಂಡು, ಅವರೊಂದಿಗೆ ಮುಖಾಮುಖಿಯಾಗಿ ಮಾತನಾಡಿರಿ. "ದೇವರು ನಿಮ್ಮೊಂದಿಗೆ ಎಂದಾದರು ಮಾತನಾಡಿದ್ದಾರೋ? ದೇವರು ಹೇಗೆ ನಿಮ್ಮೊಂದಿಗೆ

ಮಾತನಾಡಿದ್ದಾರೆ? ಆ ಸ್ವರವು ಅಥವಾ ಆ ಮಾತುಗಳು ದೇವರದೇ ಎಂದು ನೀವು ಹೇಗೆ ತಿಳಿದುಕೊಂಡಿದ್ದೀರಿ?" ಎಂದು ಅನೇಕ ಪ್ರಶ್ನೆಗಳು ಕೇಳಿರಿ.

### ದೇವರ ಡಿ. ಏನ್.ಎ. (ಪಾಠ 10)




ಈ ಪಾಠದಿಂದ ನಾವು ದೇವರ ಕುರಿತಾಗಿ ಏನು ಕಲಿತುಕೊಂಡಿದ್ದೇವೆ? ದೇವರು ತನ್ನ ಜನರೊಂದಿಗೆ ಮಾತನಾಡಬೇಕೆಂದು ಬಯಸುತ್ತಿದ್ದಾರೆ.



## ವಿನೋದ ಸಮಯ (ಪಾಠ 10)

### ಆಟ (ಪಾಠ 10)

ಆಟಗಳನ್ನು ಕೇಳುವುದು

ನೀವು ಚೆನ್ನಾಗಿ ಕೇಳುವವರೋ ಎಂದು ಉಪಾಧ್ಯಾಯರು ತಮ್ಮ ತರಗತಿಯನ್ನು ಕೇಳುವುದರ ಮುಖಾಂತರ ಆರಂಭಿಸುತ್ತಾರೆ. ಚೆನ್ನಾಗಿ ಕೇಳದ ವಿದ್ಯಾರ್ಥಿಗಳನ್ನು ಹಿಡಿದುಕೊಳ್ಳುವುದಕ್ಕೆ ಈ ಕೆಳಗೆ ಕೊಟ್ಟಿರುವ ವಸ್ತುಗಳನ್ನು ಉಪಯೋಗಿಸಿರಿ:

- ನೀವು 3 ಹಣ್ಣುಗಳಿಂದ 2 ಹಣ್ಣುಗಳನ್ನು ತೆಗೆದುಕೊಂಡರೆ ನಿಮ್ಮ ಹತ್ತಿರ ಎಷ್ಟಿರುತ್ತವೆ? (1 ಹಣ್ಣು ಮಾತ್ರವಲ್ಲ, 2 ಇರುತ್ತವೆ.... ಯಾಕಂದರೆ ಅವು ನಿನ್ನ ಬಳಿಯಲ್ಲಿಯೇ ಅವೆ.)
- ಜಿಗಿಯುತ್ತಾ ನಾನು ಹೇಳಿದ್ದನ್ನು 5 ಸಲ ನೀವು ತಿರುಗಿ ಹೇಳಿರಿ : ಹಾಪ್, ಹಾಪ್, ಹಾಪ್, ಹಾಪ್, ಹಾಪ್. ಹಸಿರು ಟ್ರಾಫಿಕ್ ಲೈಟ್ ಹತ್ತಿರ ನೀವೇನು ಮಾಡುವಿರಿ? ("ಹೋಗುತ್ತೇವೆ" ಎನ್ನುವುದು ಉತ್ತರ, "ನಿಲ್ಲುತ್ತೇವೆ" ಎನ್ನುವುದು ಉತ್ತರವಲ್ಲ)
- ಚಪ್ಪಾಳೆ ಹೊಡೆಯುತ್ತಿರುವಂತೆ, ಮಳೆ ಬರುತ್ತಿರುವಂತೆ ಮಾಡಲು ಸೀಡಿಯನ್ನು ಉಪಯೋಗಿಸಿರಿ. (ಅಥವಾ ಆನ್.ಲೈನ್.ನಲ್ಲಿ ಸೌಂಡ್.ಗಳನ್ನೂ ತೆಗೆದುಕೊಂಡು ನಿಮ್ಮ ಮೊಬೈಲ್.ನಲ್ಲಿ ಹಾಕಿಕೊಳ್ಳಿರಿ.) ಈಗ ವಿದ್ಯಾರ್ಥಿಗಳು ಕಣ್ಣುಗಳನ್ನು ಮುಚ್ಚಿಕೊಂಡು, ಆ ಶಬ್ದಗಳನ್ನು ಕೇಳಬೇಕು, ಒಂದು ವೇಳೆ ಆ ಶಬ್ದವು ಏನೆಂದು ಗುರುತಿಸುವುದಾದರೆ, ಅವರು ತಮ್ಮ ಕೈಗಳನ್ನು ಮೇಲಕ್ಕೆ ಎತ್ತಿ ತೋರಿಸಬೇಕು.  ಹಾಗೆಯೇ, ನಿಮ್ಮ ಮೊಬೈಲ್ ಮೂಲಕ ಶಬ್ದಗಳನ್ನು ಕೇಳಿಸುತ್ತಾ ಇರ್ರಿ, ಒಂದುಸಲ ನಿಲ್ಲಿಸಿ, ನೀವು ಯಾರು ಎಂದು ಮಕ್ಕಳನ್ನು ಕೇಳಿರಿ.
- ನಾಲ್ಕು ಮಂದಿ ವಿದ್ಯಾರ್ಥಿಗಳು ಗುಂಪು ಆಗುವಂತೆ ಹೇಳಿರಿ, ಪ್ರತಿ ವಿದ್ಯಾರ್ಥಿಗೆ 1,2,3,4 ಎಂದು ಸಂಖ್ಯೆಯನ್ನು ಕೊಡಿರಿ. ಒಂದು ಕುರ್ಚಿಯ ಮೇಲೆಯಾಗಲಿ ಅಥವಾ ಮೇಜಿನ ಮೇಲೆಯಾಗಲಿ ನಾಲ್ಕು ವಸ್ತುಗಳನ್ನು ಇಡಿರಿ (ನಾಣ್ಯ, ಪೆನ್ಸಿಲ್, ಕಲ್ಲು, ಕಾಗದ ಅಥವಾ ಬಟ್ಟೆ). ವಿದ್ಯಾರ್ಥಿಗಳು ಓದುವಂತೆ ಕೆಳಗೆ ಕೆಲವು ಸೂಚನೆಗಳನ್ನು ಬರೆಯಿರಿ. ಉದಾಹರಣೆಗೆ : "ಸಂಖ್ಯೆ 2, ಕಾಗದವನ್ನು ತೆಗೆದುಕೋ." "ಸಂಖ್ಯೆ 1 ನಾಣ್ಯವನ್ನು ತೆಗೆದು ಸಂಖ್ಯೆ 4ಕ್ಕೆ ಕೊಡು" "ಸಂಖ್ಯೆ 3, ಸಂಖ್ಯೆ 1ಕ್ಕೆ ಪೆನ್ಸಿಲ್ ಕೊಡಬೇಡ." ಮಕ್ಕಳು ಅಲ್ಲಿರುವ ಸೂಚನೆಗಳನ್ನು ಚೆನ್ನಾಗಿ ಅನುಸರಿಸಬೇಕು. ಕೊನೆಗೆ, ಯಾರ ಹತ್ತಿರ ಯಾವ ವಸ್ತುವಿರುತ್ತದೆ ನೋಡಿರಿ. ವಿಭಿನ್ನ ವಸ್ತುಗಳನ್ನು ಉಪಯೋಗಿಸಿ, ಬೇರೆ ಬೇರೆ ಸೂಚನೆಗಳನ್ನು ಬರೆಯಬಹುದು. (ಉದಾ: ಕೊಡು, ಕೈ, ಮುಂದಕ್ಕೆ ಹೋಗು, ತೆಗೆದುಕೋ, ಕೆಳಗಿಡು, ಮಾರು...ಇನ್ನೂ ಇತ್ಯಾದಿ).

### ಚರ್ಚೆ (ಪಾಠ 10)

(ಹಿರಿಯ ವಿದ್ಯಾರ್ಥಿಗಳಿಗಾಗಿ)

1. ದೇವರು ನಿಮ್ಮೊಂದಿಗೆ ಮಾತನಾಡಿದ್ದಾರೆಂದು ಅಥವಾ ನಿಮ್ಮ ಹೊಟ್ಟೆಯಲ್ಲಿ ಏನಾದರೂ ಇದ್ದು, ನೀವು ಊಟ ಮಾಡಿದ್ದೀರೆಂದು ಹೇಗೆ ಹೇಳುವಿರಿ?



ದೇವರಿಂದ ಹೇಗೆ ಕೇಳಬೇಕೋ ಪ್ರತಿಯೊಬ್ಬ ಕ್ರೈಸ್ತನು ತಿಳಿದುಕೊಳ್ಳಬೇಕು. ಮೊಟ್ಟ ಮೊದಲನೇಯದಾಗಿ, ನೀವು ಬೈಬಲ್.ನಿಂದ ಏನನ್ನು ಕೇಳುತ್ತಿದ್ದೀರೋ ಅದನ್ನು ನಿಶ್ಚಯಪಡಿಸಿಕೊಳ್ಳಿರಿ, ಅದು ದೇವರು ಮಾಡಿದ ಕಾರ್ಯದೊಂದಿಗೆ ಅಥವಾ ವಾಕ್ಯಭಾಗದಲ್ಲಿ ಹೇಳಲ್ಪಟ್ಟಿರುವ ವಿಷಯದೊಂದಿಗೆ  ವಿರುದ್ಧವಾಗದಂತೆ ನೋಡಿಕೊಳ್ಳಿರಿ. ಎರಡನೇಯದಾಗಿ, ನಡೆಯುತ್ತಿರುವ ವಿಷಯಗಳನ್ನು ನಿಮ್ಮ ಹಕ್ಕುಗಳೊಂದಿಗೆ ನಿಶ್ಚಯಿಸಿಕೊಳ್ಳಬಹುದು; ತಂದೆತಾಯಿಗಳು, ಸಭಾಪಾಲಕರು ಅಥವಾ ಉಪಾಧ್ಯಾಯರು. ಮೂರನೇಯದಾಗಿ, ಇದು ಸರಿಯೋ ತಪ್ಪೋ ಎನ್ನುವುದನ್ನು ನಿಶ್ಚಯಿಸಿಕೊಳ್ಳಲು, ನಿಮ್ಮಲ್ಲಿ ನೀವೇ ಪರೀಕ್ಷೆ ಮಾಡಿಕೊಳ್ಳಬಹುದು.


2. ದೆವ್ವಗಳು ನಿಜವಾಗಿ ಇದ್ದಾವೋ?


ಸಮೂವೇಲನೊಂದಿಗೆ ದೆವ್ವ ಮಾತಾಡಲಿಲ್ಲ, ದೇವರೇ ಮಾತನಾಡಿದ್ದಾರೆ, ಆದರೆ ಈ ಕಥೆಯು ದೆವ್ವಗಳ ಕುರಿತಾದ ಯೋಚನೆಯನ್ನು ತೆಗೆದುಕೊಂಡು ಬರುತ್ತವೆ. ಈಗ ಭೂಮಿಯ ಮೇಲೆ ದೆವ್ವಗಳು ಮತ್ತು ದೂತರು ಇವೆಯೆಂದು ಬೈಬಲ್ ಸ್ಪಷ್ಟವಾಗಿ ನಮಗೆ ತಿಳಿಸುತ್ತಿದೆ. ನಾವು ನೋಡಲಾರದ ಆತ್ಮೀಯ ಕಾರ್ಯಗಳು ನಡೆಯುತ್ತಿವೆ. ದೆವ್ವಗಳಂತೆ ಮನೆಯಲ್ಲಿಯು ಅಥವಾ ಬೇರೆ ಸ್ಥಳದಲ್ಲಿ ಸತ್ತವರು ನೇಣುಗಂಬ ಹಾಕಿಕೊಳ್ಳುವರೆಂದು ವಾಕ್ಯದಲ್ಲಿ ಎಲ್ಲೂ ಇಲ್ಲ. ಆದ್ದರಿಂದ, ಅನೇಕರು ತುಂಬಾ ಹೆಚ್ಚಾಗಿ ದೆವ್ವಗಳು ಇದ್ದಾವೆಂದು ನಂಬುತ್ತಾರೆ. ಇದು ಬಹುಶಃ ಅವರ ಊಹೆಯಾಗಿರಬಹುದು ಅಥವಾ ಅವರಲ್ಲಿ ದೆವ್ವನೇ ಇರಬಹುದು. ದೆವ್ವಗಳನ್ನು ಗದರಿಸುವುದಕ್ಕೆ ನಮಗೆ ದೇವರು ಅಧಿಕಾರವನ್ನು ಕೊಟ್ಟಿದ್ದಾರೆ. ಆದ್ದರಿಂದ ನಮ್ಮಲ್ಲಿರುವ ಪ್ರತಿಯೊಂದು ಭಯದ ಆಲೋಚನೆಯನ್ನು ಸೆರೆಹಿಡಿಯಬೇಕು. ಆದ್ದರಿಂದ ಕ್ರೈಸ್ತರಾಗಿರುವ ನಾವು "ದೆವ್ವಗಳ" ಕುರಿತಾಗಿ ಭಯಪಡುವ ಅವಶ್ಯಕತೆಯಿಲ್ಲ.  ನಮ್ಮ ಸುತ್ತಮುತ್ತ ಆ ಆಲೋಚನೆಗಳನ್ನು ಇರದಂತೆ, ಯೋಚಿಸದಂತೆ ನಾವು ನಮ್ಮ ಮನಸ್ಸಿಗಳಿಗಾದರೂ ಹೇಳಬೇಕು ಅಥವಾ ದೆವ್ವಗಳನ್ನು ಗದರಿಸಬೇಕು ಮತ್ತು ಬರಲಾರದಂಥ ಸ್ಥಳಕ್ಕೆ ಬಂದು ಆಟವಾಡುವುದನ್ನು ನಿಲ್ಲಿಸಬೇಕೆಂದು ಅವುಗಳಿಗೆ ಹೇಳಬೇಕು.


3. ನಾನು ಯಾರ ಸ್ವರವನ್ನು ಕೇಳಬೇಕು?

ನೀವು ಒಬ್ಬರನ್ನು ಇಷ್ಟಪಡುವವರೆಗೂ ಅಥವಾ ಅವರು ಸಾಧಿಸಿದ್ದನ್ನು ನೀವು ಸಾಧಿಸಬೇಕೆಂದು ಬಯಸುವರೆಗೂ ನೀವು ಯಾರ ಸಲಹೆಯನ್ನು ಅನುಸರಿಸಬೇಡಿರಿ. ನೀವು ಸರಿಯಾದದ್ದನ್ನೇ ಮಾಡಬೇಕೆಂದು ಬಯಸುತ್ತಿದ್ದೀರಾ? ಯಾರ ಸಲಹೆಯನ್ನಾಗಲಿ ಬೈಬಲ್ ಜೊತೆಯಲ್ಲಿರಿಸಿ ನೋಡಿ ಅನುಸರಿಸಬೇಕು ಅಥವಾ ಒಂದುವೇಳೆ ಆ ಸಲಹೆ ಬೈಬಲ್ ಹೇಳುವುದರೊಂದಿಗೆ ಸರಿಯಾಗದಿದ್ದಲ್ಲಿ ಅನುಸರಿಸಬಾರದು. ನಿಮ್ಮ ಆತ್ಮೀಯ ಕ್ಷೇಮವನ್ನು ಬಯಸುವವರ ಮಾತುಗಳನ್ನು ಮತ್ತು ನೀವು ಅವರಂತೆ ಆಗಬೇಕೆಂದು ಬಯಸುವವರ ಮಾತುಗಳನ್ನು ಕೇಳಿರಿ.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 10)





## ಲೂಕಸ್ ರವರ ಪ್ರಯೋಗ (ಪಾಠ 10)

ಕೊಠಡಿಯ ಮಧ್ಯೆ ಭಾಗದಲ್ಲಿ ಬಟ್ಟೆಯೊಂದಿಗೆ ಕಣ್ಣು ಮುಚ್ಚಿರುವ ವಿದ್ಯಾರ್ಥಿಯನ್ನು ಕೂಡಿಸಿರಿ ಮತ್ತು ಆ ತರಗತಿ ಕೊಠಡಿಯಲ್ಲಿ ಆಲ್ಲಲ್ಲಿ ಗುಣುಗುಟ್ಟು ಮಾಡುವವರನ್ನು ಅನುಸರಿಸಿ ನಡೆಯಲು ಪ್ರಯತ್ನಿಸಬೇಕು. ನೀವು ಕಣ್ಣು ಮುಚ್ಚಿಟ್ಟಿರುವ ವಿದ್ಯಾರ್ಥಿಯ ಒಂದು ಕಿವಿಯನ್ನು ಮುಚ್ಚಿ ವಿವಿಧವಾದ ಶಬ್ದಗಳನ್ನೂ ಮಾಡಬಹುದು ಅಥವಾ ಗುಣುಗುಟ್ಟು ಮಾಡುವುದಕ್ಕಿಂತ ಚೀಟು ಹಾಕಬಹುದು. (ವಿವರಗಳಿಗಾಗಿ ಯೂ ಟ್ಯೂಬ್ ನೋಡಿರಿ)

https://www.facebook.com/childrenareimportant/videos/1292466710789709/

# --[ ಕೇಸ್ 11 ]--

## ಸೂಚನೆಗಳು! (ಕ್ಲೂಸ್) (ಪಾಠ 11)

### 1 ಸೂಚನೆ #1 ಅಂಶ (ಪಾಠ 11)

ನಡೆಯುತ್ತಿರುವ ಅಮ್ಮನ ಕೇಸ್

### 2 ಸೂಚನೆ #2 ನಾಟಕ (ಪಾಠ 11)

ಕಥೆ ಹೇಳುವವರು: ಈ ಕಥೆಯು ಕಲ್ಪನೆಯಾಗಿರುತ್ತದೆ, ಆದರೆ ತಪ್ಪು ಮಾದದಿರುವವರನ್ನು ಸಂರಕ್ಷಿಸಲು ಕೆಲವೊಂದು ಹೆಸರುಗಳನ್ನು ಮತ್ತು ಸ್ಥಳಗಳನ್ನು ಮಾರ್ಪಾಟು ಮಾಡಲಾಗಿದೆ.

ಸಂದೇಶಗಾರ : ನಾನು ಹಿಂದಕ್ಕೆ ತಿರುಗಿ ಬಂದಿದ್ದೇನೆ.

ಮರಿಯಳು : ಆತನು ಏನೆಂದು ಹೇಳಿದ್ದಾನೆ?

ಸಂದೇಶಗಾರ : ದೊಡ್ಡ ಸಂದೇಶ, ಈ ರೋಗವು ಮರಣಕ್ಕೆ ನಡೆಸುವುದಿಲ್ಲವೆಂದು ಹೇಳಿದನು.

ಮರಿಯಳು : (ಬಿಕ್ಕಿ ಬಿಕ್ಕಿ ಆಳುವುದಕ್ಕೆ ಆರಂಭಿಸಿದಳು)

ಸಂದೇಶಗಾರ : ಏನಾಯಿತು?

ಮರಿಯಳು : ಅವನು ಸತ್ತುಹೋಗಿದ್ದಾನೆ!

ಸಂದೇಶಗಾರ : ಅದು ಹೇಗೆ ನಡೆಯಿತು? ಅವರು ಮರುದಿನವಾದರೂ ಬರುವಂತೆ ಕಾಣಿಸುತ್ತಿಲ್ಲ.

ಮರಿಯಳು : ನನಗೆ ಅರ್ಥವಾಗುತ್ತಿಲ್ಲ, ಅವನು ಸಾಯುವುದಿಲ್ಲವೆಂದು ನಿಜವಾಗಿ ಹೇಳಿದ್ದನೋ?

ಸಂದೇಶಗಾರ : ಇರು, ಒಂದುಸಲ ನೋಡಿ ಹೇಳ್ತೀನಿ (ಜೇಬುನೊಳಗಿನಿಂದ ಕಾಗದವನ್ನು ತೆಗೆದು ಓದುತ್ತಾನೆ), ಹೌದು, ಆ ರೀತಿಯಾಗಿ ಅವರು ಹೇಳಿದರು. "ಈ ರೋಗವು ಮರಣಕ್ಕೆ ನಡೆಸುವುದಿಲ್ಲ."

ಮರಿಯಳು : ಅದು ನನಗೆ ಕೊಡು (ಅದನ್ನೆಲ್ಲಾ ಓದುವಳು)

ಸಂದೇಶಗಾರ : ನಿಮ್ಮ ತಮ್ಮನನ್ನು ಕಳೆದುಕೊಂಡಿದ್ದಕ್ಕಾಗಿ ನಾನು ವಿಚಾರಿಸುತ್ತಿದ್ದೇನೆ.

ಮರಿಯಳು : ಅವರು ಬರುತ್ತಾರೆಂದು ಹೇಳಿದ್ದರೋ?

ಸಂದೇಶಗಾರ : ಹೌದು.

ಮರಿಯಳು : ಒಳ್ಳೇಯದು, ಅವರು ಇಲ್ಲಿಗೆ ಬಂದಾಗ ನಾನು ಅವರೊಂದಿಗೆ ಮಾತನಾಡುತ್ತೇನೆ, ಯಾಕಂದರೆ ನನಗೇನೂ ಅರ್ಥವಾಗುತ್ತಿಲ್ಲ. [ಬಿಕ್ಕಿ ಬಿಕ್ಕಿ ಆಳುತ್ತಾ ಇರುವಳು]

ಸಂದೇಶಗಾರ : ಇನ್ನೇನಾದರೂ ಇದೆಯಾ?

ಮರಿಯಳು : ನಾನು ಸಮಾಧಿ ಕಾರ್ಯಕ್ರಮಕ್ಕೆ ಎಲ್ಲವನ್ನು ಸಿದ್ಧ ಮಾಡಬೇಕು. ನೀವು ಸ್ವಲ್ಪ ಊರೊಳಗೆ ಹೋಗಿ ಹೂಗಳನ್ನು ತೆಗೆದುಕೊಂಡು ಬರುತ್ತೀರೋ, ಮತ್ತು ಇನ್ನೂ ಸ್ವಲ್ಪ ಹೆಚ್ಚಿನ ಸಹಾಯ ನನಗಿಲ್ಲಿ ಬೇಕಾಗುತ್ತದೆ.

ಸಂದೇಶಗಾರ : ಆಯಿತು, ತೆಗೆದುಕೊಂಡು ಬರುತ್ತೇನೆ.

## 3 ಸೂಚನೆ #3 ವಸ್ತು (ಪಾಠ 11)

ಸೂಚನೆಯಾಗಿ ಈ ಭೌತಿಕ ವಸ್ತುವನ್ನು ನಿಮ್ಮ ತರಗತಿಗೆ ತೆಗೆದುಕೊಂಡು ಬನ್ನಿರಿ : ಬಿಳಿಯ ಬ್ಯಾಂಡೇಜ್ ಬಟ್ಟೆ ಅಥವಾ ಬಿಳೀ ಬಟ್ಟೆ


## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 11)




ಈಗಿನ ಬೇಥಾನ್ಯ ಊರಿನ ಚಿತ್ರ. (ರಹಸ್ಯ : ಲಾಜರನು ನಿವಾಸ ಮಾಡಿರುವ ಪಟ್ಟಣ.)

## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 11)

ರಹಸ್ಯ : ಮುದ್ರಿಸಲ್ಪಟ್ಟ ಸಮಾಧಿ (ಅದು ಚೆನ್ನಾಗಿಲ್ಲದಿದ್ದರೂ), ವಾಸನೆ ಯಾಕಂದರೆ ಆ ಸಮಾಧಿಯಲ್ಲಿ ಲಾಜರನು 4 ದಿನಗಳು ಇದ್ದಿದ್ದನು ಮತ್ತು ಸಮಾಧಿಯನ್ನು ತೆರೆದರೆ, ತುಂಬಾ ದುರ್ವಾಸನೆ ಬರುತ್ತದೆಯೆಂದು ಮಾರ್ತ ಮಾರಿಯಳು ಇಬ್ಬರು ಹೇಳಿದರು.



# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 11)

## ಬೈಬಲ್ ಕಥೆ (ಪಾಠ 11)

**ಲಾಜರನು**

**ಬೈಬಲ್ ವಾಕ್ಯಭಾಗದಿಂದ : ಯೋಹಾನ. 11:1-44.**



ಯೇಸು ಆ ಪಟ್ಟಣವನ್ನು ಸಂದರ್ಶಿಸಿ, ಜನಗಳೊಂದಿಗೆ ತನ್ನ ಪ್ರೀತಿಯನ್ನು ಹಂಚಿಕೊಳ್ಳುತ್ತಿದ್ದನು, ತನ್ನ ಪ್ರೀತಿಯ ಗೆಳೆಯನಾದ ಲಾಜರನು ರೋಗದಿಂದ ನರಳಿ, ಸತ್ತಿದ್ದಾನೆಂದು ತಿಳಿದುಕೊಂಡನು. ಲಾಜರನ ಅಕ್ಕ ಯೇಸುವಿನ ಬಳಿಗೆ ಬಂದು, ನಮ್ಮ ಊರಿಗೆ ಬನ್ನಿರಿ, ನಮ್ಮ ತಮ್ಮನನ್ನು ಬದುಕಿಸಿರಿ ಎಂದು ಬೇಡಿಕೊಂಡಳು. ಲಾಜರನಿಗೆ ಸಹಾಯ ಮಾಡುವುದಕ್ಕೆ ಮುಂಚಿತವಾಗಿ ಯೇಸು ಇನ್ನೂ ಎರಡು ದಿನದ ವರೆಗೂ ಅಲ್ಲಿಗೆ ಹೋಗಬಾರದೆಂದು ನಿರ್ಣಯಿಸಿಕೊಂಡನು. ಲಾಜರನು ನಿದ್ರಿಸುತ್ತಿದ್ದಾನೆ, ಆದರೆ ಲಾಜರನು ಸತ್ತಿದ್ದಾನೆಂದು ಯಾರೂ ಅರ್ಥಮಾಡಿಕೊಂಡಿಲ್ಲ. ಲಾಜರನು ನಿವಾಸವಾಗಿದ್ದ ಊರೊಳಗೆ ಯೇಸು ಮತ್ತು ತನ್ನ ಶಿಷ್ಯರು ಸೇರಿಕೊಂಡರು, ಲಾಜರನ ಅಕ್ಕ ಯೇಸುವಿನ ಬಳಿಗೆ ಬಂದು, ನೀವು ಎರಡು ದಿನ ಮುಂಚಿತವಾಗಿಯೇ ಬಂದಿದ್ದಾರೆ, ಅವನು ಸತ್ತುಹೋಗುತ್ತಿರಲಿಲ್ಲ ಎಂದು ಹೇಳಿಕೊಂಡಳು. ನಾನು ಕ್ರಿಸ್ತನೆಂದು, ದೇವರ ಮಗನೆಂದು ನಂಬುತ್ತಿರುವುದಾದರೆ, ಅವರು ನಿತ್ಯಜೀವವನ್ನು ಪಡೆಯುತ್ತಾರೆಂದು ಯೇಸು ಲಾಜರನ ಅಕ್ಕಂದಿಯರಿಗೆ ಕೇಳಿದನು. ನಾವು ನಮ್ಬುತ್ತಿದ್ದೇವೆಂದು ಅವರು ಒಪ್ಪಿಕೊಂಡರು, ಆದರೆ ಅವರು ಯೇಸು ಯಾವುದರ ಕುರಿತಾಗಿ ಹೇಳುತ್ತಿದ್ದಾರೆಂದು ನಿಜವಾಗಿ ಅರ್ಥಮಾಡಿಕೊಂಡಿಲ್ಲ. ಲಾಜರನನ್ನು ಸಮಾಧಿ ಮಾಡಿಟ್ಟಿರುವ ಸ್ಥಳಕ್ಕೆ ಎಲ್ಲರನ್ನು ಯೇಸು ಕರೆದುಕೊಂಡನು. ಸಮಾಧಿಯ ದ್ವಾರಕ್ಕೆ ಆನಿಸಿರುವ ಕಲ್ಲನ್ನು ತೆಗೆದುಹಾಕಿರೆಂದು ಯೇಸು ಹೇಳಿದನು. ಆಗ ಅದನ್ನು ಮಾಡಬೇಡಿರೆಂದು ಅಕ್ಕತಂಗಿಯರಿಬ್ಬರು ಯೇಸುವನ್ನು ಬೇಡಿಕೊಂಡರು. ಲಾಜರನು ಸತ್ತು ನಾಲ್ಕು ದಿನಗಳಾಗಿತ್ತು ಮತ್ತು ಅಲ್ಲಿ ಭಯಂಕರವಾದ ದುರ್ವಾಸನೆ ಬಂದಿರಬಹುದು. "ನೀವು ನಂಬಿದರೆ, ದೇವರ ಮಹಿಮೆಯನ್ನು ಕಾಣುವಿರಿ" ಎಂದು ಯೇಸು ಅವರಿಗೆ ಹೇಳಿದ್ದರು. ಆಗ ಆ ಕಲ್ಲನ್ನು ತೆಗೆದುಹಾಕಿದರು, "ಲಾಜರನೇ, ಹೊರಗೆ ಬಾ!" ಎಂದು ಗಟ್ಟಿಯಾಗಿ ಕೂಗಿದನು. ತಕ್ಷಣವೇ, ಲಾಜರನು ಜೀವಂತವಾಗಿ ಹೊರಗಡೆಗೆ ನಡೆದುಕೊಂಡು ಬಂದನು! ಯೇಸು ತನ್ನ ಗೆಳೆಯನಾದ ಲಾಜರನನ್ನು ಮರಣದಿಂದ ಎಬ್ಬಿಸಿದನು!

## ಅನ್ವಯ (ಪಾಠ 11)

ನನ್ನ ದುಸ್ಥಿತಿಗಳಲ್ಲಿಯೂ ದೇವರು ನನ್ನನ್ನು ಪ್ರೀತಿಸುವನು.

## ಕಂಠಪಾಠ ವಾಕ್ಯ (ಪಾಠ 11)

"ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು;..." ಎಂದು ಹೇಳಿದನು. - ಯೋಹಾನ.11:25.

## ಮನೆಗೆಲಸ (ಪಾಠ 11)

ನಿಮಗೆ ಗೊತ್ತಿರುವ ಯಾರಿಗಾದರು ಏನಾದರೂ ಆಗಿದ್ದರೆ ಅವರಿಗೆ ಏನಾದರೊಂದು ಒಳ್ಳೇಯ ಸಹಾಯವನ್ನು ಮಾಡಿರಿ.

## ದೇವರ ಡಿ.ಎನ್.ಎ. (ಪಾಠ 11)




ಈ ಪಾಠದಿಂದ ನಾವು ದೇವರ ಕುರಿತಾಗಿ ಏನನ್ನು ಕಲಿತುಕೊಳ್ಳುತಿದ್ದೇವೆ? ಪುನರುತ್ಥಾನವು ಇದೆಯೆಂದು ಪ್ರತಿಯೊಬ್ಬರು ತಿಳಿದುಕೊಳ್ಳಬೇಕೆಂದು ದೇವರು ಬಯಸುತ್ತಿದ್ದಾರೆ.



# ವಿನೋದ ಸಮಯ (ಪಾಠ 11)

## ಆಟ (ಪಾಠ 11)

ಅಕ್ಷರಗಳು

ಉಪಾಧ್ಯಾಯರು ತರಗತಿಯಲ್ಲಿರುವ ವಿದ್ಯಾರ್ಥಿಗಳನ್ನು ಜೊತೆ ಜೊತೆಯಾಗಿ ವಿಂಗಡಿಸುತ್ತಾರೆ. ಪ್ರತಿಯೊಂದು ಗುಂಪಿನಲ್ಲಿ ಒಬ್ಬ ವಿದ್ಯಾರ್ಥಿ ಬಂದು ರಹಸ್ಯವಾಗಿ ಬರೆಯಲ್ಪಟ್ಟಿರುವ ಅಕ್ಷರವನ್ನು ನೋಡಬೇಕು. ವಿದ್ಯಾರ್ಥಿಗಳು ಓದಿರುವ ಆ ಅಕ್ಷರವನ್ನು ಹೊರ ಹೇಳುವುದಕ್ಕೆ ಅನುಮತಿಸಬೇಡಿ, ಅಥವಾ ತನ್ನ ಪಾಲುಗಾರರಿಗೆ ಯಾವ ಸಂಜ್ಞೆಯು ಕೊಡಬಾರದು. ವಿದ್ಯಾರ್ಥಿಗಳು ತಮ್ಮ ಪಾಲುಗಾರರ ಬಳಿಗೆ ಬಂದಾಗ, ಉಪಾಧ್ಯಾಯರು "ಹೋಗು" ಎಂದು ಹೇಳಬೇಕು, ಆಗ ವಿದ್ಯಾರ್ಥಿಗಳು ಅವರ ಪಾಲುಗಾರರ ಹಿಂಭಾಗದಲ್ಲಿ ಬೆರಳುನೊಂದಿಗೆ ಆ ಅಕ್ಷರವನ್ನು ಬರೆಯಬೇಕು. ಒಂದುವೇಳೆ ಪಾಲುಗಾರನು ಆ ಅಕ್ಷರವನ್ನು ಕಂಡುಹಿಡಿಯುವುದಾದರೆ, ಅವನು/ಅವಳು ತಪ್ಪದೇ ತಮ್ಮ ಕೈಗಳನ್ನು ಮೇಲಕ್ಕೆ ಎತ್ತಬೇಕು, ಆದನಂತರ ಆ ಅಕ್ಷರವು ಏನಾಗಿರುವುದೆಂದು ಹೇಳಬೇಕು. ಸರಿಯಾಗಿ ಹೇಳಿದ್ದಲ್ಲಿ, ಅವರಿಗೆ ಒಂದು ಪಾಯಿಂಟ್ ಬರುತ್ತದೆ. ಒಂದುವೇಳೆ ತಪ್ಪಾಗಿ ಹೇಳಿದರೆ, ಸರಿಯಾಗಿ ಹೇಳುವವರೆಗೂ ಆ ಆಟವು ಮುಂದೆವರಿಯುತ್ತದೆ. ಯಾರಬಳಿ ಹೆಚ್ಚಿನ ಪಾಯಿಂಟ್.ಗಳು ಇರುತ್ತವೋ, ಅವರೇ ಈ ಆಟದಲ್ಲಿ ಗೆಲ್ಲುತ್ತಾರೆ.

ಹಿರಿಯ ವಿದ್ಯಾರ್ಥಿಗಳಿಗೆ ವಿಭಿನ್ನತೆ : ಒಂದೇ ಒಂದು ಅಕ್ಷರವನ್ನು ಬರೆಯುವುದರ ಬದಲಾಗಿ ಮೂರು ಅಕ್ಷರಗಳಿರುವ ಪದಗಳನ್ನು ಬರೆಯಿರಿ.

## ಚರ್ಚೆ (ಪಾಠ 11)

(ಹಿರಿಯ ವಿದ್ಯಾರ್ಥಿಗಳಿಗಾಗಿ)

1. ನಿಮ್ಮ ಜೀವನವು ಯಾವ ಯಾವ ವಿಷಯಗಳಲ್ಲಿ ಚೆನ್ನಾಗಿರುವುದಿಲ್ಲ? ಅದನ್ನು ದೇವರು ಹೇಗೆ ಪರಿಹಾರ ಮಾಡುತ್ತಾರೆಂದು ನೀವು ಆಲೋಚನೆ ಮಾಡುತ್ತಿದ್ದೀರಿ?



ನಿಮ್ಮ ವಿದ್ಯಾರ್ಥಿಗಳು ಹಂಚಿಕೊಳ್ಳುವ ಪ್ರತಿಯೊಂದು ವಿಷಯವನ್ನು ಸ್ವೀಕರಿಸಿರಿ, ತಪ್ಪಾಗುವ ಉತ್ತರಗಳೇ ಇರುವುದಿಲ್ಲ. ಪ್ರತಿಯೊಬ್ಬರ ಜೀವನದಲ್ಲಿಯೂ ಚೆನ್ನಾಗಿಲ್ಲದ ಸಂಘಟನೆಗಳು ಇರುತ್ತವೆ. ಚೆನ್ನಾಗಿರುವ ಮತ್ತು ಚೆನ್ನಾಗಿಲ್ಲದ ಸಂದರ್ಭಗಳ ಕುರಿತಾಗಿ ಸಮತೋಲನವಾಗಿ ವಿದ್ಯಾರ್ಥಿಗಳು ಚರ್ಚೆ ಮಾಡುವಂತೆ ಹೇಳಿರಿ. ದೇವರಿಗಾಗಿ ತಮ್ಮ ಜೀವನಗಳನ್ನು ತ್ಯಾಗ ಮಾಡಿಕೊಂಡಿರುವವರಿಗೋಸ್ಕರ ಆತನು ತಿರುಗಿ ಅವರಿಗೆ ಹೇಗೆ ಕೊಡುತ್ತಾನೆಂದು ಮತ್ತಾಯ.19:29ರ ವಚನವು ನಮಗೆ ತೋರಿಸುತ್ತಿದೆ. ಮತ್ತಾಯ 20ನೆ ಅಧ್ಯಾಯವು ಕೆಲವು ಗಂಟೆಗಳ ಕಾಲ ಕೆಲಸ ಮಾಡಿದ ಕೆಲಸಗಾರರು ಒಂದೇ ರೀತಿಯ ಫಲವನ್ನು ಪಡೆದುಕೊಳ್ಳುವುದರ ಕುರಿತಾಗಿರುತ್ತದೆ. ಇದು ಅದಕ್ಕೆ ವಿರುದ್ಧವಾಗಿ ತೋರಿಸುತ್ತಿದೆ. ಈ ಸಾಮ್ಯದಲ್ಲಿ, ಜೀವನವೆಂಬುದು ಚೆನ್ನಾಗಿರುವುದಿಲ್ಲ ಮತ್ತು ಚೆನ್ನಾಗಿ ಇರುವುದಿಲ್ಲ. ಇವೆರಡರ ವಿಷಯವಾಗಿ ವಿದ್ಯಾರ್ಥಿಗಳು ಮಾತನಾಡಲು ಅನುಮತಿಸಿರಿ.

2. ನಾನು ಪ್ರಾರ್ಥನೆ ಹೆಚ್ಚಾಗಿ ಮಾಡಿದರೆ ಏನಾಗುತ್ತದೆ?

ದೇವರು ವಿತರಣ ಯಂತ್ರವಲ್ಲ. ಕೆಲವೊಂದುಸಲ ಅವರು ನಮ್ಮ ಪ್ರಾರ್ಥನೆಗಳಿಗೆ "ಇಲ್ಲ" ಎಂದಾಗಲಿ ಅಥವಾ "ಇವಾಗಲೇ ಅಲ್ಲ" ಎನ್ನುವುದಾಗಲಿ ಹೇಳಬಹುದು. ಇವಾಗ ನಮಗೆ ಕಷ್ಟಕಾಲವಿದ್ದರೂ, ದೇವರು ಯಾವಾಗಲೂ ಯಾವುದು ಉತ್ತಮವಾದದ್ದೋ ಅದನ್ನೇ ನಮಗೆ


ಕೊಡುವುದಕ್ಕೆ ಬಯಸುತ್ತಾರೆ. ನಾವು ಪ್ರಾರ್ಥಿಸಬೇಕೆಂದು ದೇವರು ಬಯಸುತ್ತಾರೆ, ಮತ್ತು ನಾವು ಪ್ರಾರ್ಥನೆ ಮಾಡುವಾಗ, ಕೆಲವೊಂದುಸಲ ಅವರು ತನ್ನ ಮನಸ್ಸನ್ನು ಮಾರ್ಪಡಿಸಿಕೊಳ್ಳುತ್ತಾರೆ. ಆದರೆ ನಾವು ಬಯಸಿದ ಉತ್ತರವನ್ನೇ ಪ್ರತಿಯೊಂದುಸಲ ಹೊಂದಿಕೊಳ್ಳುವುದಕ್ಕಾಗುವುದಿಲ್ಲ.

3. ಯೇಸುವಿನಿಂದ ನೀವು ಎಂಥಹವುಗಳನ್ನು ಎದುರು ನೋಡುತ್ತಿದ್ದೀರಿ?

ಅನೇಕಸಲ ಕ್ರೈಸ್ತರು ಸಮಸ್ಯೆಗಳಿಲ್ಲದ ಜೀವನವನ್ನು ಎದುರುನೋಡುತ್ತಿರುತ್ತಾರೆ, ಅಂದರೆ ಯೇಸು ತಮಗೆ ಸುಲಭಕರವಾದ ಜೀವನವನ್ನು ಕೊಡಬೇಕೆಂದು ಬಯಸುತ್ತಾರೆ ಮತ್ತು ಅವರು ಎಂದೆಂದಿಗೂ ಆರೋಗ್ಯಕರವಾಗಿ ಇರಬೇಕೆಂದು ಬಯಸುತ್ತಾರೆ. ಕ್ಷಮಿಸಿ; ಕ್ರೈಸ್ತರಿಗೆ ಜೀವನವು ತುಂಬಾ ಕಷ್ಟಕರವಾಗಿ ಇರುತ್ತದೆಯೆಂದು ಅಥವಾ ಸುಲಭಕರವಾಗಿ ಇರುವುದಿಲ್ಲವೆಂದು ಯೇಸು ಹೇಳಿದರು. ದೆವ್ವವು ಈಗ ಭೂಮಿಯೆಲ್ಲಾ ಸುತ್ತುತ್ತಾ ಇದೆ, ನಮ್ಮನ್ನು ನಾಶಪಡಿಸುವುದಕ್ಕೆ ಪ್ರಯತ್ನಿಸುತ್ತಿದೆ. ಕಠಿಣವಾದ ಪರಿಸ್ಥಿತಿಗಳಲ್ಲಿ ಯೇಸು ನನಗೆ ಸಹಾಯ ಮಾಡುತ್ತಾರೆ, ಸರಿಯಾದ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಸಹಾಯ ಮಾಡುತ್ತಾರೆ ಎನ್ನುವ ನಿರೀಕ್ಷೆಗಳು ನಮಗೆ ಇರಬೇಕೇ ಹೊರತು, ಸಂಪೂರ್ಣವಾಗಿ ಕಠಿಣವಾದ ಪರಿಸ್ಥಿತಿಗಳು ತೆಗೆದುಹಾಕುವರೆಂದು ಎದುರುನೋಡಬಾರದು.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 11)






## ಲೂಕಸ್ ರವರ ಪ್ರಯೋಗ (ಪಾಠ 11)

ವಿದ್ಯಾರ್ಥಿಗಳು ಕಾಗದವನ್ನು ತೆಗೆದುಕೊಂಡು ತಮ್ಮ ಹಣೆಯ ಮೇಲೆ ಇಟ್ಟುಕೊಳ್ಳುವಂತೆ ಹೇಳಿರಿ, ಆಗ ಅದರ ಅವರ ಹೆಸರುಗಳನ್ನು ಒಂದು ಮಾರ್ಕರ್ ಪೆನ್ ತೆಗೆದುಕೊಂಡು ಬರೆಯಿರಿ. ಎಲ್ಲರು ಹಿಂದೆ ಇದ್ದಾರೆಂದು ತಿಳಿದಾಗ, ಬರೆಯುವುದು ತುಂಬಾ ಕಷ್ಟ. (ವಿವರಗಳಿಗಾಗಿ ಯೂ ಟ್ಯೂಬ್ ನೋಡಿರಿ).

https://www.facebook.com/childrenareimportant/videos/1292550470781333/

# --[ ಕೇಸ್ 12 ]--



## ಸೂಚನೆಗಳು! (ಕ್ಲೂಸ್) (ಪಾಠ 12)

### 1 ಸೂಚನೆ #1 ಅಂಶ (ಪಾಠ 12)

ಸುಳ್ಳಿನ ಕುತಂತ್ರದ ಕೇಸ್

### 2 ಸೂಚನೆ #2 ನಾಟಕ (ಪಾಠ 12)

ಕಥೆ ಹೇಳುವವರು: ಈ ಕಥೆಯು ಕಲ್ಪನೆಯಾಗಿರುತ್ತದೆ, ಆದರೆ ತಪ್ಪು ಮಾದದಿರುವವರನ್ನು ಸಂರಕ್ಷಿಸಲು ಕೆಲವೊಂದು ಹೆಸರುಗಳನ್ನು ಮತ್ತು ಸ್ಥಳಗಳನ್ನು ಮಾರ್ಪಾಟು ಮಾಡಲಾಗಿದೆ.

ದ್ವಾರಪಾಲಕನು : ಹಲೋ ಆಫೀಸರ್, ನಾನು ಇವತ್ತು ಯಾವರೀತಿ ಸಹಾಯ ಮಾಡಲಿ?

ಪರಿಶೋಧಕರು : ಗುಡ್ ಆಫ್ಟರ್ ನೂನ್ [ಬ್ಯಾಡ್ಜ್ ತೆಗದು ತೋರಿಸಿ, ಜೇಬುನಲ್ಲಿ ಇಟ್ಟುಕೊಳ್ಳುತ್ತಾನೆ] ನಾನು ನಿಮ್ಮನ್ನು ಕೆಲವು ಪ್ರಶ್ನೆಗಳನ್ನು ಕೇಳಬಹುದೇ?



ದ್ವಾರಪಾಲಕನು : ಖಂಡಿತವಾಗಿ ಕೇಳಬಹುದು.

ಪರಿಶೋಧಕರು : ಇವತ್ತು ಈ ಭವನದಲ್ಲಿ ಎರಡು ಕೊಲೆಗಳು ನಡೆದಿವೆಯೆಂದು ನಾನು ಅರ್ಥಮಾಡಿಕೊಂಡಿದ್ದೇನೆ.

ದ್ವಾರಪಾಲಕನು : ಉಂ... ಇಲ್ಲ ಸಾರ್, ಅವು ಆತ್ಮಹತ್ಯೆಗಳೆಂದು ನಾನು ಹೇಳುತ್ತಿದ್ದೇನೆ.

ಪರಿಶೋಧಕರು : ನೀವು ಅಷ್ಟು ಖಂಡಿತವಾಗಿ ಅವು ಆತ್ಮಹತ್ಯೆಗಳೆಂದು ಹೇಗೆ ಹೇಳುತ್ತಿದ್ದೀರಿ? ಇಲ್ಲಿ ನೋಟ್ ಬರೆದಿಟ್ಟಿರುವ ಆಧಾರವು ಯಾವುದು ಇಲ್ಲ. ಇದು ಆತ್ಮಹತ್ಯೆಗಳ ಗುರುತುಗಳಲ್ಲ.

ದ್ವಾರಪಾಲಕನು : ಭಯಂಕರವಾಗಿರುವಂತೆ ಈ ವಂಚನೆಯ ಪ್ರಣಾಳಿಕೆ ಮಾಡುವುದಕ್ಕೆ ಅವರು ಪ್ರಯತ್ನಿಸುತ್ತಿದ್ದರು ಮತ್ತು ಅದು ಅವರ ಸ್ವಂತ ಮರಣಗಳಲ್ಲಿಯೇ ಕಂಡುಬಂತು.

ಪರಿಶೋಧಕರು : ನಿವೇಲ್ಲಿದ್ದೀರಿ?

ದ್ವಾರಪಾಲಕನು : ನಾನು ಎಂದಿನಂತೆಯೇ, ನನ್ನ ಪಾದಗಳು ಈ ಬಾಗಿಲು ಪಕ್ಕದಲ್ಲಿಯೇ ಇದ್ದವು.

ಪರಿಶೋಧಕರು : ನಾಟಕದಲ್ಲಿ ನೀವು ಪಾತ್ರ ವಹಿಸಿದ್ದೀರೋ?

ದ್ವಾರಪಾಲಕನು : ಹೌದು ಸಾರ್, ಆ ಕೊಠಡಿಯೊಳಗಿನಿಂದ ಆ ದೇಹಗಳನ್ನು ಹೊರ ತೆಗೆದುಕೊಂಡು ಬಂದಿದ್ದೇನೆ ಮತ್ತು ಶವಗಾರಕ್ಕೆ ತೆಗೆದುಕೊಂಡು ಹೋಗುವ ದುರ್ಮರಣ ವಿಚಾರಕನ ಬಳಿಗೆ ತೆಗೆದು ಹೋಗಿದ್ದೇನೆ.

ಪರಿಶೋಧಕರು : ಓ.. ಹೌದಾ, ಹಾಗಾದರೆ ನೀವು ಆ ಶವಗಳನ್ನು ನೋಡಿದ್ದೀರಿ?

ದ್ವಾರಪಾಲಕನು : ಹೌದು ಸಾರ್, ಅವು ಒಂದು ಗಂಡು ಮತ್ತು ಒಂದು ಹೆಣ್ಣು ಆಗಿದ್ದವು.

ಪರಿಶೋಧಕರು : ನೀವು ಯಾವಾಗ ತೆಗೆದುಕೊಂಡು ಹೋಗಿದ್ದೀರಿ, ಅವುಗಳ ಮೇಲೆ ಏನಾದರೂ ಗುರುತುಗಳಿವೆಯಾ?

ದ್ವಾರಪಾಲಕನು : ಇಲ್ಲ ಸಾರ್, ಅವರು ಸತ್ತಿದ್ದಾರೆನ್ನುವ ವಿಷಯವನ್ನು ಬಿಟ್ಟು, ಅವರು ಸಂಪೂರ್ಣವಾಗಿದ್ದಂತೆ ಕಾಣಿಸಿಕೊಂಡರು.

ಪರಿಶೋಧಕರು : ನೀವು ಹೊರಗಡೆ ಇದ್ದು, ಒಳಗೆ ಏನು ನಡೆದಿದೆಯೆಂದು ಹೇಳುವುದಕ್ಕಾಗುವುದಿಲ್ಲವೆಂದು ಕಾಣಿಸುತ್ತಿದೆ?

ದ್ವಾರಪಾಲಕನು : ಅದು ನೀವೇ ಹೇಳಬೇಕು ಸಾರ್, ಅದನ್ನೇ ಅವರು ಅಂದುಕೊಂಡಿದ್ದರು. ಆದರೆ ಏನೆಂದು ನಾನು ನಿಮಗೆ ಹೇಳುತ್ತೇನೆ, ಈ ಕೊಠಡಿಯಲ್ಲಿ ಅನೇಕಮಂದಿ ಸುಳ್ಳುಗಾರರು ಕಂಡುಬಂದಿಲ್ಲ.

ಪರಿಶೋಧಕರು : ನೀವು ಹೇಳುತ್ತಿರುವುದೇನು?

ದ್ವಾರಪಾಲಕನು : ಇಲ್ಲಿ ಸುಳ್ಳುಗಾರರೇ ಇಲ್ಲ.

ಪರಿಶೋಧಕರು : ಅದಕ್ಕೆ ಮುಂಚಿತವಾಗಿ ಯಾರೂ ಇಲ್ಲವೋ.

ದ್ವಾರಪಾಲಕನು : ಓ... ಒಳಗೆ ಏನು ನಡೆದಿದೆಯೆಂದು ಯಾರೂ ನೋಡುವುದಕ್ಕಾಗುವುದಿಲ್ಲ.

## 3 ಸೂಚನೆ #3 ವಸ್ತು (ಪಾಠ 12)


ಸೂಚನೆಯಾಗಿ ಈ ಭೌತಿಕ ವಸ್ತುವನ್ನು ನಿಮ್ಮ ತರಗತಿಗೆ ತೆಗೆದುಕೊಂಡು ಬನ್ನಿರಿ : ನಾಣ್ಯಗಳು

## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 12)




ಯೆರೂಷಲೇಮಿನಲ್ಲಿ ದೇವಾಲಯದಿಂದ ಇವತ್ತು ಹೊರಗಡೆ ನೋಡಿದಾಗ ಸೊಲೊಮೋನ ಕಂಬ ಮಂಟಪವು ಈ ಚಿತ್ರದಲ್ಲಿ ಇರುವಂತೆ ಕಾಣಿಸಿಕೊಳ್ಳುತ್ತದೆ. (ರಹಸ್ಯ : ಅಪೊ.ಕೃತ್ಯ.3ನೇಯ ಅಧ್ಯಾಯವು ಸೊಲೊಮೋನ ಮಂಟಪದಲ್ಲಿ ಪೇತ್ರನು ಪ್ರಸಂಗ ಮಾಡಿದ್ದನ್ನು ನೋಡಬಹುದು. ಅಪೊ.ಕೃತ್ಯ.5ನೇ ಅಧ್ಯಾಯದಲ್ಲಿ ಅನನೀಯ ಮತ್ತು ಸಪ್ಫೈರಳೊಂದಿಗೆ ಪೇತ್ರನು ವ್ಯವಹಾರದ ಕಥೆಯನ್ನು ನೋಡಬಹುದು. ಈ ಸಂಘಟನೆಯು ಈ ಸ್ಥಳಕ್ಕೆ ಅತೀ ಸಮೀಪದಲ್ಲಿಯೇ ಇದೆ.

## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 12)



ರಹಸ್ಯ : ಆಸ್ತಿಯ ಮಾರಾಟದಿಂದ ಬಂದ ಹಣ ಮಾತ್ರವೇ (ಆದರೆ ಎಲ್ಲಾದರ ಹಣವಲ್ಲ) ಮತ್ತು ಸ್ತ್ರೀ ಪುರುಷರ ಶರೀರಗಳ ನೆರಳಿನ ಚಿತ್ರಗಳು. (ಮೊದಲು ಪುರುಷನು ಹೊರಟನು, ಆದಾನಂತರ ಸ್ತ್ರೀಯು ಹೋದಳು.)

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 12)

## ಬೈಬಲ್ ಕಥೆ (ಪಾಠ 12)

**ಅನನೀಯ ಮತ್ತು ಸಪ್ಫೀರಳು**

**ಬೈಬಲ್ ವಾಕ್ಯಭಾಗ : ಅಪೊ.ಕೃತ್ಯ.5:1-11**



ಯೇಸುವಿನ ಶುಭ ಸಂದೇಶದ ಕುರಿತಾಗಿ ಯೇಸುವಿನ ಶಿಷ್ಯರು ಹಂಚಿಕೊಂಡಾಗ, ಜನರು ಒಬ್ಬರಿಗೊಬ್ಬರಿಗೆ ಸಹಾಯ ಮಾಡಿಕೊಳ್ಳುವುದಕ್ಕೆ ಪ್ರೇರಣೆಗೊಂಡರು. ಬಡವರಿಗೆ ಸಹಾಯ ಮಾಡುವುದಕ್ಕೆ ಅವರಿಗಿರುವ ಆಸ್ತಿಯನ್ನು ಮಾರಿದ್ದರು. ಅನನೀಯ ಮತ್ತು ಸಪ್ಫೀರಳಿಗೆ ಕೂಡ ವ್ಯತ್ಯಾಸವೇನೂ ಇದ್ದಿಲ್ಲ, ಅವರು ಕೂಡ ಸಹಾಯ ಮಾಡಬೇಕೆಂದು ಬಯಸಿದ್ದರು. ಅದೃಷ್ಟವಶಾತ್, ಅನನೀಯ ಮತ್ತು ಸಪ್ಫೀರಳಿಗೆ ಒಂದು ಚಿಕ್ಕ ಭೂಮಿ (ಲ್ಯಾಂಡ್ ಅಥವಾ ಸೈಟ್) ಇದ್ದಿತ್ತು, ಅವರು ಅದನ್ನು ಮಾರಿ, ಅದರಿಂದ ಬರುವ ಹಣವನ್ನೆಲ್ಲಾ ವಿರಾಳವಾಗಿ ಕೊಡಬೇಕೆಂದಿದ್ದರು.

ಅನನೀಯ ಮತ್ತು ಸಪ್ಫೀರಳಿಬ್ಬರು ತಮ್ಮ ಭೂಮಿಯನ್ನು ಮಾರಾಟ ಮಾಡಿದನಂತರ, ಬಂದ ಹಣದಲ್ಲಿ ಸ್ವಲ್ಪ ಹಣ ಮಾತ್ರವೇ ಕೊಡಬೇಕೆಂದು ನಿಶ್ಚಯಿಸಿಕೊಂಡರು.  ಆದರೆ ಅವರು ಮಾರಿ ಬಂದಿರುವ ಹಣವನ್ನೆಲ್ಲ ಕೊಡುತ್ತಿರುವಂತೆ ನಟಿಸಿದರು. ಅನನೀಯನು ಸಂತೋಷಕರವಾಗಿ ಪೇತ್ರನಿಗೆ ಕೊಟ್ಟನು, ಆದರೆ ಅನನೀಯನು ಸುಳ್ಳು ಹೇಳುತ್ತಿದ್ದಾನೆಂದು ಪವಿತ್ರಾತ್ಮ ದೇವರು ಪೇತ್ರನಿಗೆ ಹೇಳಿದರು.  ಭೂಮಿ ಮಾರಿದಾಗ ಬಂದ ಹಣವು ಇದೇನಾ ಎಂದು ಪೇತ್ರನು ಅನನೀಯನನ್ನು ಕೇಳಿದಾಗ, ಹೌದು ಇಷ್ಟು ಮಾತ್ರವೇ ಎಂದು ಸುಳ್ಳು ಹೇಳಿದನು. ಅನನೀಯನು ಕರ್ತನಿಗಾಗಿ ಒಳ್ಳೇಯ ಕಾರ್ಯವನ್ನು ಮಾಡಲು ಬಯಸಿದಾಗ, ಹೇಗೆ ತನ್ನ ಹೇಗೆ ಸಾತಾನನನ್ನು ಅನುಮತಿಸಿದನು ಎಂದು ಅನನೀಯನನ್ನು ಪೇತ್ರನು ಕೇಳಿದನು. ಆ ಭೂಮಿ ಅನನೀಯನಿಗೆ ಮತ್ತು ಸಪ್ಫೀರಳಿಗೆ ಸಂಬಂಧಪಟ್ಟಿದ್ದಾಗಿರುತ್ತದೆ. ಅವರು ಭೂಮಿಯನ್ನು ಮಾರಬೇಕಾದ ಅವಶ್ಯಕತೆಯಿಲ್ಲ ಮತ್ತು ಅವರು ಮಾರಿದ್ದಕ್ಕೆ ಬಂದ ಎಲ್ಲಾ ಮೊತ್ತ ಹಣವು ಕೊಡಬೇಕಾಗಿಲ್ಲ. ಆದರೆ ಅದರ ಕುರಿತಾಗಿ ಅವರು ಸುಳ್ಳು ಹೇಳಿದರು. ಪೇತ್ರನು ಅವನನ್ನು ಗದರಿಸಿದ ನಂತರ, ಅನನೀಯನು ಕೆಳಗೆ ಬಿದ್ದು ಸತ್ತನು!

ಕೆಲವು ಗಂಟೆಗಳಾದ ಮೇಲೆ, ತನ್ನ ಗಂಡನನ್ನು ಹುಡುಕಿಕೊಂಡು ಸಪ್ಫೀರಳು ಅಲ್ಲಿಗೆ ಬಂದಳು. ಪೇತ್ರನು ಆಕೆಯನ್ನು ಕಂಡ ತಕ್ಷಣವೇ, ಮಾರಾಟದಿಂದ ಬಂದ ಹಣವನ್ನೆಲ್ಲಾ ಇಲ್ಲಿ ಕೊಟ್ಟಿದ್ದಾನೋ ಎಂದು ಕೇಳಿದನು, ಆದರೆ ಆಕೆ ಕೂಡ ತನ್ನ ಗಂಡನಂತೆ ಸುಳ್ಳು ಹೇಳಿದಳು. ಸಪ್ಫೀರಳು ಕೂಡ ದೇವರಿಗೆ ಸುಳ್ಳು ಹೇಳುವದನ್ನು ನೋಡಿ ಪೇತ್ರನು ಬೆರಗಾದನು. ಆ ರೀತಿ ಕರ್ತನನ್ನು ಹೇಗೆ ಪರೀಕ್ಷಿಸುತ್ತೀರೆಂದು ಪೇತ್ರನು ಆಕೆಯನ್ನು ಕೇಳಿದನು. ಸಪ್ಫೀರಳು ತಕ್ಷಣವೇ ತನ್ನ ಗಂಡ ಸತ್ತಿದ್ದಾನೆಂದು ತಿಳಿದುಕೊಂಡಳು, ತನ್ನ ಗಂಡನನ್ನು ಸಮಾಧಿ ಮಾಡಿರುವ ಜನರನ್ನು ನೋಡುತ್ತಿದ್ದಂತೆಯೇ ಆಕೆಯು ಕೆಳಗೆ ಬಿದ್ದು ಸತ್ತಳು.

## ಅನ್ವಯ (ಪಾಠ 12)

ನಾವು ಯಾವಾಗಲೂ ಸತ್ಯವನ್ನೇ ನುಡಿಯಬೇಕೆಂದು ದೇವರು ಬಯಸುತ್ತಿದ್ದಾರೆ.

## ಕಂಠಪಾಠ ವಾಕ್ಯ (ಪಾಠ 12)

"ಒಬ್ಬರಿಗೊಬ್ಬರು ಸುಳ್ಳಾಡಬೇಡಿರಿ; ನೀವು ಪೂರ್ಣ ಸ್ವಭಾವವನ್ನು ಅದರ ಕೃತ್ಯಗಳ ಕೂಡ ತೆಗೆದಿಟ್ಟು ನೂತನ ಸ್ವಭಾವವನ್ನು ಧರಿಸಿ ಕೊಂಡಿದ್ದೀರಲ್ಲವೇ." - ಕೊಲೊಸ್ಸೆ.3:9.

### ಮನೆಗೆಲಸ (ಪಾಠ 12)

ನೀವು ಹೇಳಿರುವ ಸುಳ್ಳಿನ ವಿಷಯವಾಗಿ ಯೋಚನೆ ಮಾಡಿರಿ. ಇನ್ನೊಬ್ಬರಿಗೆ ಅದೇ ಸುಳ್ಳನ್ನು ಹೇಳುವುದನ್ನು ನಿಲ್ಲಿಸಿರಿ. ಒಂದು ಕಾಗದವನ್ನು ತೆಗೆದುಕೊಂಡು, ಅದನ್ನು ಅದರ ಮೇಲೆ ಬರೆಯಿರಿ. ಒಂದು ಕಾಗದ ಮೇಲೆ ಒಂದು ಪ್ರಾರ್ಥನೆಯನ್ನು ಬರೆಯಿರಿ, ಎಂದಿಗೂ ಸುಳ್ಳು ಹೇಳದಂತೆ ದೇವರ ಸಹಾಯಕ್ಕಾಗಿ ಬೇಡಿಕೊಳ್ಳಿರಿ. ಆ ಕಾಗದವನ್ನು ತೆಗೆದುಕೊಂಡು ಹೊರಗಡೆ ಬಂದು, ಎಲ್ಲಾದರು ಮಣ್ಣಿನೊಳಗೆ ಮುಚ್ಚಡಿರಿ.

### ದೇವರ ಡಿ.ಎನ್.ಎ. (ಪಾಠ 12)

ಈ ಪಾಠದಿಂದ ನಾವು ದೇವರ ಕುರಿತಾಗಿ ಏನನ್ನು ಕಲಿತುಕೊಳ್ಳುತ್ತಿದ್ದೇವೆ? ದೇವರಿಗೆ ಜನರ ಹೃದಯ ಆಲೋಚನೆಗಳು ಮತ್ತು ಉದ್ದೇಶಗಳು ಗೊತ್ತಿವೆ.






## ವಿನೋದ ಸಮಯ (ಪಾಠ 12)

### ಆಟ (ಪಾಠ 12)

ಯಾರು ಅವರ ನಾಣ್ಯಗಳನ್ನು ಕೊಡಲಿಲ್ಲ?

ಒಂದು ವೃತ್ತದಲ್ಲಿ ಮಕ್ಕಳು ಕುಳಿತುಕೊಳ್ಳುವುದಕ್ಕೆ ವಿದ್ಯಾರ್ಥಿಗಳಿಗೆ ಹೇಳಿರಿ. ಉಪಾಧ್ಯಾಯರು ಒಬ್ಬ ಮಗುವನ್ನು ಆರಿಸಿಕೊಂಡು (ಪೇತ್ರನನ್ನಾಗಿ) ಆ ವೃತ್ತದ ಮಧ್ಯದಲ್ಲಿ ಕೂಡಿಸಬೇಕು. ಒಂದು ನಾಣ್ಯವನ್ನು ತೆಗೆದುಕೊಂಡು ಒಬ್ಬ ವಿದ್ಯಾರ್ಥಿಗೆ (ಅನನೀಯ) ಕೊಟ್ಟು, ಅದನ್ನು ಮಕ್ಕಳ ಹಿಂದೆ ಒಬ್ಬರಾದಮೇಲೆ ಒಬ್ಬರಿಗೆ ಗಡಿಯಾರ ತಿರುಗುವ ದಿಶೆಯಲ್ಲಿ ಕೊಡುತ್ತಾ ಹೋಗಬೇಕು ಮತ್ತು ಇನ್ನೊಂದು ನಾಣ್ಯವನ್ನು ಇನ್ನೊಂದು ಮಗುವಿಗೆ (ಸಪ್ಫೀರಳಗೆ) ಕೊಟ್ಟು, ಅದನ್ನು ಗಡಿಯಾರದ ವಿರುದ್ಧ ದಿಕ್ಕಿನಲ್ಲಿ ಒಬ್ಬರಾದ ಮೇಲೆ ಒಬ್ಬರಿಗೆ ಕೊಡುತ್ತಾ ಹೋಗಬೇಕು. ಮಕ್ಕಳು ಆ ನಾಣ್ಯಗಳನ್ನು ಕೊಡುತ್ತಿರುವಂತೆ ನಟಿಸಬಹುದು, ಅವರು ಕೊಡಬಹುದು ಅಥವಾ ಕೊಡದೇ ಕೊಡುತ್ತಿರುವಂತೆ ನಟಿಸಬಹುದು. ಪೇತ್ರನು (ಅವನು/ ಅವಳು) ಕಣ್ಣು ಮುಚ್ಚಿಕೊಳ್ಳಬೇಕೆಂದು ಉಪಾಧ್ಯಾಯರು ಹೇಳಬೇಕು. ಆ ವೃತ್ತಾಕಾರದಲ್ಲಿ ಕುಳಿತುಕೊಂಡಿರುವ ಮಕ್ಕಳನ್ನು ಸ್ಥಳಾಂತರಪಡಿಸಿರಿ, ಆ ಸಮಯದಲ್ಲೇ ಅವರಿಗೆ ಕೊಟ್ಟಿರುವ ನಾಣ್ಯಗಳನ್ನು ಬೇರೆಯವರಿಗೆ ಕೊಡಬೇಕು. ಈಗ ಉಪಾಧ್ಯಾಯರು ಪೇತ್ರನಂತೆ ಮಧ್ಯೆದಲ್ಲಿರುವ ಕುಂತಿರುವ ವಿದ್ಯಾರ್ಥಿಗೆ ಕಣ್ಣುಗಳನ್ನು ತೆರೆಯುವುದಕ್ಕೆ ಹೇಳಿರಿ ಮತ್ತು ಆ ನಾಣ್ಯವು ಯಾರ ಹತ್ತಿರವಿದೆಯೆಂದು ಕಂಡುಹಿಡಿಯಲು ತಿಳಿಸಿರಿ. ಅನನೀಯನನ್ನಾಗಲಿ ಅಥವಾ ಸಪ್ಫೀರಳನನ್ನಾಗಲಿ (ನಾಣ್ಯವನ್ನು ಹೊಂದಿಕೊಂಡಿರುವ ವಿದ್ಯಾರ್ಥಿ) ಪೇತ್ರನು ಕಂಡುಕೊಳ್ಳುವವರೆಗೂ ಆ ಆಟವು ಮುಂದೆವರಿಸಬೇಕು. ಒಂದುವೇಳೆ ನಾಣ್ಯವನ್ನು ಹಿಡಿದುಕೊಂಡ ವಿದ್ಯಾರ್ಥಿಯನ್ನು ಕಂಡುಹಿಡಿದರೆ, ಆ ವಿದ್ಯಾರ್ಥಿಯು "ಪೇತ್ರನಾಗಿ" ಆ ವೃತ್ತದ ಮಧ್ಯೆದಲ್ಲಿ ಕೂಡಿಸಬೇಕು.

### ಚರ್ಚೆ (ಪಾಠ 12)

(ಹಿರಿಯ ವಿದ್ಯಾರ್ಥಿಗಳಿಗಾಗಿ)

1. ಪ್ರತಿಯೊಬ್ಬರೂ ಯಾಕೆ ಪರಲೋಕಕ್ಕೆ ಹೋಗುವುದಿಲ್ಲ?

ಎಲ್ಲಾ ಜನರು ಪಾಪವನ್ನು ಮಾಡಿದ್ದಾರೆ, ಅವರೆಲ್ಲರು ನರಕಕ್ಕೆ ಹೋಗುತ್ತಿದ್ದಾರೆಂದು ಬೈಬಲ್ ಹೇಳುತ್ತಿದೆ. ದೇವರಿಗೆ ರೋಬೋಟ್.ಗಳು ಬೇಕಾಗಿಲ್ಲ ಮತ್ತು ಅವರು ನಮಗೆ ಸ್ವಾತಂತ್ರ್ಯವನ್ನು ಕೊಟ್ಟಿದ್ದಾರೆ. ಪ್ರತಿಯೊಬ್ಬರೂ ರಕ್ಷಿಸಲ್ಪಡಬೇಕೆಂದು ದೇವರ ಬಯಕೆಯಾಗಿದೆ, ಆದರೆ ಕೆಲವರು ತಮ್ಮ ಆಲೋಚನೆಗಳನ್ನು ಅನುಸರಿಸುವುದಕ್ಕೆ ಇಷ್ಟಪಟ್ಟಿದ್ದಾರೆ, ಅವರು ಪರಲೋಕವನ್ನಾಗಲಿ ಅಥವಾ ಯೇಸುವನ್ನಾಗಲಿ ಅಂಗೀಕರಿಸುವುದಿಲ್ಲ.


2. ಹೊರಗಡೆ ಹೋಗುವುದಕ್ಕೆ ಸಾಕಾಗುವಷ್ಟು ಯಾಕೆ ಇಲ್ಲ? (ಇತರರೊಂದಿಗೆ ಹಂಚಿಕೊಳ್ಳುವುದಕ್ಕೆ)


ಮೊಟ್ಟಮೊದಲನೇಯದು, "ಸಾಕಾಗುವಷ್ಟು" ಎನ್ನುವುದು ನಡೆಯುತ್ತಿರುವ ಗುರಿಯಾಗಿರುತ್ತದೆ, ಮತ್ತು ಪ್ರತಿಯೊಂದು ವರ್ಷವು, ಪ್ರತಿಯೊಂದು ದೇಶದಲ್ಲಿ ಅದು ಮಾರ್ಪಾಟಾಗುತ್ತಾ ಇರುತ್ತದೆ. ಎರಡನೇಯದು, ಬಡವರು ಯಾವಾಗಲು ನಮ್ಮೊಂದಿಗೆ ಇರಬೇಕೆಂದು ಯೇಸು ಹೇಳಿದ್ದಾರೆ. ಮೂರನೇಯದಾಗಿ, ನಾವು ಇತರರಿಗೆ ಕೊಡುವುದು ನಮಗೆ ಒಳ್ಳೇಯದು.


3. ಚಿಕ್ಕ ಪಾಪವು ಅಥವಾ "ಸುಳ್ಳಾಡುವುದು" ಯಾವುದನ್ನು ರೂಪಿಸುವುದು?

ಉದ್ದೇಶಗಳು ತುಂಬಾ ಪ್ರಾಮುಖ್ಯವಾದವುಗಳು. ಇತರರ ಭಾವನೆಗಳನ್ನು ಕಾಪಾಡುವುದಕ್ಕೆ ನೀವು ಸುಳ್ಳಾಡುತ್ತಿದ್ದೀರೋ ಅಥವಾ ಹಣವನ್ನು ಹೊಂದಿಕೊಳ್ಳಲು ನಿಮ್ಮನ್ನು ನೀವು ಕಾಪಾಡುಕೊಳ್ಳುತಿದ್ದೀರೋ? ಮೋಸ ಮಾಡುವುದು ದೇವರಿಗೆ ಇಷ್ಟವಿಲ್ಲ. ಅವರು ಮಾರಿರುವ ಭೂಮಿಯ ಕುರಿತಾಗಿ ಸುಳ್ಳಾಡುವುದಕ್ಕಿಂತ ಭೂಮಿಯನ್ನು ಮಾರದೇ ಇದ್ದರೂ ಚೆನ್ನಾಗಿರುತ್ತಿತ್ತು ಮತ್ತು ಮಾರಿದಾಗ ಬಂದಿರುವ ಹಣದಲ್ಲಿ ಅರ್ಧ ಹಣವು ಕೊಡದೇ ಇರಬೇಕಾಗಿತ್ತು.

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 12)







## ಲೂಕಸ್ ರವರ ಪ್ರಯೋಗ (ಪಾಠ 12)

ಪ್ರತಿಯೊಬ್ಬ ವಿದ್ಯಾರ್ಥಿ ಮೇಜಿನ ಮೇಲೆ ಇಟ್ಟಿರುವ ಕಾಗದದ ಮೇಲೆ ಒಂದೊಂದು ಗುರುತನ್ನು ಬರೆಯುವುದಕ್ಕೆ ಹೇಳಿರಿ, ಆದನಂತರ ಆ ವಿದ್ಯಾರ್ಥಿಯನ್ನು ಮುಂದಕ್ಕೆ ಚಲಿಸುವಂತೆ ಹೇಳಿ, ತನ್ನ ಒಂದು ಕಣ್ಣನ್ನು ಮುಚ್ಚಿಕೊಂಡು ಅದೇ ರೀತಿಯಾದ ಗುರುತನ್ನು ಮತ್ತೊಮ್ಮೆ ಬರೆಯುವುದಕ್ಕೆ ಹೇಳಿರಿ. (ಹೆಚ್ಚಿನ ವಿವರಗಳಿಗಾಗಿ ಯೂ ಟ್ಯೂಬ್ ನೋಡಿರಿ).

https://www.facebook.com/childrenareimportant/videos/1292637964105917/

# --[ ಕೇಸ್ 13 ]--

## ಸೂಚನೆಗಳು! (ಕ್ಲೂಸ್) (ಪಾಠ 13)

### ಸೂಚನೆ #1 ಅಂಶ (ಪಾಠ 13)

ಅನ್ಯ ದುಸ್ವಪ್ನಗಳ ಕೇಸ್

### ಸೂಚನೆ #2 ನಾಟಕ (ಪಾಠ 13)

ಕಥೆ ಹೇಳುವವರು: ಈ ಕಥೆಯ ಕಲ್ಪನಾ ಕಥೆಯಾಗಿರುತ್ತದೆ, ಆದರೆ ಅಪರಾಧಿಯನ್ನು ರಕ್ಷಿಸಲು ಕೆಲವೊಂದು ಹೆಸರುಗಳು ಮತ್ತು ಸ್ಥಳಗಳು ಮಾರ್ಪಾಟು ಮಾಡಲಾಗಿದೆ.

ಅಲೆಮಾರಿ : ನೀವು ಯಾವುದಕ್ಕಾಗಿ ಎದುರು ನೋಡುತ್ತಿದ್ದೀರಿ?

ರಹಸ್ಯ ಪರಿಶೋಧಕರು : ಈ ಎತ್ತರದ ಕುರಿತಾಗಿ ಕಾಣೆಯಾಗಿರುವ ಯೌವನಸ್ಥನ ವಿಷಯವಾಗಿ ತನಿಖೆ ಮಾಡುತ್ತಿದ್ದೇನೆ. ಇವರು ವಿಶೇಷವಾದ ಜಾಕೆಟ್.ನ್ನು ಹಾಕಿಕೊಳ್ಳಬೇಕಾಗಿತ್ತು.

ಅಲೆಮಾರಿ : ಓ... ಹೌದಾ.. ನಾನು ಆತನನ್ನು ನೋಡಿದ್ದೇನೆ, ಅವರು ಕೆಲವು ದಿನಗಳ ಹಿಂದೆ ಬಂದಿದ್ದರು.

ರಹಸ್ಯ ಪರಿಶೋಧಕರು : ಅವರು ಎಲ್ಲಿಗೆ ಹೋಗುತ್ತಿದ್ದರೋ ನಿಮಗೇನಾದರೂ ಗೊತ್ತಿದೆಯಾ?

ಅಲೆಮಾರಿ : ಅವರು ದೊಥಾನ್.ಗೆ ಹೋಗುತ್ತಿದ್ದರೆಂದು ನನಗೆ ಅನಿಸುತ್ತಿದೆ.

ರಹಸ್ಯ ಪರಿಶೋಧಕರು : ದೊಥಾನ್.ಗೆ ಯಾಕೆ?

ಅಲೆಮಾರಿ : ಸರಿ, ಅಲ್ಲಿಗೆ ಹೋಗುಗುವುದರ ಕುರಿತಾಗಿ ತನ್ನ ಸಹೋದರರೊಂದಿಗೆ ಮಾತನಾಡಿದ್ದೇನೆ, ಅವಾಗ ಅವರನ್ನು ನೋಡುವುದಕ್ಕೆ ಬಂದಿರುವಾಗ ಅವನು ಇಲ್ಲಿಗೆ ಬಂದಿದ್ದ. ಅವರು ಅಲ್ಲಿಗೆ ಹೋಗುತ್ತಿದ್ದಾರೆಂದು ನಾನು ಅವನಿಗೆ ಹೇಳಿದ್ದೆ.

ರಹಸ್ಯ ಪರಿಶೋಧಕರು : ಇಲ್ಲಿ ನೀವೇನಾದರು ಕೇಳಿದ್ದೀರಾ?

ಅಲೆಮಾರಿ : ಹೌದು, ಸಹೋದರನೆ ನಾನು ಒಂದುವೇಳೆ ಅಲ್ಲಿ ಇದ್ದಿದ್ದರೆ, ಅವರು ಇರುವ ಸ್ಥಳದ ಹತ್ತಿರಕ್ಕೆ ನಾನು ಹೋಗುತ್ತಿರಲಿಲ್ಲ. ಆತನೊಂದಿಗೆ ಅವರು ತುಂಬಾ ಕೋಪದಿಂದ ಇದ್ದರು.

ರಹಸ್ಯ ಪರಿಶೋಧಕರು : ಆಸಕ್ತಿಕರವಾಗಿದೆ, ಯಾಕೆಂದು ನೀವು ಏನಾದರೂ ಕೇಳಿಸಿಕೊಂಡಿದ್ದೀರೋ?

ಅಲೆಮಾರಿ : ಒಳ್ಳೇದು ಇನ್ನೂ ಸ್ಪಷ್ಟವಾಗಿದೆ, ಅವನು ಅವರ ಕೆಟ್ಟ ನಡೆತೆಯ ಕುರಿತಾಗಿ ಹೇಳಿದ್ದನು ಮತ್ತು ಅವರು ಮೆಲ್ಲಕೆ ಒಬ್ಬರಲ್ಲೊಬ್ಬರು ಮಾತನಾಡುತ್ತಿದ್ದರು. ಅದು ನನಗೆ ಸರಿಯಾಗಿ ಕೇಳಿಸಿಕೊಂಡಿಲ್ಲ.

ರಹಸ್ಯ ಪರಿಶೋಧಕರು : ಅದು ನಿನಗೆ ಕೇಳಿಸಿಲ್ಲವೋ ಅಥವಾ ಅದನ್ನು ನೀನು ಕೇಳಿಸಿಕೊಳ್ಳುವುದಕ್ಕೆ ಇಷ್ಟವಿಲ್ಲವೋ?

ಅಲೆಮಾರಿ : ಸ್ವಲ್ಪ ಸ್ವಲ್ಪ ಕೇಳಿಸುತ್ತಿತ್ತು, ಆದರೆ ಅದು ನನಗೆ ಸರಿಯಾಗಿ ಅರ್ಥವಾಗಲಿಲ್ಲ, ಅದರ ಕುರಿತಾಗಿ ತನ್ನ ಎಲ್ಲಾ ಸಹೋದರರು ತುಂಬಾ ಕುತೂಹಲದಿಂದ ಇದ್ದರು. ದಾನು ಇದರ ಕುರಿತಾಗಿ ಸಿಟ್ಟುಗೊಳ್ಳುತ್ತಿದ್ದನು, ಆದರೆ ಬೆನ್ಯಾಮಿನನು, ತನ್ನ ಹೆಸರು ಇದೇ ಇರಬೇಕನಿಸುತ್ತಿದೆ. ತುಂಬಾ ಜಾಸ್ತಿ ಸಿಟ್ಟಿನಲ್ಲಿದ್ದನು.

ರಹಸ್ಯ ಪರಿಶೋಧಕರು : ತನ್ನ ಸಹೋದರರು ಎಲ್ಲಿಗೆ ಹೋಗಿದ್ದಾರೆಂದು ಅವನಿಗೇನಾದರೂ ನೀವು ಹೇಳಿದ್ದೀರಾ?

ಅಲೆಮಾರಿ : ಒಳ್ಳೇಯದು, ಅವನು ದೊಥಾನ್.ಗೆ ಹೋಗಿರಬೇಕೆಂದು ನಾನು ಅಂದುಕೊಂಡೆ, ಅವರು ನೆಮ್ಮದಿಯಿಂದ ಇರಬಹುದು, ಮತ್ತು ಸುರಕ್ಷತೆಯಿಂದ ಇರುತ್ತಾರೆ.

ರಹಸ್ಯ ಪರಿಶೋಧಕರು : ಇಲ್ಲ, ಆ ವಿಷಯದಲ್ಲಿ ನನಗೆ ನಿಶ್ಚಯವಿಲ್ಲ.

ಅಲೆಮಾರಿ : ಯಾಕೆ, ಏನಾದರು ಘಟನೆ ನಡೆದಿತ್ತಾ?

ರಹಸ್ಯ ಪರಿಶೋಧಕರು : ಹೌದು, ಅವನು ಕಾಣೆಯಾಗಿದ್ದಾನೆ ಮತ್ತು ಈ ಸಮಯಕ್ಕೆ ಅವನು ಸತ್ತಿರಬಹುದು. ಅವನು ಕಾಣೆಯಾಗುವುದಕ್ಕೆ ಮುಂಚಿತವಾಗಿ ತನ್ನ ತಂದೆಯು ನನ್ನನ್ನು ಕೆಲಸಕ್ಕೆ ಇಟ್ಟುಕೊಂಡಿದ್ದಾರೆ. ಸಾಧ್ಯವಾದರೆ ತನ್ನ ಎಲ್ಲಾವುಗಳನ್ನು ಸೇಕರಿಸಬೇಕು.

ಅಲೆಮಾರಿ : ಓ...ಚಿಕ್ಕ ಮಗು, ತಪ್ಪಿಹೋಗಿ ಬಂದಂತೆ ಕಾಣಿಸಿಕೊಂಡನು. ಅವನಿಗೆ ಸಹಾಯ ಮಾಡುವುದಕ್ಕೆ ನಾನು ತುಂಬಾ ಪ್ರಯತ್ನಪಟ್ಟೆ, ನನಗೆ ಗೊತ್ತಿಲ್ಲ.





## 3 ಸೂಚನೆ #3 ವಸ್ತು (ಪಾಠ 13)

ಸೂಚನೆಯಾಗಿ ಈ ಭೌತಿಕ ವಸ್ತುವನ್ನು ನಿಮ್ಮ ತರಗತಿಗೆ ತೆಗೆದುಕೊಂಡು ಬನ್ನಿರಿ : ತಲೆದಿಂಬು

## 4 ಸೂಚನೆ #4 ಪುರಾತನ ವಸ್ತು ಶಾಸ್ತ್ರ (ಪಾಠ 13)

ಗೋಧಿ ಬೆಳೆಯನ್ನು ಕೈಗಳಿಂದ ಕೊಯ್ಯುವ ಪದ್ಧತಿ ಪ್ರಪಂಚದಲ್ಲಿ ಅನೇಕ ಪ್ರದೇಶಗಳಿವೆ. (ರಹಸ್ಯ : ಯೋಸೇಫನಿಗೆ ಗೋಧಿ ಸಿವುಡುಗಳು ತನ್ನ ಸಿವುಡಿಗೆ ಬಂದು ಅಡ್ಡಬಿದ್ದಿರುವ ಕನಸು ಈ ಮೇಲಿನಂತೆ ಕಾಣಿಸಿಕೊಳ್ಳುವುದು.

## 5 ಸೂಚನೆ #5 ಬೈಬಲ್ ಸನ್ನಿವೇಶ (ಪಾಠ 13)



ರಹಸ್ಯ: ಯೋಸೇಫನ ಕನಸು; ಸೂರ್ಯನು ಅವನ ತಂದೆ, ಚಂದ್ರನು ಅವನ ತಾಯಿ ಮತ್ತು ತನ್ನ ಸಹೋದರರು 10 ನಕ್ಷತ್ರಗಳು.

# ಕೇಸ್ ಪರಿಷ್ಕರಿಸಲಾಗಿದೆ! (ಪಾಠ 13)

## ಬೈಬಲ್ ಕಥೆ (ಪಾಠ 13)

ಯೋಸೇಫನು ಮತ್ತು ತನ್ನ ಕನಸುಗಳು

ಬೈಬಲ್ ವಾಕ್ಯಭಾಗ: ಆದಿ. 37:1-11.



ಯೋಸೇಫನು ಕುರುಬನಾಗಿರುವ ಯಾಕೊಬನ ಚಿಕ್ಕ ಮಗ. ತನ್ನ ಎಲ್ಲಾ ಹಿರಿಯ ಸಹೋದರರು ತನ್ನ ದ್ವೇಷಿಸಿದ್ದರು. ಯಾಕಂದರೆ ತನ್ನ ತಂದೆ ಇತರ ಎಲ್ಲಾ ಮಕ್ಕಳಗಿಂತಲೂ ತನ್ನನ್ನು ಹೆಚ್ಚಾಗಿ ಪ್ರೀತಿಸಿದ್ದನು. ಯಾಕೊಬನು ವೃದ್ಧ ವಯಸ್ಸಿನಲ್ಲಿರುವಾಗ ಯೋಸೇಫನು ಜನಿಸಿದ್ದನು. ಯೋಸೇಫನು ಒಂದು ಪ್ರತ್ಯೇಕವಾದ ಆಶೀರ್ವಾದವೆಂದು ಅಂದುಕೊಂಡಿದ್ದನು, ಆದ್ದರಿಂದ ಯಾಕೋಬನು ಅವನ ಮೇಲೆ ತುಂಬಾ ಹೆಚ್ಚಾದ ಪ್ರೀತಿಯನ್ನಿಟ್ಟುಕೊಂಡಿದ್ದನು. ಯೋಸೇಫನು ಯಾಕೋಬನ ಪ್ರೀತಿಯುಳ್ಳ ಹೆಂಡತಿಗೆ ಮಗನಾಗಿದ್ದನು. ಯಾಕೋಬನು ಯೋಸೇಫನಿಗೆ ತುಂಬಾ ಹೆಚ್ಚಿನ ಬೆಲೆಯುಳ್ಳ ಬಣ್ಣ ಬಣ್ಣದ ಅಂಗಿಯನ್ನು ಮಾಡಿಕೊಟ್ಟಿದ್ದನು. ಇದರಿಂದ ತನ್ನ ಸಹೋದರರಿಗೆ ಅಸೂಯೆಯು ಹುಟ್ಟಿತು. ಅವರು ಯೋಸೇಫನ ಕುರಿತಾಗಿ ಒಂದು ದಯೆಯುಳ್ಳ ಮಾತನ್ನು ಹೇಳುತ್ತಿರಲಿಲ್ಲ. ಆದನಂತರ ದೇವರು ಯೋಸೇಫನಿಗೆ ಎರಡು ವಿಭಿನ್ನವಾದ ಕನಸುಗಳನ್ನು ಕೊಟ್ಟನು. ಅದರಲ್ಲಿ ಮೊದಲನೇಯದು, ತಾನು ಮತ್ತು ತನ್ನ ಸಹೋದರರು ಒಂದು ಹೊಲದಲ್ಲಿ ಸಿವುಡುಗಳನ್ನು ಕಟ್ಟುತ್ತಿದ್ದರು. ಇದ್ದಕ್ಕಿದ್ದಂತೆ ತನ್ನ ಸಿವುಡು ಎದ್ದು ನಿಂತುಕೊಲ್ಲಿತು, ತನ್ನ ಸಹೋದರರ ಸಿವುಡುಗಳು ತನ್ನ ಸಿವುಡಿಗೆ ಅಡ್ಡಬಿದ್ದವು. ಎರಡನೇ ಕನಸು ಏನಂದರೆ, ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು. ತನ್ನ ತಂದೆಯು ಸೂರ್ಯನಾಗಿದ್ದನು, ತನ್ನ ತಾಯಿಯು ಚಂದ್ರ ಮತ್ತು ನಕ್ಷತ್ರಗಳೆಲ್ಲವೂ ತನ್ನ ಸಹೋದರರು. ಅವನ ಮುಂದೆ ಅವರೆಲ್ಲರು ಅಡ್ಡ ಬಿದ್ದಿದ್ದರು. ಈ ಎರಡು ಕನಸುಗಳನ್ನು ತನ್ನ ಸಹೋದರರಿಗೆ ಮತ್ತು ತಂದೆಗೆ ಹೇಳಿದನು. ಆಗ ಅವರೆಲ್ಲರು ಸಿಟ್ಟುಗೊಂಡರು. ಅವರು ದ್ವೇಷಿಸಿದ ತಮ್ಮನಿಗೆ ಒಂದಾನೊಂದು ದಿನ ಅಡ್ಡ ಬೀಳಬೇಕೆನ್ನುವ ವಿಷಯವನ್ನು ನಂಬುವುದಕ್ಕೆ ಹಿರಿಯ ಸಹೋದರರೆಲ್ಲರೂ ತಿರಸ್ಕಾರ ಮಾಡಿದರು. ಯಾಕೋಬನು ತನ್ನ ಪ್ರೀತಿಯ ಮಗನನ್ನು ಗದರಿಸಿದನು, ಅಷ್ಟೇ ಅಲ್ಲದೇ, ತಂದೆಯು ಮತ್ತು ತನ್ನ ಹೆಂಡತಿ ಒಂದಾನೊಂದು ದಿನ ತನ್ನ ಮಗನಿಗೆ ಅಡ್ಡ ಬೀಳಬೇಕೆನ್ನುವ ವಿಷಯವನ್ನು ನಂಬಲು ಇಷ್ಟವಿರಲಿಲ್ಲ. ಆದರೆ ಯಾಕೋಬನು ತನ್ನ ಮನಸ್ಸಿನಲ್ಲಿ ಆ ವಿಷಯವನ್ನು ಬಚ್ಚಿಟ್ಟು ಕೊಂಡಿದ್ದನು. ಅನೇಕ ವರ್ಷಗಳಾದನಂತರ, ಎಲ್ಲಾ ಕನಸುಗಳು ನಿಜವಾದವು ಮತ್ತು ಭಯಂಕರವಾದ ಬರಗಾಲದಿಂದ ಅನೇಕಮಂದಿಯನ್ನು ರಕ್ಷಿಸಲು ದೇವರು ಯೋಸೇಫನನ್ನು ಐಗುಪ್ತ ದೇಶದಲ್ಲಿ ಒಬ್ಬ ನಾಯಕನನ್ನಾಗಿ ಉಪಯೋಗಿಸಿಕೊಂಡನು.

## ಅನ್ವಯ (ಪಾಠ 13)

ದೇವರು ನನ್ನ ಸ್ನೇಹಿತರಿಗೆ ಮತ್ತು ನನ್ನ ಕುಟುಂಬಕ್ಕೆ ವಿಭಿನ್ನವಾದ ವರಗಳನ್ನು ಕೊಟ್ಟಿದ್ದಾನೆಂದು ನನಗೆ ಗೊತ್ತು.

## ಕಂಠಪಾಠ ವಾಕ್ಯ (ಪಾಠ 13)

"ಆದರೆ ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನು ತನಗೆ ಸರಿಯಾಗಿ ತೋಚಿದ ಪ್ರಕಾರ ದೇಹದೊಳಗೆ ಇಟ್ಟಿದ್ದಾನೆ. ಅವೆಲ್ಲವೂ ಒಂದೇ ಅಂಗವಾಗಿದ್ದರೆ ದೇಹವೆಲ್ಲಿರುವುದು?..." 1 ಕೊರಿಂಥ.12:18-19

### ಮನೆಗೆಲಸ (ಪಾಠ 13)

ನಿಮಗೆ ಗೊತ್ತಿರುವ ಮೂವರನ್ನು ಆರಿಸಿಕೊಂಡು, ನಿಮಗೆ ವಿಭಿನ್ನವಾಗಿ ದೇವರು ಅವರಿಗೆ ಕೊಟ್ಟ ವರಗಳನ್ನು, ತಲಾಂತುಗಳನ್ನೂ, ಸಾಮರ್ಥ್ಯಗಳನ್ನು ಅಥವಾ ಬಲಗಳನ್ನು ಹೇಗೆ ಕೊಟ್ಟಿದ್ದಾರೆಂದು ಪಟ್ಟಿ ಮಾಡಿರಿ. ಆ ವರಗಳು, ತಲಾಂತುಗಳು ಮತ್ತು ಸಾಮರ್ಥ್ಯಗಳ ಕುರಿತಾಗಿ ನೀವು ಅಸೂಯೆ ಪಡದಂತೆ ದೇವರ ಸಹಾಯಕ್ಕಾಗಿ ಬೇಡಿಕೊಳ್ಳಿರಿ.

### ದೇವರ ಡಿ.ಎನ್.ಎ (ಪಾಠ 13)




ಈ ಪಾಠದಿಂದ ನಾವು ದೇವರ ಕುರಿತಾಗಿ ನಾವು ಏನನ್ನು ಕಲಿತುಕೊಳ್ಳುತ್ತಿದ್ದೀವಿ? ಕೆಲವೊಂದುಸಲ ದೇವರು ತನ್ನ ಭವಿಷ್ಯತ್ತಿನ ಪ್ರಣಾಳಿಕೆಯನ್ನು ಜನರಿಗೆ ಮುಂಚಿತವಾಗಿಯೇ ತೋರಿಸುವನು.



## ವಿನೋದ ಸಮಯ (ಪಾಠ 13)

### ಆಟ (ಪಾಠ 13)

ಕನಸುಗಳ ಆಟ

ಉಪಾಧ್ಯಾಯರು ತರಗತಿಯ ಮಕ್ಕಳನ್ನು ಎರಡು ಗುಂಪುಗಳಾಗಿ ಮಾಡುವುದರ ಮೂಲಕ ಈ ಆಟವನ್ನು ಆರಂಭಿಸುತ್ತಾರೆ : ಧಾನ್ಯ ಮತ್ತು ನಕ್ಷತ್ರಗಳ ಸಿವುಡುಗಳು. ಉಪಾಧ್ಯಾಯರು ತರಗತಿ ಕೊಠಡಿಯ ಕೊನೆಯ ಭಾಗದಲ್ಲಿ ಒಂದು ಗೆರೆಯನ್ನು ಹಾಕುತ್ತಾರೆ. ವಿದ್ಯಾರ್ಥಿಗಳು ಆ ಗೆರೆಯವರೆಗೆ ಓಡಬಹುದು, ಆ ಗೆರೆಯನ್ನು ಮುಟ್ಟಿದ ನಂತರ ಯಾರು ಕೂಡ ಯಾರನ್ನು ಟ್ಯಾಗ್ ಮಾಡಬಾರದು. ಉಪಾಧ್ಯಾಯರು ಕಥೆಗಳನ್ನು ಹೇಳುತ್ತಾರೆ ಮತ್ತು ಎರಡು ಗುಂಪುಗಳು ಅವರವರ ಪದವನ್ನು ಕೇಳಿಸಿಕೊಳ್ಳುತ್ತಾರೆ (ಉದಾಹರಣೆಗೆ: ಧ್ಯಾನ್ಯ ಅಥವಾ ನಕ್ಷತ್ರಗಳು) ಅವರು ಸುರಕ್ಷಿತವಾಗಿ ಓಡುತ್ತಾರೆ. ಇನ್ನೊಂದು ಗುಂಪಿನವರು ಅವರು ಸುರಕ್ಷಿತವಾಗಿ ಸೇರುವುದಕ್ಕೆ ಮುಂಚಿತವಾಗಿ ವಿದ್ಯಾರ್ಥಿಯನ್ನು ಟ್ಯಾಗ್ ಮಾಡುವುದಕ್ಕೆ ಪ್ರಯತ್ನಿಸುತ್ತಾರೆ. ಟ್ಯಾಗ್ ಆಗಿರುವ ವಿದ್ಯಾರ್ಥಿ/ ವಿದ್ಯಾರ್ಥಿನಿ ತಪ್ಪದೇ ಟ್ಯಾಗ್ ಮಾಡಿದವರ ಗುಂಪಿನಲ್ಲಿ ಸೇರಬೇಕು. 15 ನಿಮಿಷಗಳ ಆಟದಲ್ಲಿ ಯಾರ ಕಡೆಗೆ ಹೆಚ್ಚು ಜನರಿರುತ್ತಾರೋ ಅವರೇ ಈ ಆಟದಲ್ಲಿ ಗೆಲ್ಲುತ್ತಾರೆ. ಸೋತು ಹೋಗಿರುವ ಗುಂಪಿನವರು ಗೆದ್ದವರ ಗುಂಪಿಗೆ ಅಡ್ಡ ಬೀಳಬೇಕು (ಇದು ಬೈಬಲ್ ಕಥೆಯನ್ನು ಜ್ಞಾಪಕ ಮಾಡಿಕೊಳ್ಳುವುದಕ್ಕೆ ಮಾತ್ರ ಮಾಡಬೇಕು).

### ಚರ್ಚೆ (ಪಾಠ 13)

(ಹಿರಿಯ ವಿದ್ಯಾರ್ಥಿಗಳಿಗಾಗಿ)

1. ದೇವರ ಕುರಿತಾಗಿ ಇತರರಿಗೆ ನಾನು ಹೇಳಬೇಕೋ?

ಕ್ರೈಸ್ತರಾಗಿರುವ ನಾವು ದೇವರ ಕುರಿತಾಗಿ ಹೇಳುವುದಕ್ಕೆ ಸಿದ್ಧತೆಯಿಂದ ಇರಬೇಕು. "ಅವರ ಬೆದರಿಸುವಿಕೆಗೆ ಹೆದರದೆ ಕಳವಳಪಡದೆ ಕ್ರಿಸ್ತನನ್ನು ಕರ್ತನೆಂದು ನಿಮ್ಮ ಹೃದಯಗಳಲ್ಲಿ ಪ್ರತಿಷ್ಠೆಪಡಿಸಿರಿ. ನಿಮ್ಮಲ್ಲಿರುವ ನಿರೀಕ್ಷೆಗೆ ಆಧಾರವೇನೆಂದು ಕೇಳುವವರೆಲ್ಲರಿಗೆ ಉತ್ತರ ಹೇಳುವುದಕ್ಕೆ ಯಾವಾಗಲೂ ಸಿದ್ಧವಾಗಿರಿ;.." ಎಂದು 1 ಪೇತ್ರ.3:15 ಹೇಳುತ್ತಿದೆ. "...ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ;..." ಎಂದು ಮತ್ತಾಯ.28:19-20 ವಚನಗಳು ಹೇಳುತ್ತಿವೆ. ನಾವೊಬ್ಬರೇ ಇದನ್ನು ಮಾಡಬೇಕಾದ ಅವಶ್ಯವಿಲ್ಲ, ಇದಕ್ಕೆ ದೇವರು ನಮಗೆ ಸಹಾಯ ಮಾಡುತ್ತಾರೆ. ಆತನ ಸಾಕ್ಷಿಗಳಾಗಿ ಇರುವುದಕ್ಕೆ ಪವಿತ್ರಾತ್ಮ ದೇವರು ನಮಗೆ ಶಕ್ತಿಯನ್ನು ಅನುಗ್ರಹಿಸುವನು (ಅಪೊ.ಕೃತ್ಯ.1:8). ಕೆಲವೊಂದು ಜನರು ಇತರರಿಗೆ ಹೇಳುತ್ತಾರೆ, ಯಾಕಂದರೆ ಅದು ಅವರಿಗೆ ದೇವರು ಕೊಟ್ಟ ಪ್ರತ್ಯೇಕವಾದ ವರ ಮತ್ತು ಆತನ ಕರೆಯು ಆಗಿರುತ್ತದೆ (ಎಫೆಸ.4:11, ಸುವಾರ್ತೀಕರ ಕರೆಯನ್ನು ಮತ್ತು ವರವನ್ನು ಪಟ್ಟಿ ಮಾಡಿರಿ.) ಸುವಾರ್ತೀಕರಣದ ವರವು ವಿದ್ಯಾರ್ಥಿಗಳಿಗೆ ಇಲ್ಲದಿರುವಾಗ, ಅವರು ತಮ್ಮ ಶಾಲೆಯ ಹತ್ತಿರ ಭೇಟಿಯಾಗುವ ಪ್ರತಿಯೊಬ್ಬರಿಗೂ ಮತ್ತು ನೆರೆಹೊರೆಯವರಿಗೂ ದೇವರ

ಕುರಿತಾಗಿ ಹೇಳಬೇಕೆಂದರೆ, ನಾವು ಸುವಾರ್ತಿಕರಾಗಿ ಇರಬೇಕಲ್ಲವೋ ಎನ್ನುವ ಆಲೋಚನೆಯಿಂದ ಅವರು ಇರಬೇಕಾದ ಅವಶ್ಯವಿಲ್ಲ. ಏನೇಯಾಗಲಿ, ನಾವೆಲ್ಲರು ದೇವರ ಕುರಿತಾಗಿ ಇತರರಿಗೆ ಹೇಳುವುದಕ್ಕೆ ಇಷ್ಟಪೂರ್ವಕವಾಗಿರಬೇಕು.

2. ನಿನ್ನೊಂದಿಗೆ ನಿನ್ನ ಸ್ನೇಹಿತನು ಯಾವ ಯಾವ ವಿಧಾನದಲ್ಲಿ ಮಾತನಾಡುತ್ತಾನೆ? ದೇವರಿಂದ ಬರುವ "ಕೂಗು" ಯಾವರೀತಿ ಇರುತ್ತದೆ?

ನಾವು ಸ್ನೇಹಿತರೊಂದಿಗೆ ಫೇಸ್ ಬುಕ್, ಚಾಟಿಂಗ್, ಟ್ವಿಟರ್, ಸೆಲ್ ಫೋನ್ ಕಾಲ್ ಗಳಲ್ಲಿ ಮತ್ತು ಮುಖಾಮುಖಿಯಾಗಿ ಸಂಭಾಷಣೆ ಮಾಡುತ್ತೇವೆ. ರಹಸ್ಯವಾಗಿ ನೋಡುವುದಕ್ಕೆ ಅಥವಾ ಜನರೊಂದಿಗೆ ಹಂಚಿಕೊಳ್ಳುವುದಕ್ಕೆ ದೇವರ ಸಂದೇಶಗಳು ಇವೆಯೋ? ದೇವರು ಕೆಲವೊಂದುಸಲ ನೀನು "ಹೋಗು" ಎಂದಾಗಲಿ ಅಥವಾ "ಅಲ್ಲಿರು" ಎಂದಾಗಲಿ ಅಥವಾ "ಸಹಾಯ" ಮಾಡು ಎಂದಾಗಲಿ ಹೇಳುತ್ತಾರೆ. ಕೆಲವೊಂದುಸಲ ದೇವರು ಒಂದೇ ಒಂದು ಪದವನ್ನು ನಿರ್ದೇಶನ ಕೊಡುತ್ತಾರೆ. ಆತನೊಂದಿಗೆ ಕೇಳಿರುವ "ಕೂಗನ್ನು" ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದಕ್ಕೆ ಆಗದಿದ್ದರೂ ನಾವು ಅದಕ್ಕೆ ಒಳಗಾಗುತ್ತೇವೆ.


3. ಕನಸುಗಳು ಎಷ್ಟರಮಟ್ಟಿಗೆ ನಿಜ? ಜನರ ತಮ್ಮ ಭವಿಷ್ಯವು ಏನಾಗಿರುತ್ತದೆಯೆಂದು ಭವಿಷ್ಯವನ್ನು ಹೇಳುವವರಿಗೆ ಯಾಕೆ ದುಡ್ಡನ್ನು ಖರ್ಚು ಮಾಡುತ್ತಾರೆ?


ಮಕ್ಕಳು ತಮ್ಮ ಕನಸುಗಳ ವಿಷಯವಾಗಿ ಪ್ರತಿದಿನ ಬೆಳಗ್ಗೆ ಮಾತನಾಡಿಕೊಳ್ಳುವುದಕ್ಕೆ ಇಷ್ಟಪಡುತ್ತಾರೆ. ಹಂಚಿಕೊಳ್ಳುವುದಕ್ಕೆ ಸಮಯವನ್ನು ಕೊಡಿರಿ. ಅವರ ಕನಸುಗಳಿಗೆ ಅಷ್ಟು ಅರ್ಥವಿಲ್ಲವೆಂದು ಅವರು ತಿಳಿದುಕೊಳ್ಳುತ್ತಾರೆ, ಅವು ನನಸಾಗುವುದು ಅಸಾಧ್ಯವೆಂದು ತಿಳಿಯುತ್ತಾರೆ. ಅವು ಸ್ವಲ್ಪ ಸ್ವಲ್ಪ ಟಿವಿ ಕಾರ್ಯಕ್ರಮದ ಕುರಿತಾಗಿ ಅಥವಾ ನಿನ್ನೆ ರಾತ್ರಿಯಲ್ಲಿ ನೋಡಿದ ಸಿನಿಮಾ ಕುರಿತಾಗಿಯು ಇರುತ್ತವೆ.




ದೇವರು ಸ್ವಲ್ಪ ಕಾಲ ಕನಸುಗಳನ್ನು ಉಪಯೋಗಿಸಿಕೊಂಡಿದ್ದರೂ, ಅದು ಯಾವಾಗೋ ಒಂದುಸಲ ಉಪಯೋಗಿಸಿಕೊಂಡಿದ್ದರು. ಕೆಲವೊಂದುಸಲ ದೇವರು ಕನಸುಗಳಲ್ಲಿ ನಮ್ಮೊಂದಿಗೆ ಮಾತನಾಡಬಹುದು, ಆದರೆ ಅವು ನಮ್ಮನ್ನು ತಪ್ಪು ಮಾರ್ಗಕ್ಕೆ ನಡೆಸಬಹುದು. ಭವಿಷ್ಯವಾಣಿ ಹೇಳುವವರು ನಂಬಿಗಸ್ತರಲ್ಲ. "...ಇಂಥ ಕೆಲಸಗಳನ್ನು ನಡಿಸುವವರು ಯೆಹೋವನಿಗೆ ಅಸಹ್ಯರಾಗಿದ್ದಾರೆ...." ಎಂದು ಧರ್ಮೋ.18:10-12 ರಲ್ಲಿ ನೋಡಬಹುದು. ಕಣಿ ಹೇಳುವವರ ಕುರಿತಾಗಿ ದೇವರು ತನ್ನ ಜನರಿಗೆ ಎಚ್ಚರಿಕೆ ನೀಡಿದ್ದಾರೆ. ಯಾಕಂದರೆ ಜನರು ತಮ್ಮ ಭವಿಷ್ಯದ ಕುರಿತಾಗಿ ದೇವರನ್ನು ನಂಬುವುದರ ಬದಲಾಗಿ, ತಾವು ಭವಿಷ್ಯತ್ ಹೇಗಿರುತ್ತದೆ ಎಂದು ತಿಳಿದುಕೊಳ್ಳುವುದಕ್ಕೆ ಇಷ್ಟಪಡುತ್ತಾರೆಂದು ಆತನಿಗೆ ಚೆನ್ನಾಗಿ ಗೊತ್ತು. ದೇವರು ತನ್ನ ಜನರು ತನ್ನನ್ನೇ ನಂಬಬೇಕೆಂದು ಬಯಸುತ್ತಿದ್ದಾರೆ!

## ವಿದ್ಯಾರ್ಥಿ ಪುಟಗಳಿಗೆ ಉತ್ತರಗಳು (ಪಾಠ 13)





## ಲೂಕಸ್ ರವರ ಪ್ರಯೋಗ (ಪಾಠ 13)

ಪ್ರತಿ ವಿದ್ಯಾರ್ಥಿ ತನ್ನ ಕಾಲನ್ನು ಎತ್ತುತ್ತಾ ಮತ್ತು ಅದನ್ನು ಗಡಿಯಾರ ಮುಳ್ಳುಗಳು ತಿರುಗುವಂತೆ ತಿರಿಗಿಸುತ್ತಾ ಇರುವಾಗ ಒಂದು ಕಾಗದದ ತುಂಡಿನ ಮೇಲೆ ತನ್ನ ಹೆಸರನ್ನು ಬರೆಯಲು ಹೇಳಿರಿ. (ಯೂ ಟ್ಯೂಬ್.ನಲ್ಲಿ ಇನ್ನೂ ಹೆಚ್ಚಿನ ವಿಷಯಗಳಿಗಾಗಿ ನೋಡಿರಿ).
https://www.facebook.com/childrenareimportant/videos/1293723920663988/